ಸಂಪುಟ: 03 ಸಂಚಿಕೆ: 273 ದಿನಾಂಕ: 11-09-2026 ಶುಕ್ರವಾರ ಪುಟ: 6 ಬೆಲೆ: 2.00ರೂ.

ಸಂಪಾದಕರು, ಮಾಲೀಕರು: ರಾಧಿಕಾ ಎ.ಆರ್.

RNI:KARKAN/2023/88508, Postal Reg No:L2/RNP-1287/TMR/2025-27

# ಕರ್ನಾಟಕ ಸಕ್ಸಸ್ ನಂ 1

KARNATAKA SUCCESS NO1 Kannada Daily
Email: radhikaarno1@gmail.com Ph: 9380988530

ಕನ್ನಡ ದಿನಪತ್ರಿಕೆ

ಇದು ಸ್ವಾಭಿಮಾನಿಗಳ ಧ್ವನಿ

* ತುಮಕೂರು । ಬೆಂಗಳೂರು ನಗರ । ಬೆಂಗಳೂರು ಗ್ರಾಮಾಂತರ । ಚಿಕ್ಕಬಳ್ಳಾಪುರ । ಹಾವೇರಿ । ಮೈಸೂರು । ಮಂಡ್ಯ । ರಾಮನಗರ । ಚಿತ್ರದುರ್ಗ। ದಾವಣಗೆರೆ । ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ...



## ದಲಿತರ ಅನುದಾನ ಅನ್ಯ ಯೋಜನೆಗಳಿಗೆ ಬಳಕೆ: ಡಾ ಡಾ.ಎನ್.ಮೂರ್ತಿ

ತುಮಕೂರು:ಕರ್ನಾಟಕದಲ್ಲಿ ಕಳೆದ 12 ವರ್ಷಗಳಿಂದ ಅಧಿಕಾರ ನಡೆಸಿದ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಸರಕಾರಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಎಸ್.ಸಿಎಸ್‌ಪಿ/ಟಿಎಸ್ಪಿ) ಅರ್ಥಿಕ, ಸಾಮಾ ಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೆಂದು ಕಾಯ್ದಿರಿಸಿದ ಸುಮಾರು ರೂ 3.84ಲಕ್ಷ ಕೋಟಿ ಅನುದಾನದಲ್ಲಿ ಶೇ.80ರಷ್ಟು ಹಣವನ್ನು ಬೇರೆ ಯೋಜನೆಗಳಿಗೆ ಬಳಸಿಕೊಂಡು ದಲಿತರಿಗೆ ಅನ್ಯಾಯವೆಸಗಿದೆ ಎಂದು ಆರ್.ಪಿ.ಐ ರಾಷ್ಟ್ರೀಯ ಅಧ್ಯಕ್ಷ ಹಾಗೂ ದಸಂಸ ರಾಜ್ಯಾಧ್ಯಕ್ಷ ಡಾ.ಎನ್.ಮೂರ್ತಿ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿಂದು ಮಾತನಾಡಿದ ಅವರು, ರಾಜ್ಯ ಸರಕಾರಗಳ ಈ ದಲಿತ ವಿರೋಧಿ ನೀತಿ ಹಾಗೂ ಅನ್ಯಾಯವನ್ನು ಖಂಡಿಸಿ ರಾಜ್ಯಾದ್ಯಂತ ಜನಜಾಗೃತಿ ಅಭಿಯಾನವನ್ನು ನಡೆಸಲು ತೀರ್ಮಾನಿಸಲಾಗಿದ್ದು,ಈ ಹೋರಾಟವನ್ನು ತುಮಕೂರು ಜಿಲ್ಲೆಯಿಂದಲೇ ಆರಂಭಿಸಲಾಗುತ್ತಿದೆ ಎಂದರು.

ಬಿಜೆಪಿ ಸರಕಾರ 19 ಸಾವಿರ ಕೋಟಿ ರೂಗಳಿಗೆ ರಸ್ತೆ,ಒಳಚರಂಡಿ, ಕಟ್ಟಡ ನಿರ್ಮಾಣದಂತಹ




ಕೆಲಸಗಳಿಗೆ ಬಳಕೆ ಮಾಡಿಕೊಂಡರೆ,ಸಿದ್ದರಾವ ುಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರವು ಕಳೆದ ಮೂರು ವರ್ಷಗಳಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆಯಡಿ ದಲಿತರ ಅಭಿವೃದ್ಧಿಗೆ ಬಳಕೆಯಾಗಬೇಕಿದ್ದ 54,000 ಕೋಟಿಗೂ ಹೆಚ್ಚಿನ ಅನುದಾನವನ್ನು ಐದು ಗ್ಯಾರಂಟಿ ಯೋಜನೆಗಳಿಗೆ ಅಕ್ರಮವಾಗಿ ಬಳಸಿಕೊಂಡು ಅನ್ಯಾಯವೆಗಿಸಿದೆ.ಸಾಮಾಜಿಕ ನ್ಯಾಯದ ಪರ ಎನ್ನುವುದಕ್ಕೆ ಸಿದ್ದರಾಮಯ್ಯ ನೈತಿಕತೆ ಇದಯೇ ಎಂದು ಡಾ.ಎನ್.ಮೂರ್ತಿ ಪ್ರಶ್ನಿಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡವದವರ ಬಡತನ ನಿರ್ಮೂಲನೆ,ಉದ್ಯೋಗ ಸೃಷ್ಟಿ ಮತ್ತು ಕೌಶಲ್ಯಾಭಿವೃದ್ಧಿಗೆ ವಿನಿಯೋಗಿಸಬೇಕಾದ ಹಣವನ್ನು ರಸ್ತೆ ಕಾಮಗಾರಿ, ಚರಂಡಿ, ಸ್ವಚ್ಛ ಭಾರತ, ಕಟ್ಟಡ ನಿರ್ಮಾಣ ಹಾಗೂ ಹುಲಿ ಸಂರಕ್ಷಣೆಯಂತಹ ಸಾಮಾನ್ಯ ಯೋಜನೆಗಳಿಗೆ ಬಳಸಿ ಕಾಯ್ದೆಯ ತೀವ್ರ ಉಲ್ಲಂಘನೆ ಮಾಡಲಾಗಿದೆ.ಇದರ ಫಲ ವಾಗಿ ವಿದ್ಯಾರ್ಥಿವೇತನ, ಗಂಗಕಲ್ಯಾಣ ಸೇರಿದಂತೆ ಬಹುತೇಕ ಯೋಜನೆಗಳಿಗೆ ಕುತ್ತಾಂಟಾಗಿದೆ. ಸಾವಿರಾರು ದಲಿತ ವಿದ್ಯಾರ್ಥಿ ಗಳ ವಿದ್ಯಾರ್ಥಿವೇತನ ಅರ್ಜಿಗಳನ್ನು ತಿರಸ್ಕರಿಸಿ, ಸಮುದಾಯವನ್ನು ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿನ್ನೆಡೆಗೆ ತಳ್ಳಲಾಗಿದೆ ಎಂದು

> ರಾಜ್ಯದ ಸುಮಾರು 20 ಜಿಲ್ಲೆಗಳಲ್ಲಿ ಇಂದಿಗೂ ದಲಿತರಿಗೆ ಸಾಮಾಜಿಕ ಬಹಿಷ್ಕಾರ, ಹೋಟೆಲ್‌ಗಳಲ್ಲಿ ಪ್ರವೇಶ ನಿಷೇಧ ಹಾಗೂ ಚಪ್ಪಲಿ ಮೆಟ್ಟಿ ನಡೆಯಲು ಬಿಡದಿರುವಂತಹ ಅಮಾನವೀಯ ಆಚರಣೆಗಳು ಜಾರಿಯಲ್ಲಿವೆ. ತುಮಕೂರು ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ದೌರ್ಜನ್ಯಗಳು ನಿರಂತರವಾಗಿ ನಡೆಯುತ್ತಿವೆ.ದೇಶದಲ್ಲಿ ಅಟ್ರಾಸ್ಟಿ ಪ್ರಕರಣಗಳಲ್ಲಿ ಶಿಕ್ಷೆಯಾಗುತ್ತಿರುವ ಪ್ರಮಾಣ ಶೇ.3.05ರಷ್ಟಿದ್ದರೆ,ಕರ್ನಾಟಕದಲ್ಲಿ ಕೇವಲ ಶೇ.1.05ರಷ್ಟಿದೆ.ಶೇ76.5ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಸಾಕ್ಷ್ಯಗಳ ಕೊರತೆ ಹಾಗೂ ಸುಳ್ಳು ಬಿ ರಿಪೋರ್ಟ್‌ಗಳಿಂದಾಗಿ ಆರೋಪಿಗಳು ಬಿಡುಗಡೆಯಾಗುತ್ತಿದ್ದಾರೆ.ದಲಿತ ಸಂಘಟನೆಗಳ ನಿರಂತರ ಹೋರಾಟದಿಂದಲೇ ಸಮಾಜದಲ್ಲಿ ದಲಿತರಿಗೆ ರಕ್ಷಣೆ, ರಾಜಕೀಯ ಮೀಸಲಾತಿ ಹಾಗೂ ಸೌಲಭ್ಯಗಳು ಸಿಗುತ್ತಿವೆ. ಸರಕಾರ ಹಾಗೂ ಪೊಲೀಸ್ ಇಲಾಖೆ ತಕ್ಷಣವೇ ಇಂತಹ ದೌರ್ಜನ್ಯಗಳನ್ನು ತಡೆಯಲು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಆರೋಪಿಸಿದರು.

ಕಳೆದ ಮೂವತ್ತೈದು ವರ್ಷಗಳ ಹೋರಾಟದ ಫಲವಾದ ಒಳಮೀಸಲಾತಿ ವರ್ಗಿಕರಣವನ್ನು ಸಹ ಕಾಂಗ್ರೆಸ್ ಸರಕಾರ ಸರಿಯಾಗಿ ನಿಭಾಯಿಸಲಿಲ್ಲ.ಸುಪ್ರೀಂ ಕೋರ್ಟ್ ತೀರ್ಪಿದ್ದರೂ ಒಳಮೀಸಲಾತಿಯನ್ನು ವೈಜ್ಞಾನಿಕವಾಗಿ ಜಾರಿಗೆ ತರದೆ ರಾಜ್ಯ ಸರಕಾರ ವಂಚಿ ಸಿದೆ.ನೇಮಕಾತಿ, ಬಡ್ತಿ ಹಾಗೂ ಗುತ್ತಿಗೆ ಆಧಾರದ ಹುದ್ದೆಗಳಲ್ಲಿ ಸಂಪೂರ್ಣ ಮೀಸಲಾತಿಯನ್ನು ಕಡ್ಡಾಯವಾಗಿ ಜಾರಿಗೆ ತರಬೇಕು.ಹಾಗೆಯೇ ಕಳೆದ 12 ವರ್ಷಗಳಲ್ಲಿ ಎಸ್‌ಸಿಎಸ್ಪಿ ಮತ್ತು ಟಿಎಸ್ಪಿ ಅನುಧಾನವನ್ನು ಬಳಕೆ ಮಾಡಿರುವ ವಿವರವಾದ ಶ್ವೇತಪತ್ರ ಹೊರಡಿಸಬೇಕೆಂದು ಡಾ.ಎನ್.ಮೂರ್ತಿ ಆಗ್ರಹಿಸಿದರು.

ಡಿ.ಎಸ್.ಎಸ್. ತುಮಕೂರು ಜಿಲ್ಲಾಧ್ಯಕ್ಷ ಪಿ.ಎನ್. ರಾಮಯ್ಯ ಮಾತನಾಡಿ,ಸರಕಾರ ಎಸ್ಸಿಪಿ ಮತ್ತು ಟಿಎಸ್ಪಿ ಹಣವನ್ನು ಅನ್ಯ ಕಾರ್ಯಗಳಿಗೆ ಬಳಕೆ ಮಾಡುತ್ತಿರುವುದರಿಂದ ಎಸ್ಸಿ, ಎಸ್ಟಿ ಹಾಸ್ಟೆಲ್‌ಗಳಿಗೆ ಮೂಲಭೂತ ಸೌಕರ್ಯದ ಕೊರತೆಯಾಗಿದೆ. ಬಾಡಿಗೆ ಕಟ್ಟಡಗಳ ಬಾಡಿಗೆ ಕಟ್ಟಡಲಾಗಿದೆ. ಖಾಲಿ ಮಾಡುವಂತಹ ಪರಿಸ್ಥಿತಿ ಇದೆ.ಆಳುವ ಸರಕಾರಗಳ ಓಟ್ ಬ್ಯಾಂಕ್ ರಾಜಕಾರಣಕ್ಕೆ ದಲಿತರು ಬಲಿಪಶುಗಳಾಗುತ್ತಿದ್ದಾರೆ.ಕಡತಗಳಲ್ಲಿ ಸಾವಿರಾರು ಕೋಟಿ ರೂ ಎಂದು ಹೇಳುವ ಸರಕಾರಗಳು, ವಾಸ್ತುವದಲ್ಲಿ ದಲಿತರಿಗೆ ನೀಡುತ್ತಿರುವ ಚಿಲ್ಲರೆ ಕಾಸು ಮಾತ್ರ.ಸರಕಾರ ದಲಿತರ ಹಣವನ್ನು ಆ ಸಮುದಾಯದ ಅಭಿವೃದ್ದಿ ಮಾತ್ರ ಬಳಕೆ ಮಾಡದಿದ್ದರೆ ಮುಂದಿನ ದಿನಗಳಲ್ಲಿ ಸರಕಾರದ ವಿರುದ್ಧ ತೀವ್ರ ಹೋರಾಟ ನಡೆಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಡಿಎಸ್‌ಎಸ್ ರಾಜ್ಯ ಪದಾಧಿಕಾರಿಗಳಾದ ಭೈಲ ಹೊನ್ನಯ್ಯ, ಗೋವಿಂದರಾಜು, ರಾಜಣ್ಣ.ಕೆ., ರಿಷಿಕುಮಾರ್, ರಾಮಲಿಂಗಯ್ಯ, ಲಕ್ಷ್ಮಿ ದೇವಮ್ಮ, ಚಂದ್ರಯ್ಯ, ಹನುಮಂತರಾಜು, ರಂಗನಾಥ್, ಚಿಕ್ಕಲಕ್ಕಯ್ಯ, ಕೋದಂಡರಾಮ್ ಮತ್ತಿತರರು ಉಪಸ್ಥಿತರಿದ್ದರು.

## ಅರಿವಿನ ಬೆಳಕು, ಸುರಕ್ಷಿತ ಬದುಕು

ತುಮಕೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಹಿಳಾ ಸಬಲೀಕರಣ ಘಟಕ, ತುಮಕೂರು ಹಾಗೂ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ಕುಣಿಗಲ್ ಇವರ ಸಂಯುಕ್ತಾಶ್ರಯದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವದ ಕುರಿತು ಅರಿವು ಕಾರ್ಯಕ್ರಮವನ್ನು ಅಕ್ಟೋಬರ್ 10ರಂದು ಹಮ್ಮಿಕೊಳ್ಳಲಾಯಿತು.

ಜಿಲ್ಲಾ ಮಹಿಳಾ ಸಬಲೀಕರಣ ಘಟಕ ಜಿಲ್ಲಾ ಮಿಷನ್ ಸಂಯೋಜಕ ಶಶಿಧರ ಹೆಚ್.ಜಿ., ಮಾತನಾಡಿ, ವಿದ್ಯಾರ್ಥಿನಿಯರಿಗೆಶಿಕ್ಷಣದಮೌಲ್ಯಮತ್ತುಸಮಯದಪ್ರಜ್ಞೆ, ಶಿಸ್ತು ಸಂಯಮ, ನಿಗದಿತ ವೇಳಾಪಟ್ಟಿ, ಬಾಳಸಂಗಾತಿಯ ಆಯ್ಕೆ, ಪೌಷ್ಠಿಕ ಆಹಾರ ಸೇವನೆ, ಕನಸು, ಗುರಿ-ನಿರ್ಧಾರ, ಸಾಧನೆ, ಹದಿಹರೆಯದ ಲಕ್ಷಣ, ಸಮಸ್ಯೆ ಮತ್ತು ಪರಿಹಾರ, ಹದಿಹರೆಯದ ಅವಧಿಯು ಜೀವನದ ಅತ್ಯಂತ ಪ್ರಮುಖ ಘಟ್ಟವಾಗಿದೆ. ಈ ಹಂತದಲ್ಲಿ ವಿದ್ಯಾರ್ಥಿನಿಯರು ದೈಹಿಕ ಮತ್ತು ಮಾನಸಿಕ ಬದಲಾವಣೆಗಳನ್ನು ಧನಾತ್ಮಕವಾಗಿ ಸ್ವೀಕರಿಸಬೇಕು. ಪ್ರಸ್ತುತ ದಿನಗಳಲ್ಲಿ ಹೆಣ್ಣು ಮಕ್ಕಳು ತಮ್ಮ ಹಕ್ಕುಗಳು ಮತ್ತು ಸುರಕ್ಷತಾ ಕಾಯ್ದೆಗಳ ಬಗ್ಗೆ ಸಂಪೂರ್ಣ ಅರಿವು ಹೊಂದಿರುವುದು ಅತ್ಯಗತ್ಯ ಎಂದು ತಿಳಿಸಿದರು. ರಕ್ತ ಹೀನತೆಯ ಬಗ್ಗೆ ಮಾಹಿತಿ ತಿಳಿಸಿದರು. ಮಕ್ಕಳಿಗೆ ತಮ್ಮ ಕಾನೂನು ಹಕ್ಕುಗಳು, ಉಚಿತ ಕಾನೂನು ನೆರವು ಹಾಗೂ ಕಾನೂನು ಸಲಹೆಗಳನ್ನು ಪಡೆಯುವ ವಿಧಾನಗಳ ಕುರಿತು ಮಾಹಿತಿ ನೀಡಿದರು. ಬಾಲ್ಯ ವಿವಾಹ ನಿಷೇಧ ಕಾಯ್ದೆ-2006, ಪೋಕ್ಸ್ ಕಾಯ್ದೆ-2012, ಮಹಿಳಾ ಸಹಾಯವಾಣಿ-181, ಮಕ್ಕಳ ಸಹಾಯವಾಣಿ 1098,



ಮತ್ತು ತುರ್ತು ಸಹಾಯವಾಣಿ-112ಗಳ ಕುರಿತು ಮಾಹಿತಿಯನ್ನು ನೀಡಿದರು.

ಪ್ರಧಾನಮಂತ್ರಿ ಮಾತೃವಂದನಾ ಕಾರ್ಯಕ್ರಮ ಸಂಯೋಜಕ ರಂಗನಾಥ ಹೆಚ್.ಎಲ್., ಮೊಬೈಲ್ ಅನ್ನು ಅತಿಯಾಗಿ ಬಳಸುವ ಅಭ್ಯಾಸ. ಇದು ವ್ಯಕ್ತಿಯ ದೈನಂದಿನ ಜೀವನ, ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಸಂಬಂಧಗಳ ಮೇಲೆ ಕೆಟ್ಟ ಪರಿಣಾಮ ಬೀರುವ ಸಾಧ್ಯತೆ ಇದೆ ಹಾಗೂ ವಿದ್ಯಾರ್ಥಿನಿಯರು ಮೊಬೈಲ್ ಸ್ಕ್ರೀನ್ ಸಮಯವನ್ನು ಕಡಿಮೆ ಮಾಡಿ ಹೇಗೆ ಓದಿನತ್ತ ಗಮನ ಹರಿಸಬೇಕು ಎಂಬುದರ ಕುರಿತು ಪ್ರಾಯೋಗಿಕ ಸಲಹೆಗಳನ್ನು ನೀಡಿದರು. ಇದೇ ವೇಳೆ ಇಂಟರ್ನೆಟ್ ಲೋಕದಲ್ಲಿ ಸುರಕ್ಷಿತವಾಗಿರಲು ಅನುಸರಿಸಬೇಕಾದ ಕ್ರಮಗಳು, ಅಪರಿಚಿತರೊಂದಿಗೆ ಸಾಮಾಜಿಕ ಜಾಲತಾಣಗಳಲ್ಲಿ ಸಂವಹನ ನಡೆಸುವಾಗ ವಹಿಸಬೇಕಾದ ಎಚ್ಚರಿಕೆ, ಸೈಬರ್ ಅಪರಾಧಗಳು ಮತ್ತು ಅದಕ್ಕೆ ಸಂಬಂಧಿಸಿದ ಕಾನೂನುಗಳ ಬಗ್ಗೆ ವಿಸ್ಕೃತವಾಗಿ ಮಾಹಿತಿ ನೀಡಿದರು. ಯಾವುದೇ ಸೈಬರ್ ತೊಂದರೆ ಎದುರಾದರೆ ತಕ್ಷಣ ಪೋಷಕರು ಅಥವಾ ಶಿಕ್ಷಕರ ಗಮನಕ್ಕೆ ತರಲು ಹಾಗೂ ಸೈಬರ್ ಕ್ರೈಂ ಸಹಾಯವಾಣಿ-1930ಕ್ಕೆ ಕರೆ ಮಾಡಿ ಎಂದು ತಿಳಿಸಲಾಯಿತು.

ಕಾರ್ಯಕ್ರಮದಲ್ಲಿ ಕುಣಿಗಲ್ ಸರ್ಕಾರಿ ಪ್ರೌಢಶಾಲೆ ಹಿರಿಯ ಸಹಾಯಕ ಶಿಕ್ಷಕಿ ಅನುಪಮ ಹೆಚ್.ಎಸ್. ಹಾಗೂ ಆಡಳಿತ ವರ್ಗ, ಬೋಧಕರು/ಬೋಧಕೇತರರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಇ.ಡಿ ದಾಳಿ ಖಂಡಿಸಿ ಪ್ರತಿಭಟನೆ

ತುಮಕೂರು: ಸಚಿವ ಸತೀಶ್ ಜಾರಕಿಹೊಳಿ ಅವರ ವಿರುದ್ಧ ಜಾರಿ ನಿರ್ದೇಶನಾಲಯ (ಇಡಿ) ನಡೆಸಿದ ದಾಳಿ ಖಂಡಿಸಿ ಜಿಲ್ಲಾ ಕಾಂಗ್ರೆಸ್ ಎಸ್.ಟಿ. ಘಟಕ ಹಾಗೂ ವಾಲ್ಮೀಕಿ ಸಮಾಜದ ಮುಖಂಡರು ಗುರುವಾರ ನಗರದ ಬಿಜಿಎಸ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಎಸ್.ಟಿ. ಘಟಕದ ಜಿಲ್ಲಾಧ್ಯಕ್ಷ ಹೆಚ್.ಎಸ್. ಕುಮಾರಸ್ವಾಮಿ ಮಾತನಾಡಿ, ಪ್ರಭಾವಿ ನಾಯಕ ಹಾಗು ಸಾಮಾಜಿಕ ಕಳಕಳಿ ಹೊಂದಿರುವ ಸಚಿವ ಸತೀಶ್ ಜಾರಕಿಹೊಳಿ




ಅವರನ್ನು ರಾಜಕೀಯವಾಗಿ ಮುಗಿಸಲು ಬಿಜೆಪಿ ಇಡಿ ಅಸ್ತ್ರ ಬಳಸಿರುವುದು ಖಂಡನೀಯ, ಅವರ ಜನಪ್ರಿಯತೆ, ರಾಜಕೀಯ ಶಕ್ತಿಯನ್ನು ಹತ್ತಿಕ್ಕುವ ಬಿಜೆಪಿ ನಾಯಕರ ಪ್ರಯತ್ನ ಯಶಸ್ವಿಯಾಗುವುದಿಲ್ಲ. ಮುಂದಿನ ದಿನಗಳಲ್ಲಿ ಬಿಜೆಪಿ ವಿರುದ್ಧ ರಾಜ್ಯಾದ್ಯಂತ ಹೋರಾಟ ಮಾಡಲಾಗುವುದು ಎಂದರು.

ಕೇಂದ್ರ ಬಿಜೆಪಿ ಸರ್ಕಾರ ಜಾರಿ ನಿರ್ದೇಶನಾಲಯವನ್ನು ವಿರೋಧಿ ಗಳನ್ನು ಹತ್ತಿಕ್ಕುವ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿರುವುದು ಖಂಡನೀಯ, ಮುಂದಿನ ದಿನಗಳಲ್ಲಿ ರಾಜ್ಯದ ಜನರು ಬಿಜೆಪಿಗೆ ತಕ್ಕ ಪಾಠ ಕಲಿಸುತ್ತಾರೆ. ಸತೀಶ್ ಜಾರಕಿಹೊಳಿ ಕೇವಲ ವಾಲ್ಮೀಕಿ ಸಮಾಜದ ನಾಯಕರಲ್ಲ, ಎಲ್ಲಾ ವರ್ಗದವರೂ ಅವರ ನಾಯಕತ್ವವನ್ನು ಒಪ್ಪಿಕೊಂಡಿದ್ದಾರೆ. ಇ.ಡಿ ದಾಳಿ ಮೂಲಕ ಅವರನ್ನು ಕಟ್ಟಿಹಾಕಲು ಸಾಧ್ಯವಿಲ್ಲ ಎಂದು ಹೇಳಿದರು.

ವಾಲ್ಮೀಜಿ ಸಮಾಜದ ಮುಖಂಡ ಪ್ರತಾ ಪ್ ಮದಕರಿ ಮಾತನಾಡಿ, ಸತೀಶ್‌ಜಾರಕಿಹೊಳಿ ಅವರು ರಾಷ್ಟ್ರಮಟ್ಟದ ಅಹಿಂದ ನಾಯಕ, ಅವರ ವರ್ಚಸ್ಸು ಕುಂದಿಸಲು, ಅವರ ರಾಜಕೀಯ ಶಕ್ತಿಯನ್ನು ಮಣಿಸಲು ಬಿಜೆಪಿ ಇ.ಡಿ. ಅಸ್ತ್ರ ಬಳಸಿದೆ. ಇ.ಡಿ. ದಾಳಿಯಾದ ಡಿ.ಕೆ. ಶಿವಕುಮಾರ್ ರಾಜ್ಯದ ಮುಖ್ಯಮಂತ್ರಿಯಾದರು, ಡಾ.ಜಿ. ಪರಮೇಶ್ವರ್ ಅವರು ಉಪ ಮುಖ್ಯ ಮಂತ್ರಿಯಾದರು. ಮುಂದೆ ಸತೀಶ್ ಜಾರಕಿಹೊಳಿ ಅವರು ಈ ರಾಜ್ಯದ ಮುಖ್ಯಮಂತ್ರಿಗಾಗುವುದು ಖಚಿತ ಎಂದರು.

ವಿರೋಧ ಪಕ್ಷದ ನಾಯಕರನ್ನು ಇ.ಡಿ. ದಾಳಿ ಮೂಲಕ ಹತ್ತಿಕ್ಕುವ ಕುತಂತ್ರ ಕೆಲಸ ಬಿಟ್ಟು ಕೇಂದ್ರ ಬಿಜೆಪಿ ಸರ್ಕಾರ ಅಭಿವೃದ್ಧಿಗೆ ಗಮನಹರಿಸಲು ಎಂದು ಹೇಳಿದ ಅವರು, ಇ.ಡಿ. ದಾಳಿ ಖಂಡಿಸಿ ಶುಕ್ರವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ಕಾಂಗ್ರೆಸ್ ಮುಖಂಡರಾದ ಭಾಗ್ಯಮ್ಮ ಮಾತನಾಡಿ, ಸಚಿವ ಸತೀಶ್ ಜಾರಕಿಹೊಳಿ ಮೇಲಿನ ಇ.ಡಿ. ದಾಳಿ ರಾಜಕೀಯಪ್ರೇರಿತ. ವಿರೋಧಿಗಳನ್ನು ಮಣಿಸಲು ಬಿಜೆಪಿ ನಾಯಕರು ಇ.ಡಿ. ಸಂಸ್ಥೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಟೀಕಿಸಿದರು.

ಕಾಂಗ್ರೆಸ್ ಎಸ್.ಟಿ. ಘಟಕ ಜಿಲ್ಲಾ ಉಪಾಧ್ಯಕ್ಷ ಪುರುಷೋತ್ತಮ್ ಬಾಬು, ಅಲ್ಪ ಸಂಖ್ಯಾತರ ಘಟಕ ಅಧ್ಯಕ್ಷ ಎಸ್.ಎಂ. ಇರ್ಫಾನ್, ತುರುವೇಕೆರೆ ವಾಲ್ಮೀಕಿ ಸಮಾಜ ಅಧ್ಯಕ್ಷ ವಸಂತಕುಮಾರ್, ಅಖಿಲ ಕರ್ನಾಟಕ ವಾಲ್ಮೀಕಿ ಮಹಾಸಭಾ ಜಿಲ್ಲಾಧ್ಯಕ್ಷ ರಾಮಾಂಜನಯ್ಯ, ಮುಖಂಡರಾದ ಸೌಭಾಗ್ಯಮ್ಮ, ಯಶೋಧ, ಗೌಸ್ ಪೀರ್ ಮೊದಲಾದವರು ಭಾಗವಹಿಸಿದ್ದರು.

## ನೀರು ಹರಿಯುವ ವಾಲ್ವ್ ಬಂದ್ ಮಾಡಿ ಕ್ಯಾಮರಾ ಕಿತ್ತು ಹಾಕಿದವರ ವಿರುದ್ದ ಶಿಸ್ತುಕ್ರಮಕ್ಕೆ ಒತ್ತಾಯ



ಚಿಕ್ಕನಾಯಕನಹಳ್ಳಿ: ನೀರಿನಲ್ಲದೇ ಒಂದು ಕಡೆ ಸಮಸ್ಯೆಯಾದರೆ ನೀರು ಹರಿಯುತ್ತಿರುವ ಭಾಗದ ರೈತರ ಸಮಸ್ಯೆ ಇನ್ನೊಂದು ಕಡೆಯಾಗಿದ್ದು ನೀರಿಗಾರಿ ರೈತ ರೈತರ ನಡುವೆ ವೈಮನಸ್ಸು ಮೂಡುತ್ತಿದ್ದು ದ್ವೇಷಕ್ಕೆ ದಾರಿ ಮಾಡಿಕೊಡುತ್ತಾ ಪೊಲೀಸ್ ಠಾಣೆಯ ಮೆಟ್ಟಿಲೇರಿದೆ.

ತಾಲ್ಲೂಕಿನ 26ಕೆರೆಗಳಿಗೆ ಹೇಮಾವತಿ ನೀರು ಹರಿಸುವ ಯೋಜನೆಯಡಿ ಈಗಾಗಲೇ ಕಳೆದ ಎರಡು ಮೂರುವರ್ಷಗಳಿಂದ ಸಾಸಲು ಭಾಗದ ಕೆರೆಗಳಿಗೆ ನೀರನ್ನು ಹರಿಸಲಾಗುತ್ತಿತ್ತು ಅದೇ ರೀತಿ ಈ ಬಾರಿ ದಬ್ಬೇಘಟ್ಟದ ವರೆಗೆ ಕಾಮಗಾರಿಯ ಪೂರ್ಣಗೊಳಿಸಿ ಈ ವರ್ಷ ನೀರನ್ನು ಹರಿಸಲಾಗಿತ್ತು ಕಳೆದ 15ದಿನಗಳಲ್ಲಿ ಸಾಸಲು ಭಾಗ ಹಾಗೂ ದಬ್ಬೇಘಟ್ಟದ ಬಾಗಕ್ಕೆ ನೀರಿನ ಹರಿವಿನ ಪ್ರಮಾಣದಲ್ಲಿ ವ್ಯಾತ್ಯಾಸಗಳಾಗುತ್ತಿವೆ ಎಂದು ಸಾಮಾಜಿಕ ಜಾಲ ತಾಣಗಳಲ್ಲಿ ರೈತರೇ ವಿಡಿಯೋಗಳನ್ನು ಹರಿ ಬಿಡುತ್ತಿದ್ದರು ಇದರಿಂದ ದಬ್ಬೇಘಟ್ಟ ಭಾಗದ ಗ್ಯಾರೇಹಳ್ಳಿ ಗೇಟ್ ಬಳಿ ನೀರಾವರಿ ಹೋರಾಟ ಸಮಿತಿಯವರು ಸ್ವತಃ ಸಮಿತಿಯವರೇ ಸಿಸಿ ಕ್ಯಾಮಾರವನ್ನು ಆಳವಡಿಸಿ ರೈತರೇ ತಂಡತಂಡವಾಗಿ ಚಾನಲ್ ಮೇಲೆ ಗಸ್ತು ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಸೋಮವಾರ ಶೆಟ್ಟಿಕೆರೆ ಸಾಸಲು, ಪಟ್ಟದೇವರಕೆರೆ ಭಾಗದ ರೈತರು ನಮ್ಮ ಭಾಗಕ್ಕೆ ನೀರು ಸರಾಗವಾಗಿ ಹರಿಯುತ್ತಿಲ್ಲವೆಂದು ಪ್ರತಿಭಟನೆ ನಡೆಸಿದ್ದರು ಈ ಹಿನ್ನೇಲೆಯಲ್ಲಿ ತಾಲ್ಲೂಕು ಆಡಳಿತ ಸೌದದಲ್ಲಿ ಶಾಸಕ ಸಿ.ಬಿ.ಸುರೇಶ್‌ಬಾಬು ಅಧ್ಯಕ್ಷತೆಯಲ್ಲಿ ರೈತ ಮುಖಂಡರ ಸಭೆ ನಡೆಸಿ ಯಾರೇ ರೈತರು ಚಾನಲ್ ಮೇಲೆ ಗಸ್ತುಮಾಡುವುದು, ಗೇಟ್‌ವಾಲ್‌ಗಳನ್ನು ಮುಟ್ಟುವುದು ಮಾಡುವಂತಿಲ್ಲ ನೀರನ್ನು ಪೈಪ್‌ಗಳ ಮೂಲಕ ನೀರನ್ನು ಬಳಸಿಕೊಳ್ಳುವಂತಿಲ್ಲ ಈ ಬಗ್ಗೆ ಸಂಬಂದ ಪಟ್ಟ ಇಲಾಖೆಯವರೇ ಜವಾಬ್ದಾರಿಯಿಂದ ನೋಡಿಕೊಳ್ಳುತ್ತಾರೆ ಎಂದು ತೀರ್ಮಾನಿಸಲಾಗಿತ್ತಾದರೂ ಮಂಗಳವಾರ ತಡರಾತ್ರಿ ಯಾರೋ ದುಷ್ಕರ್ಮಿಗಳು ದಬ್ಬೇಘಟ್ಟ ಭಾಗಕ್ಕೆ ಹರಿಸಲಾಗುತ್ತಿದ್ದ ಗ್ಯಾರೇಹಳ್ಳಿಬಳಿಯ ಗೇಟ್‌ನಲ್ಲಿ ಇದ್ದಂತಹ ಸಿಸಿ ಕ್ಯಾಮಾರವನ್ನು ಕಿತ್ತುಹಾಕಿ, ಗೇಟ್‌ವಾಲ್‌ನ್ನು ಕಡಿಮೆ ಮಾಡಿದ್ದಾರೆ.ಎಂಬ ಮಾಹಿತಿ ತಿಳಿದು ಬಂದಿದೆ.

ಗ್ಯಾರೇಹಳ್ಳಿಬಳಿಯ ಗೇಟ್‌ವಾಲ್‌ನ ಬಳಿ ಇದ್ದ ಸಿಸಿ ಕ್ಯಾಮಾರವನ್ನು ಕಿತ್ತು ಹಾಕಿ ಗೇಟ್‌ವಾಲ್ ತಿರುಗಿಸಿರುವವರ ವಿರುದ್ದ ಕಾನೂನು ರೀತಿಯಲ್ಲಿ ಶಿಸ್ತುಕ್ರಮಕೈಗೊಳ್ಳಬೇಕೆಂದು ನೀರಾವರಿ ಹೋರಾಟ ಸಮಿತಿಯವರು ಪೋಲಿಸ್‌ಠಾಣೆಯ ಬಳಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಹೇಮಾವತಿ ನಾಲಾ ಎಇಇ ಸೌಜನ್ಯ ಮಾತನಾಡಿ ನಮ್ಮ ಇಲಾಖೆಯ ಕಡೆಯಿಂದಲೂ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳುವಂತೆ ದೂರು ನೀಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ನೀರಾವರಿ ಹೋರಾಟ ಸಮಿತಿಯ ಶ್ಯಾವಿಗೇಹಳ್ಳಿ ಮಧು, ಸಾವಶೆಟ್ಟಿಹಳ್ಳಿ ಮರುಳಪ್ಪ, ಹಾಗೂ ಮುಖಂಡರುಗಳಾದ ವೃಷಭೇಂದ್ರ, ಯತೀಶ್, ರಮೇಶ್, ದಿನೇಶ್, ಆಟೋಚಾಲಕರ ಸಂಘದ ಅಧ್ಯಕ್ಷ ಮಂಜುನಾಥ್, ಅಗಸರಹಳ್ಳಿ ಮಂಜುನಾಥ್ ಹಾಗೂ ಇತರರು ಪಾಲ್ಗೊಂಡಿದ್ದರು.

## ಆಧಾರ್-ಪಹಣಿ ಜೋಡಣೆ ಕಡ್ಡಾಯ

ಹುಳಿಯಾರು: ತಾಲ್ಲೂಕಿನ ಎಲ್ಲಾ ರೈತರು ತಮ್ಮ ಜಮೀನಿನ ಪಹಣಿಗಳನ್ನು ಎಫ್.ಐ.ಡಿ ಹಾಗೂ ಆಧಾರ್ ಸಂಖ್ಯೆಯೊಂದಿಗೆ ಕಡ್ಡಾಯವಾಗಿ ಜೋಡಣೆ ಮಾಡಿಸಬೇಕು ಎಂದು ಚಿಕ್ಕನಾಯಕನಹಳ್ಳಿ ಸಹಾಯಕ ಕೃಷಿ ನಿರ್ದೇಶಕರಾದ ಎಚ್.ಎಸ್.ಶಿವರಾಜ್ ಕುಮಾರ್ ತಿಳಿಸಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸೌಲಭ್ಯಗಳು ನೇರವಾಗಿ ರೈತರಿಗೆ ತಲುಪಲು ಈ ದಾಖಲಾತಿ ಅನಿವಾರ್ಯವಾಗಿದೆ. ಕೃಷಿ ಇಲಾಖೆಯ ವತಿಯಿಂದ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಇತರೆ ಕೃಷಿ ಪರಿಕರಗಳನ್ನು ಪಡೆಯಲು. ಬರಗಾಲದಂತಹ ತುರ್ತು ಪರಿಸ್ಥಿತಿಗಳಲ್ಲಿ ಸರ್ಕಾರದಿಂದ ಘೋಷಿಸುವ ಬೆಳೆ ಪರಿಹಾರಕ್ಕೆ ಅರ್ಜಿ ಸಲ್ಲಿಸಲು. ಪ್ರಧಾನಮಂತ್ರಿ ಫಾಸಲ್ ಬಿಮಾ ಯೋಜನೆಯಡಿ ಬೆಳೆ ವಿಮೆ ಪಾವತಿಸಲು ಹಾಗೂ ಕ್ಲೈಮ್ ಪಡೆಯಲು. ತೋಟಗಾರಿಕೆ, ಕಂದಾಯ, ಪಶುಸಂಗೋಪನೆ, ರೇಷ್ಮೆ, ಅರಣ್ಯ ಹಾಗೂ ಇತರೇ ಇಲಾಖೆಗಳಿಂದ ಸಿಗುವ ಸಹಾಯಧನ ಮತ್ತು ಸೌಲಭ್ಯಗಳನ್ನು ಪಡೆದುಕೊಳ್ಳಲು ಇದು ಅತ್ಯಗತ್ಯವಾಗಿದೆ. ಈ ಪ್ರಕ್ರಿಯೆಯು ಕಡ್ಡಾಯವಾಗಿದ್ದು, ತಾಲ್ಲೂಕಿನ ಸಮಸ್ತ ರೈತ ಭಾಂದವರು ಯಾವುದೇ ವಿಳಂಬವಿಲ್ಲದೆ ಆಧಾರ್ ಕಾರ್ಡ್ ಪ್ರತಿ, ಜಮೀನಿನ ಪಹಣಿ ಪತ್ರಿ, ಆಧಾರ್‌ಗೆ ಜೋಡಣೆಯಾಗಿರುವ ಸಕ್ರಿಯ ಮೊಬೈಲ್ ಸಂಖ್ಯೆ ಇರುವ ಮೊಬೈಲ್ ಫೋನ್ ನೊಂದಿಗೆ ತಮ್ಮ ಹೋಬಳಿ ವ್ಯಾಪ್ತಿಯ ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸುವಂತೆ ಶಿವರಾಜ್‌ಕುಮಾರ್ ತಿಳಿಸಿದ್ದಾರೆ .

# ಡಿಕೆಶಿ ಸರ್ಕಾರದ ಶತದಿನ ಕಾರ್ಯಕ್ರಮ ಉದ್ಘಾಟಿಸಿದ ಮಾಜಿ ಸಿಎಂ

ಬೆಂಗಳೂರು: ಎಲ್ಲ ಗ್ಯಾರಂಟಿಗಳನ್ನು ಮುಂದುವರಿಸಿ ಕೊಂಡು ಹೋಗಬೇಕು ಎಂದು ಮಾಜಿ ಸಿಎಂ ಸಿದ್ದರಾಮಯ್ಯ, ಸರ್ಕಾರಕ್ಕೆ ಕಿವಿಮಾತು ಹೇಳಿದರು.

ಸಿಎಂ ಡಿ.ಕೆ.ಶಿವಕುಮಾರ್ ನೇತೃತ್ವದ ಸರಕಾರ 100 ದಿನಗಳನ್ನು ಪೂರೈಸಿರುವುದರ ಹಿನ್ನೆಲೆಯಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್??ನಲ್ಲಿ ನಡೆಯುತ್ತಿರುವ "ದೃಢ ಕರ್ನಾಟಕದ ಸಂಕಲ್ಪ" ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಸಿಎಂ ಆಗಿ 100 ದಿನಗಳನ್ನು ಪೂರೈಸಿದ್ದಾರೆ. ಅದರ ಜ್ಞಾಪಕಾರ್ಥವಾಗಿ ಆಚರಣೆ ಮಾಡಲಾಗುತ್ತಿದೆ. 100 ದಿನಗಳು ಸಂಭ್ರಮಾಚರಣೆ ಅಲ್ಲ, ಸರಿಯಾದ ದಾರಿಯಲ್ಲಿ ನಡೆಯುತ್ತಿದ್ದೇವೆ ಎಂಬುದನ್ನು ಜನರ ಮುಂದಿಡುತ್ತಿದ್ದೇವೆ ಎಂದರು.

ವಿಜಯೇಂದ್ರ ಭ್ರಷ್ಟಾಚಾರದ ಬಗ್ಗೆ ಮಾತಾನಾಡುವುದು ವಿಪರ್ಯಾಸ. ಅವರಪ್ಪ ಸಿಎಂ ಆಗಿದ್ದಾಗ ಇವರೇ ಸಿಎಂ ರೀತಿ ವರ್ತಿಸುತ್ತಿದ್ದರು. 10 ದಿನ ವಿಧಾನಸಭೆ ಕಲಾಪ ಇತ್ತು. ಬರಗಾಲದ ಬಗ್ಗೆ ಚರ್ಚಿಸಲಿಲ್ಲ. ಈಗ ಪಾದಯಾತ್ರೆ ಮಾಡ್ತಿದ್ದಾರೆ. ಪಾದಯಾತ್ರೆ ಮಾಡುವ ಮೂಲಕ ರಾಜಕೀಯ ಮಾಡ್ತಿದ್ದಾರೆ. ಇದು ಬಿಜೆಪಿ ಗಿಮಿಕ್. ಏತಕ್ಕಾಗಿ ಪಾದಯಾತ್ರೆ?. ಅದಕ್ಕೆ ಸೊಪ್ಪು ಹಾಕುವ ಕೆಲಸ ಮಾಡಬಾರದು ಎಂದರು.

ನಾವು ಪಾದಯಾತ್ರೆ ಮಾಡಿದ್ದೆವು. ಅನೇಕ ಪಾದಯಾತ್ರೆ ಮಾಡಿದ್ದೆವು. ಹೊಸ ಪೇಟೆಯಿಂದ ಕೂಡಲಸಂಗಮ, ಮಂಗಳೂರಿನಲ್ಲಿ ಪಾದಯಾತ್ರೆ ಮಾಡಿದ್ದೆವು. ಬಿಜೆಪಿ ಯಾವುದೇ ವಿಚಾರಗಳಿಲ್ಲದೇ ಯಾತ್ರೆ ಮಾಡುತ್ತಿದೆ. ಅಧಿಕಾರಕ್ಕೆ ಬರಲು ಈ ಪ್ರಯತ್ನ ನಡೆಸ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ ಮಾಜಿ ಸಿಎಂ ಸಿದ್ದರಾಮಯ್ಯ, ಮಳೆ ಬರುವ ಸಾಧ್ಯತೆ ಕಡಿಮೆ ಇದೆ. ಇನ್ನಷ್ಟು ತಾಲೂಕುಗಳು ಬರಪೀಡಿತವಾಗಿವೆ. ಆದಷ್ಟು ಶೀಘ್ರವಾಗಿ ಬರ ಪೀಡಿತ ತಾಲೂಕುಗಳ ಘೋಷಣೆ ಮಾಡಿ ಎಂದು ಮನವಿ ಮಾಡಿದರು.



ಸೆಪ್ಟೆಂಬರ್ 14ಕ್ಕೆ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು 3 ವರ್ಷ 4 ತಿಂಗಳ ಪೂರೈಸುತ್ತದೆ. ಡಿ.ಕೆ.ಶಿವಕುಮಾರ್ ಸರ್ಕಾರ ಅಧಿಕಾರಕ್ಕೆ ಬಂದು 100 ದಿನ ಆಗಿದೆ. ಏನು ಮಾಡಿದ್ದೇವೆ. ಏನು ಮಾಡಿಲ್ಲ ಎಂಬ ಕೈಪಿಡಿ ಬಿಡುಗಡೆ ಮಾಡಿದ್ದೇವೆ. ಗ್ಯಾರಂಟಿಗಳ ಜತೆಗೆ ಹೊಸ ಚಿಂತನೆಗಳು, ಕಾರ್ಯಕ್ರಮಗಳೊಂದಿಗೆ ಆಡಳಿತ ನೀಡುತ್ತಿದ್ದಾರೆ. ಸರ್ಕಾರ ಸರಿಯಾದ ದಾರಿಯಲ್ಲಿ ನಡೆಯುತ್ತಿದೆ ಎಂಬ ವಿಶ್ವಾಸ ಇದೆ.ಹೊಸ ಕಾರ್ಯಕ್ರಮಗಳ ಜೊತೆಗೆ ಹಳೆಯ ಕಾರ್ಯಕ್ರಮಗಳು, ಪಂಚ ಗ್ಯಾರಂಟಿ ಮುಂದುವರೆಸಿ. ನಿಮ್ಮ ಸರ್ಕಾರ ಉತ್ತಮವಾಗಿ ಕೆಲಸ ಮಾಡುತ್ತಿದೆ. ಧೃಡ ಸಂಕಲ್ಪ ಮಾಡಿದ್ದೀರಿ. ಯಾರೇನು ಮಾಡಿದರೂ ಜನರ ಮುಂದೆ ಹೋಗುವಂತಹ ಕೆಲಸ ಮಾಡಿ. ದೌರ್ಜನ್ಯ, ಶೋಷಣೆ ನಿಲ್ಲಬೇಕಾದರೆ ಎಲ್ಲರಿಗೂ ಸಮಾನ ಅವಕಾಶ ಸಿಗಬೇಕು ಎಂದು ಸಲಹೆ ನೀಡಿದರು.

ಸರ್ಕಾರಕ್ಕೆ ಸಿದ್ದರಾಮಯ್ಯ ಕಿವಿ ಮಾತು: ಕೇಂದ್ರ ಸರ್ಕಾರ ನಿಮ್ಮ ನೆರವಿಗೆ ಬರುತ್ತೆ ಅಂತ ಡಿಪೆಂಡ್ ಆಗಬೇಡಿ. ಬರ ಏನು ಘೋಷಣೆ ಮಾಡಬೇಕು ಅಂತಿದ್ದಿರಾ ಅದನ್ನು ಕೂಡಲೇ ಘೋಷಣೆ ಮಾಡಿ. ಸೆಪ್ಟೆಂಬರ್ ಮುಗಿದ ಮೇಲೆ ಮಳೆ ಬರುವುದಿಲ್ಲ. ಹೊಸ ಕಾರ್ಯಕ್ರಮಗಳನ್ನೂ ಜಾರಿ ಮಾಡಿ, ಹಳೆ ಕಾರ್ಯಕ್ರಮ ಜಾರಿ ಮಾಡಿ. ಗ್ಯಾರಂಟಿ ಮುಂದುವರೆಸುವ ಕೆಲಸ ಮಾಡಿ. ನನಗೆ ನಂಬಿಕೆ ಇದೆ. ಸರ್ಕಾರ ಜನಪರವಾಗಿರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಯಾರು ಏನೇ ಮಾಡಿದ್ರೂ ಜನರ ಮುಂದೆ ಹೋಗುವ ಕೆಲಸ ಮಾಡಿ. ಅವರೇ ನಮ್ಮ ಮಾಲೀಕರು, ಅವರಿಗೆ ತಿಳಿಸುವ ಕೆಲಸ ಮಾಡಿ. ಪ್ರಜಾಸೇವೆ ಮಾಡಿರೋದು ಒಳ್ಳೆಯದು. ಮುಂದುವರೆಸುವ ಕೆಲಸ ಮಾಡಿ. ಕಾಟಾಚಾರಕ್ಕೆ ಮಾಡಬಾರದು. ಪ್ರತಿ ಸಚಿವರು ಅವರ ಜಿಲ್ಲೆಯಲ್ಲಿ ಜನ ಸಂದರ್ಶನ ಮಾಡಿ ಪ್ರಜಾ ಸಂದರ್ಶನ ಮಾಡಿ. ಬಡವರು ದಲಿತರು ಅಲ್ಪಸಂಖ್ಯಾತರು ಮಹಿಳೆಯರು ಕಾರ್ಮಿಕರಿಗೆ ಶಕ್ತಿ ಕೊಡುವ ಕೆಲಸ ಮಾಡಿ. ಆ ಕೆಲಸ ಮಾಡ್ತಿರೆಂಬ ವಿಶ್ವಾಸ ನನಗಿದೆ ಎಂದರು.

# ನೂತನ ಅಧ್ಯಕ್ಷರಾಗಿ ದಯಾನಂದ್ ನೇಮಕ



ತುರುವೇಕೆರೆ: . ತಾಲೂಕು ಮಾಹಿತಿ ಹಕ್ಕು ಮತ್ತು ಸಾಮಾಜಿಕ ಕಾರ್ಯಕರ್ತರ ವೇದಿಕೆಯ ನೂತನ ಅಧ್ಯಕ್ಷರನ್ನಾಗಿ ದಯಾನಂದ್ ರವರನ್ನು ರಾಜ್ಯ ಮಾಹಿತಿ ಹಕ್ಕು ಮತ್ತು ಸಾಮಾಜಿಕ ಕಾರ್ಯಕರ್ತರ ವೇದಿಕೆ ಅಧ್ಯಕ್ಷ ಎಚ್.ಜಿ. ಕುಣಿಗಲ್ ರಮೇಶ್ ನೇಮಕ ಮಾಡಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕಿನ ನೂತನ ಪದಾದಿಕಾರಿಗಳ ನೇಮಕ ಮಾಡಿದ ಅವರು ಗೌರವಾಧ್ಯಕ್ಷರಾಗಿ ಶಂಕರಣ್ಣ, ಪ್ರಧಾನ ಕಾರ್ಯದರ್ಶಿಯಾಗಿ ಎಚ್. ಎನ್. ತಿಮ್ಮೇಗೌಡ, ಸಹ ಕಾರ್ಯದರ್ಶಿಯಾಗಿ ವಿಜಯ್ ರವರನ್ನು ನೇಮಕ ಮಾಡಲಾಗಿದೆ.

ಈ ವೇಳೆ ಮಾತನಾಡಿದ ಅವರು ಮಾಹಿತಿ ಹಕ್ಕು ಕಾರ್ಯಕರ್ತರು ತಮ್ಮ ಜೀವವನ್ನು ಒತ್ತೆ ಇಟ್ಟು ಹೋರಾಟ ಮಾಡಬೇಕಿದೆ. ಕ್ಯಾನ್ಸರ್ ನಂತೆ ಭ್ರಷ್ಟಾಚಾರ ಹೊರಹೊಮ್ಮಿದೆ. ಅದನ್ನು ಸುಲಭವಾಗಿ ತೆಗೆದುಹಾಕಲು ಸಾಧ್ಯವಿಲ್ಲ. ಕಾರ್ಯಕರ್ತರು ಸಾಮಾನ್ಯ ಕಾನೂನು ಮತ್ತು ಮಾಹಿತಿ ಹಕ್ಕಿನ ಬಗ್ಗೆ ಅಧ್ಯಯನ ಮಾಡಬೇಕು. ಮಾಹಿತಿ ಹಕ್ಕು ದುರುಪಯೋಗ ಆಗಬಾರದು. ಹಲವಾರು ಮಂದಿ ಮಾಹಿತಿ ಹಕ್ಕನ್ನು ದುರುಪಯ ೋಗಪಡಿಸಿಕೊಳ್ಳುತ್ತಿದ್ದಾರೆಂಬ ಮಾಹಿತಿಯೂ ಇದೆ. ಅಂತಹವರನ್ನು ತಾವೇ ಖುದ್ದಾಗಿ ಪೊಲೀಸರಿಗೆ ದೂರು ನೀಡಿ ಕಾನೂನು ಕ್ರಮ ಕೈಗೊಳ್ಳಲು ಒತ್ತಾಯಿಸುವುದಾಗಿ ಅವರು ಹೇಳಿದರು.

ಆರ್ ಟಿ ಐ ಕಾರ್ಯಕರ್ತರ ಕಗ್ಗೊಲೆ ಆಗಿದೆ. ಅವರಿಗೆ ಬೆದರಿಕೆ ಕರೆಗಳೂ ಬರುತ್ತಿವೆ. ನಾವು ಪ್ರಾಮಾಣಿಕರಾಗಿದ್ದರೆ ಯಾರಿಗೂ ಹೆದರುವ ಅಗತ್ಯವಿಲ್ಲ. ರಾಜ್ಯ ಸಂಘಟನೆ ನಿಮ್ಮೊಂದಿಗೆ ಇರಲಿದೆ ಎಂದರು. ಜನರಲ್ಲಿ ಆರ್ ಟಿ ಐ ಬಗ್ಗೆ ಜಾಗೃತಿ ಮೂಡಿಸಬೇಕಿದೆ. ಜನ ಪ್ರತಿನಿಧಿಗಳಿಂದ ಆಗದ ಕೆಲಸಗಳನ್ನು ಆರ್ ಟಿ ಐ ಕಾರ್ಯಕರ್ತರು ಮಾಡಬಹುದಾಗಿದೆ. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಉತ್ತರದಾಯತ್ವ ಇಲ್ಲದಾಗಿದೆ. ಪ್ರಶ್ನಿಸುವವರೇ ಇಲ್ಲವಾದರೆ ಅವರನ್ನು ಹಿಡಿಯುವವರೇ ಇಲ್ಲದಾಗುತ್ತಾರೆ. ದೇಶದ ಸಂಪತ್ತು ಕೆಲವೇ ಮಂದಿಯ ವಶವಾಗುವುದರಲ್ಲಿ ಅನುಮಾನವಿಲ್ಲ. ನಾವು ನಮ್ಮ ಮುಂದಿನ ಪೀಳಿಗೆಗಾಗಿ ಈಗಿನಿಂದ ಹೋರಾಡಬೇಕಿದೆ. ಈಗ ಮೌನಕ್ಕೆ ಶರಣಾದರೆ ನಮ್ಮ ಮಂದಿನ ಪೀಳಿಗೆ ನಮ್ಮನ್ನು ಶಪಿಸುತ್ತಾರೆಂದು ಎಚ್.ಜಿ.ಕುಣಿಗಲ್ ರಮೇಶ್ ಎಚ್ಚರಿಸಿದರು.

ಈ ವೇಳೆ ರಾಜ್ಯ ಮಾಹಿತಿ ಹಕ್ಕು ಮತ್ತು ಸಾಮಾಜಿಕ ಕಾರ್ಯಕರ್ತರ ವೇದಿಕೆಯ ರಾಜ್ಯ ಕಾರ್ಯದರ್ಶಿ ಹೆಚ್.ಡಿ.ರುದ್ರೇಶ್, ಜಿಲ್ಲಾ ಅಧ್ಯಕ್ಷೆ ಲಕ್ಷ್ಮಿ, ಮುಖಂಡರಾದ ಗೋಣಿತುಮಕೂರು ನಂದನ್, ಯು.ಬಿ.ಸುರೇಶ್, ಬೇಕರಿ ಶರಣಪ್ಪ, ಕಣತೂರು ಕೃಷ್ಣ ಸೇರಿದಂತೆ ಹಲವರು ಇದ್ದರು.

# ತ್ರಿಫೇಸ್ ವಿದ್ಯುತ್ ಪೂರೈಕೆಗೆ ಮನವಿ



ಮಧುಗಿರಿ:–: ತಾಲೂಕಿನಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ನಿರಂತರ ಹಾಗೂ ಗುಣಮಟ್ಟದ ತ್ರಿಫೇಸ್ (3-Phase) ವಿದ್ಯುತ್ ಪೂರೈಸುವಂತೆ ಮತ್ತು ವಿದ್ಯುತ್ ಕಣ್ಣುಮುಚ್ಚಾಲೆ ತಡೆಯುವಂತೆ ಜಾತ್ಯತೀತ ಜನತದಳ ತಾಲೂಕು ಘಟಕದ ಪಧಾದಿಕಾರಿಗಳು ಮತ್ತು ರೈತರು ಬೆಸ್ಕಾಂನ ಕಾರ್ಯನಿರ್ವಾಹಕ ಇಂಜಿನಿಯರ್ ಗೆ ಮನವಿ ಪತ್ರ ಸಲ್ಲಿಸಿದರು.

.ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ಬಿ.ಎಸ್ ..ಶ್ರೀನಿವಾಸ್ ಮಾತಾನಾಡಿ, ಈ ಭಾಗದ ಬಹುತೇಕ ರೈತರು ಕೃಷಿಯನ್ನೇ ನಂಬಿ ಜೀವನ ನಡೆಸುತ್ತಿದ್ದಾರೆ. ಪ್ರಸ್ತುತ ದಿನಗಳಲ್ಲಿ ಮಳೆಯ ಕೊರತೆಯಿಂದಾಗಿ, ಕೊಳವೆಬಾವಿ ಹಾಗೂ ಪಂಪ್‌ಸೆಟ್‌ಗಳ ನೀರನ್ನೇ ನೆಚ್ಚಿಕೊಂಡು ಬೆಳೆಗಳನ್ನು ಬೆಳೆಯಲಾಗುತ್ತಿದೆ. ಆದರೆ ಕಳೆದ ಕೆಲವು ದಿನಗಳಿಂದ ಬೆಸ್ಕಾಂ ವತಿಯಿಂದ ವಿದ್ಯುತ್ ಸರಬರಾಜಿನಲ್ಲಿ ತೀವ್ರ ವ್ಯತ್ಯಯ ಉಂಟಾಗುತ್ತಿದೆ. ನಮ್ಮ ಬೇಡಿಕೆಗಳು1 ತ್ರಿಫೇಸ್ ವಿದ್ಯುತ್ ಪೂರೈಕೆ 2ವಿದ್ಯುತ್ ಕಣ್ಣುಮುಚ್ಚಾಲೆ ತಡೆಗಟ್ಟುವುದು. 3ಸುಟ್ಟುಹೋದ ಟ್ರಾನ್ಸ್‌ಫಾರ್ಮರ್‌ಗಳ ಶೀಘ್ರ ಬದಲಾವಣೆ:.4ಕಡಿಮೆ ವೋಲ್ಟೇಜ್ (ಐಠಿ ಗಿಠಿಟಣಚಿಂಜ) ಸಮಸ್ಯೆ ನಿವಾರಣೆ: . ತಾವುಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಗುಣಮಟ್ಟದ ವಿದ್ಯುತ್ ಒದಗಿಸಿಕೊಡಬೇಕಾಗಿ ವಿನಂತಿ. ಒಂದು ವೇಳೆ ಸಮಸ್ಯೆ ಶೀಘ್ರವಾಗಿ ಬಗೆಹರಿಯದಿದ್ದರೆ ರೈತರೆಲ್ಲರೂ ಸೇರಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಬಿ.ಎಸ್. ಶ್ರೀನಿವಾಸ್ ತಿಳಿಸಿದರು.

ಜೆಡಿಎಸ್ ಪಕ್ಷದ ಮುಖಂಡರು ಹಾಗೂ ರೈತರುಗಳಾದ ವೆಂಕಟಾಪುರ ಗೋವಿಂದರಾಜು, ಆಚೇನಹಳ್ಳಿ ಗೋಪಾಲ್, ಚೌಳಹಳ್ಳಿ ನಾಗಭೂಷಣ್ ಸಿದ್ದಾಪುರ ಗಣೇಶ್, ಮಿಡಿತರಹಳ್ಳಿ ಮಂಜುನಾಥ ,ಮರತಿಮ್ಮನಹಳ್ಳಿ ಕ್ಯಾತಪ್ಪ, ಆಯಿಲ್ ಹನುಮಣ್ಣ ,ಶಿವಣ್ಣ, ಚಂದ್ರೇಗೌಡ, ಸಿದ್ದಪುರ ಗೇಟ್ ಮಲ್ಲೇಶ್ ಮತ್ತಿತರರು ಇದ್ದರು

# 12 ಶ್ವಾನಗಳ ರಕ್ಷಣೆ: ಪಶುವೈದ್ಯರ ವಿರುದ್ಧ ಪ್ರಕರಣ

ಬೆಂಗಳೂರು: ಸಂಶೋಧನೆ ನೆಪದಲ್ಲಿ ಬೀದಿ ನಾಯಿಗಳನ್ನ ಕರೆತಂದು ಅರವಳಿಕೆ ನೀಡದೇ ಶಸ್ತ್ರಚಿಕಿತ್ಸೆ ನಡೆಸಿ ಕ್ರೌರ್ಯವೆಸಗುತ್ತಿದ್ದ ಆರೋಪದಡಿ ಇಬ್ಬರು ಪಶುವೈದ್ಯರ ವಿರುದ್ಧ ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಫ್ಐಆರ್ ದಾಖಲು: ಜಿಬಿಎ ಪೂರ್ವ ವಲಯದ ಪಶುಪಾಲನಾ ಸಹಾಯಕ ನಿರ್ದೇಶಕ ಡಾ.ರುದ್ರೇಶ್ ಕುಮಾರ್ ಎಂಬವರು ನೀಡಿದ ದೂರಿನ ಮೇರೆಗೆ ಡಾ.ಮಂಜುನಾಥ್ ಬಿ.ಎಂ. ಹಾಗೂ ಡಾ.ಆಸಿಫ್ ಪಾಷಾ ಎಂಬುವರ ವಿರುದ್ಧ ಎಫ್ಐಆರ್ ದಾಖಲಾಗಿದೆ.

ಘಟನೆಯ ಹಿನ್ನೆಲೆ ಏನು – ದೂರಿನಲ್ಲಿರುವುದೇನು?: ಬೆಳ್ಳಂದೂರಿನ ದೊಡ್ಡಕನ್ನಹಳ್ಳಿಯ ಪ್ರೇಮ್ ಕೇರ್ ಪಶುವೈದ್ಯ ಆಸ್ಪತ್ರೆ ಹೆಸರಿನಲ್ಲಿ ಚಿಕಿತ್ಸೆ ನೆಪದಲ್ಲಿ ಪ್ರಾಣಿಗಳಿಗೆ ಹಿಂಸೆ ನೀಡಲಾಗುತ್ತಿರುವ ಬಗ್ಗೆ ಮಾಹಿತಿ ಆಧರಿಸಿ ಜಿಬಿಎ ಅಧಿಕಾರಿಗಳು ದಾಳಿ ಎಸಗಿದ್ದರು. ಪರಿಶೀಲನೆ ವೇಳೆ ಮಂಜುನಾಥ್ ಆಸಿಫ್ ಪಾಷಾ ಅವರು ಬೀದಿ ನಾಯಿಗಳನ್ನ ಆಸ್ಪತ್ರೆಗೆ ತರುತ್ತಿದ್ದರು. ಶ್ವಾನಗಳ ಕಾಲುಗಳ ಮೇಲೆ ಮಾರಣಾಂತಿಕ ಹಲ್ಲೆ ಮಾಡಿ ಅರವಳಿಕೆ ನೀಡದೇ ಶಸ್ತ್ರಚಿಕಿತ್ಸೆ ಮಾಡುವ ಮೂಲಕ ಪ್ರಾಣಿಗಳ ಮೇಲೆ ಕ್ರೌರ್ಯ ಎಸಗಿದ್ದಾರೆ ಎಂದು ದೂರಿನಲ್ಲಿ ರುದ್ರೇಶ್ ಆರೋಪಿಸಿದ್ದಾರೆ.

ಅಧಿಕಾರಿಗಳು ಹೇಳಿದ್ದಿಷ್ಟು: ಆಸಿಫ್ ಪಾಷಾ ಅವರು ಕಳೆದ ಮೂರು ವರ್ಷಗಳಿಂದ ಆಸ್ಪತ್ರೆ ನಡೆಸುತ್ತಿದ್ದರು. ಹೆಬ್ಬಾಳ ಪಶುವೈದ್ಯಕೀಯ ಕಾಲೇಜಿನಲ್ಲಿ ಮಂಜುನಾಥ್ ವ್ಯಾಸಂಗ ಮಾಡುತ್ತಿದ್ದರು. ಸಂಶೋಧನೆಗಾಗಿ ಪ್ರಾಣಿಗಳಿಗೆ ಹಿಂಸೆ ನೀಡಿ ಗಾಯಗೊಳಿಸಿ ಚಿಕಿತ್ಸೆ ನೀಡುತ್ತಿದ್ದರು. ಈ ಬಗ್ಗೆ ಸಾರ್ವಜನಿಕರಿಂದ ಬಂದ ಮಾಹಿತಿ ಆಧರಿಸಿ ಜಿಬಿಎ ಅಧಿಕಾರಿಗಳು ದಾಳಿ ಎಸಗಿದ್ದರು. 12 ನಾಯಿಗಳು ಹಾಗೂ ಒಂದು ಬೆಕ್ಕು ಅಸ್ವಸ್ಥ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ರಕ್ಷಿಸಲಾಗಿದೆ. ಇನ್ನೊಂದು ನಾಯಿ ಸತ್ತ ಸ್ಥಿತಿಯಲ್ಲಿ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.




ಕಳೆದ ಮೂರು ವರ್ಷಗಳಿಂದ ದೊಡ್ಡಕನ್ನಳ್ಳಿಯಲ್ಲಿ ಪಶುವೈದ್ಯ ಆಸ್ಪತ್ರೆ ನಡೆಸಲಾಗುತಿತ್ತು. ಆಸ್ಪತ್ರೆ ನಡೆಸುವುದಕ್ಕೆ ಅಧಿಕೃತವಾಗಿ ಪರವಾನಗಿ ಪಡೆದುಕೊಂಡಿಲ್ಲ. ಪ್ರಾಣಿಗಳೊಂದಿಗೆ ಅಮಾನುಷ ವರ್ತನೆ ತೋರಿರುವ ಬಗ್ಗೆ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಇಬ್ಬರು ಪಶುವೈದ್ಯರ ವಿರುದ್ಧದ್ಧ ಜಿಬಿಎ ಅಧಿಕಾರಿಗಳು ಬೆಳ್ಳಂದೂರು ಪೊಲೀಸರಿಗೆ ದೂರು ನೀಡಿದ್ದಾರೆ.

ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿರುವ ಪೊಲೀಸರು; ಜಿಬಿಎ ಅಧಿಕಾರಿಗಳು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಲಾಗಿದೆ. ಇಬ್ಬರು ಪಶುವೈದ್ಯರಾಗಿದ್ದು, ಸಂಶೋಧನೆಗಾಗಿ ಈ ಕೃತ್ಯ ಎಸಗಿದೆವು ಎಂದು ಪ್ರಾಥಮಿಕ ವಿಚಾರಣೆಯಲ್ಲಿ ಹೇಳಿಕೆ ನೀಡಿದ್ದಾರೆ. ಸದ್ಯ ಹೆಚ್ಚಿನ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಡಿ.ಕೆ.ಶಿ ಸರ್ಕಾರಕ್ಕೆ ನೂರು ದಿನಗಳು: 59 ಲಕ್ಷ ರೈತರಿಗೆ ಉಚಿತ ಉಳುಮೆ ಸೇವೆ!

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸರ್ಕಾರದ 100 ದಿನಗಳ ಆಡಳಿತದ ಅಂಗವಾಗಿ, ರಾಜ್ಯ ಸಚಿವ ಸಂಪುಟವು ಬುಧವಾರ ರೈತರು, ಕೈಗಾರಿಕಾ ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು ಮತ್ತು ಸಾರ್ವಜನಿಕರನ್ನು ಕೇಂದ್ರೀಕರಿಸಿ ಹಲವು ಯೋಜನೆಗಳಿಗೆ ಅನುಮೋದನೆ ನೀಡಿತು.

ವಿಶೇಷವಾಗಿ, ರೈತ–ಕೇಂದ್ರಿತ ಕಾರ್ಯಕ್ರಮವಾದ 'ಮುಖ್ಯಮಂತ್ರಿ ನೇಗಿಲ ಯೋಗಿ' ಯೋಜನೆಯು, ಪಾಳುಬಿದ್ದಿರುವ ಕೃಷಿ ಭೂಮಿಯನ್ನು ಮತ್ತೆ ಬೇಸಾಯಕ್ಕೆ ಒಳಪಡಿಸುವ ಗುರಿಯನ್ನು ಹೊಂದಿದೆ.

152.28 ಕೋಟಿ ರೂ.ಗಳ ಆರಂಭಿಕ ವೆಚ್ಚದ ಈ ಯೋಜನೆಯು, ಯಾಂತ್ರೀಕೃತ ಕೃಷಿ ಚಟುವಟಿಕೆಗಳನ್ನು ಉತ್ತೇಜಿಸುವ ಹಾಗೂ ಟ್ರಾಕ್ಟರ್‌ಗಳು ಮತ್ತು ಇತರ ಯಂತ್ರೋಪಕರಣಗಳ ಲಭ್ಯತೆಯ ಕೊರತೆಯಿಂದಾಗಿ ತಮ್ಮ ಜಮೀನುಗಳಲ್ಲಿ ಕೃಷಿ ಮಾಡಲು ಸಾಧ್ಯವಾಗದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಉಚಿತವಾಗಿ ಭೂಮಿ ಉಳುಮೆ ಸೇವೆಯನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ.

ಇದನ್ನು ಪ್ರಾಯೋಗಿಕವಾಗಿ ಪ್ರತಿ ಜಿಲ್ಲೆಯ ಒಂದರಂತೆ ಒಟ್ಟು 31 ತಾಲೂಕುಗಳಲ್ಲಿ ಜಾರಿಗೆ ತರಲಾಗುವುದ. ಮೂರು ಎಕರೆವರೆಗಿನ ಕೃಷಿ ಭೂಮಿ ಹೊಂದಿರುವ ರೈತರನ್ನು ಇದರ ವ್ಯಾಪ್ತಿಗೆ ಒಳಪಡಿಸಲಾಗುವುದು. ಭೂಮಿಯನ್ನು ಉಚಿತವಾಗಿ ಉಳುಮೆ ಮಾಡಿ ಸಿದ್ಧಪಡಿಸಲು ಸರ್ಕಾರವು ಸ್ಥಳೀಯವಾಗಿ ಟ್ರಾಕ್ಟರ್‌ಗಳನ್ನು ಬಾಡಿಗೆಗೆ ಪಡೆಯುತ್ತದೆ ಅಥವಾ ಕೃಷಿ ಇಲಾಖೆಯ ಯಂತ್ರೋಪಕರಣಗಳನ್ನು ಬಳಸುತ್ತದೆ. ಸರ್ಕಾರವು ಸುಮಾರು 500 ಟ್ರಾಕ್ಟರ್‌ಗಳನ್ನು ಖರೀದಿಸುವ ಬಗ್ಗೆಯೂ ಪರಿಶೀಲಿಸುತ್ತಿದೆ. ಈ ಯೋಜನೆ ಯಶಸ್ವಿಯಾದರೆ, ಇದನ್ನು ಎಲ್ಲಾ ತಾಲೂಕುಗಳಿಗೂ ವಿಸ್ತರಿಸಲಾಗುವುದು.

ಸಚಿವ ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ



ಮಾತನಾಡಿದ ಉಪ ಮುಖ್ಯಮಂತ್ರಿ ಡಾ. ಜಿ. ಪರಮೇ ಶ್ವರ, ಕೃಷಿಗೆ ಯೋಗ್ಯವಾಗಿದ್ದರೂ ಪಾಳುಬಿದ್ದಿರುವ ಭೂಮಿಯನ್ನು ಮತ್ತೆ ಉತ್ಪಾದನಾ ಚಟುವಟಿಕೆಗೆ ಒಳಪಡಿಸಲು ಸರ್ಕಾರ ಬಯಸುತ್ತದೆ ಎಂದು ಹೇಳಿದರು. ಸ್ವತಂತ್ರ ಅಭ್ಯರ್ಥಿಯಾಗಿ ಆಯ್ಕೆಯಾಗಿ ನಂತರ ಕಾಂಗ್ರೆಸ್ ಸೇರಿದ ಶಾಸಕ ಕೆ.ಎಚ್. ಪುಟ್ಟಸ್ವಾಮಿ ಗೌಡ ಅವರು ಗೌರಿಬಿದನೂರಿನಲ್ಲಿ ಟ್ರಾಕ್ಟರ್‌ಗಳನ್ನು ಯಶಸ್ವಿಯಾಗಿ ಬಳಸಿದ ಕ್ರಮದಿಂದ ಈ ಕಲ್ಪನೆ ಮೂಡಿದೆ ಎಂದು ಅವರು ತಿಳಿಸಿದರು.

ಕೈಗಾರಿಕಾ ಕಾರ್ಮಿಕರ ವಸತಿ ಮತ್ತು ಪ್ರಯಾಣದ ಸಮಸ್ಯೆಗಳನ್ನು ಪರಿಹರಿಸಲು, ಸರ್ಕಾರವು 'ಶ್ರಮಿಕ ನಿವಾಸ' ಉಪಕ್ರಮವನ್ನು ಪ್ರಸ್ತಾಪಿಸಿದೆ. ಈ ಯೋಜನೆಯಡಿ, ಬೃಹತ್ ಕೈಗಾರಿಕಾ ಘಟಕಗಳನ್ನು ತಮ್ಮ ಕೆಲಸದ ಸ್ಥಳದ ಸಮೀಪದಲ್ಲಿ ಸುಮಾರು 10,000 ಮನೆಗಳನ್ನು ನಿರ್ಮಿಸಲು ಪ್ರೋತ್ಸಾಹಿಸಲಾಗುವುದು. ರಾಜ್ಯ ಸರ್ಕಾರವು ಏಖಂಆಃ ನಿವೇಶನಗಳು ಸೇರಿದಂತೆ ಭೂಮಿಯನ್ನು ರಿಯಾಯಿತಿ ದರದಲ್ಲಿ ಒದಗಿಸುವುದಲ್ಲದೆ, ಸಬ್ಸಿಡಿಗಳನ್ನೂ ನೀಡಲಿದೆ.

'ಯಾರೇ ಗಿಮಿಕ್ ಎಂದರೂ ಇದು ಅದ್ಭುತ ಕೆಲಸ': ಎಪಿಎಂಸಿ ಮಾರುಕಟ್ಟೆಗೆ ಡಿ.ಕೆ ಶಿವಕುಮಾರ್ ಭೇಟಿಗೆ

ಸುಮಾರು 59 ಲಕ್ಷ ಸಣ್ಣ ಹಿಡುವಳಿದಾರ ರೈತರನ್ನು ಗುರಿಯಾಗಿಸಿಕೊಂಡು, 152 ಕೋಟಿ ರೂ. ಗಳ ಆರಂಭಿಕ ಅನುದಾನದೊಂದಿಗೆ 'ಮುಖ್ಯಮಂತ್ರಿ ನೇಗಿಲ ಯೋಗಿ' ಯೋಜನೆಯ ಪ್ರಾಯೋಗಿಕ ಹಂತವನ್ನು ಪ್ರಾರಂಭಿಸಲಾಗುವುದು," ಎಂದು ಅವರು ಹೇಳಿದರು. ಸಂಪುಟವು 493 ಕೋಟಿ ರೂ. ವೆಚ್ಚದಲ್ಲಿ 2026–29ರ ಅವಧಿಗೆ 'ತೇಗ ಸಿರಿ' (ತೇಗದ ಮರಗಳ ಪಾಲನೆ ಯೋಜನೆ) ಯೋಜನೆಗೂ ಅನುಮೋದನೆ ನೀಡಿತು. ಈ ಯೋಜನೆಯಡಿ, ಅರಣ್ಯ ಇಲಾಖೆಯು ಸಾರ್ವಜನಿಕ ರಸ್ತೆಗಳ ಬದಿಗಳಲ್ಲಿ ತೇಗದ ಸಸಿಗಳನ್ನು ನೆಡಲಿದೆ. ಜಮೀನು ಹೊಂದಿರುವ ರೈತರಿಗೆ ಮರಗಳ ಹಕ್ಕು ಅಥವಾ 'ಮರಗಳ ಪಟ್ಟಾ' ನೀಡಲಾಗುವುದು ಮತ್ತು ಅವರು ಆ ಮರಗಳನ್ನು ಪೋಷಿಸಬೇಕಾಗುತ್ತದೆ. ಮರಗಳು ಬೆಳೆದು ಪಕ್ವವಾದ ನಂತರ (ಇದಕ್ಕೆ 10–15 ವರ್ಷಗಳು ಬೇಕಾಗಬಹುದು ಎಂದು ಅಂದಾಜಿಸಲಾಗಿದೆ), ಆದಾಯದ 70% ರೈತರಿಗೆ ಮತ್ತು 30% ಸರ್ಕಾರಕ್ಕೆ ಸೇರುತ್ತದೆ.

ಹೈಕೋರ್ಟ್ ಶ್ಲಾಘನೆ

ಈ ಉಪಕ್ರಮವು ಮಾಹಿತಿ ತಂತ್ರಜ್ಞಾನ (ಐಟಿ) ಮತ್ತು ಜೈವಿಕ ತಂತ್ರಜ್ಞಾನದಂತಹ ವಲಯಗಳನ್ನು ಒಳಗೊಂಡಿರುತ್ತದೆ; ಈ ವಸತಿಗಳಲ್ಲಿನ ಕೊಠಡಿಗಳ ಗಾತ್ರ ಮತ್ತು ಅಗತ್ಯ ಸೌಲಭ್ಯಗಳ ಕುರಿತು ಸಂಬಂಧಪಟ್ಟ ಇಲಾಖೆಯು ಮಾರ್ಗಸೂಚಿಗಳನ್ನು ನೀಡಲಿದೆ.

ಸಂಪುಟವು 10.78 ಕೋಟಿ ರೂ. ವೆಚ್ಚದಲ್ಲಿ 'ಹಬ್–ಅಂಡ್–ಸ್ಪೋಕ್' (ಕೇಂದ್ರ ಮತ್ತು ಶಾಖಾ ಜಾಲ) ಮಾದರಿಯ ಆಧಾರದ ಮೇಲೆ ಐಟಿ–ಸಕ್ರಿಯ ಟೆಲಿ–ಐಸಿಯು (ಖಿಜಟಜ–ಐಅಗ) ಜಾಲಕ್ಕೆ ಅನುಮೋದನೆ ನೀಡಿತು. ಇದು 185 ಕೇಂದ್ರಗಳನ್ನು ಒಳಗೊಂಡಿರುವ 11 ಹಬ್‌ಗಳು ಮತ್ತು 131 ಸ್ಪೋಕ್‌ಗಳನ್ನು (ಶಾಖಾ ಕೇಂದ್ರಗಳು) ಸಂಪರ್ಕಿಸುತ್ತದೆ. ಇದು ಎಕ್ಸ್–ರೇ ಮತ್ತು ಇಸಿಜಿ (ಇಅಉ) ಸೇರಿದಂತೆ ರೋಗಿಗಳ ಮಾಹಿತಿಯ ಡಿಜಿಟಲೀಕರಣ ಮತ್ತು ನಿರ್ವಹಣೆಯನ್ನು ಸುಗಮಗೊಳಿಸುತ್ತದೆ.

ಹಸ್ತಚಾಲಿತ ರೇಡಿಯಾಲಜಿ ವ್ಯವಸ್ಥೆಗಳನ್ನು ಬದಲಾಯಿಸಲು ಮತ್ತು ಸ್ಕ್ಯಾನ್‌ಗಳ ಡಿಜಿಟಲ್ ರವಾನೆ ಹಾಗೂ ತಜ್ಞರ ಮೌಲ್ಯಮಾಪನವನ್ನು ಸಕ್ರಿಯಗೊಳಿಸಲು, 162 ಸರ್ಕಾರಿ ಆಸ್ಪತ್ರೆಗಳಿಗೆ 40.50 ಕೋಟಿ ರೂ. ವೆಚ್ಚದ ಡಿಜಿಟಲ್ ರೇಡಿಯೋಗ್ರಫಿ ಯೋಜನೆಗೂ ಅನುಮೋದನೆ ನೀಡಲಾಯಿತು. 2026–27ರ ಶೈಕ್ಷಣಿಕ ವರ್ಷದಿಂದ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆಗಳನ್ನು ಪುನರಾರಂಭಿಸಲು ಸಂಪುಟ ಅನುಮೋದನೆ ನೀಡಿತು. ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ನೇತೃತ್ವದ ಸಮಿತಿಯು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ ಸಮಾಲೋಚನೆ ನಡೆಸಿದ ನಂತರ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ.

ಪ್ರತಿ ವಿದ್ಯಾರ್ಥಿ ಸಂಘವು ಒಬ್ಬ ಅಧ್ಯಕ್ಷರು, ಇಬ್ಬರು ಉಪಾಧ್ಯಕ್ಷರು (ಒಬ್ಬ ಮಹಿಳೆ ಸೇರಿದಂತೆ), ಒಬ್ಬ ಪ್ರಧಾನ ಕಾರ್ಯದರ್ಶಿ, ಇಬ್ಬರು ಜಂಟಿ ಕಾರ್ಯದರ್ಶಿಗಳು (ಒಬ್ಬ ಮಹಿಳೆ ಸೇರಿದಂತೆ) ಮತ್ತು ಆರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಹೊಂದಿರುತ್ತದೆ. ಜಾತಿ ಅಥವಾ ಧರ್ಮದ ಆಧಾರದ ಮೇಲೆ ಯಾವುದೇ ಮೀಸಲಾತಿ ಇರುವುದಿಲ್ಲ," ಎಂದು ಪರಮೇಶ್ವರ ಹೇಳಿದರು.

ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಚುನಾವಣೆಗಳನ್ನು ನಡೆಸುವುದು ಕಡ್ಡಾಯವಾಗಿದ್ದರೂ, ವಿದ್ಯಾರ್ಥಿಗಳು ಅದರಿಂದ ದೂರ ಉಳಿಯುವ ಆಯ್ಕೆ ಇರುತ್ತದೆ ಎಂದು ಅವರು ಸ್ಪಷ್ಟಪಡಿಸಿದರು. ವಿದ್ಯಾರ್ಥಿ ಸಂಘಟನೆಗಳು ರಾಜಕೀಯ ಪಕ್ಷಗಳ ಮುಂಚೂಣಿ ಸಂಘಟನೆಗಳಾಗಿ ಕಾರ್ಯನಿರ್ವಹಿಸುವುದನ್ನು ಸರ್ಕಾರ ತಡೆಯಲಿದೆ; ಆದಾಗ್ಯೂ, ವೈಯಕ್ತಿಕ ವಿದ್ಯಾರ್ಥಿಗಳು ರಾಜಕೀಯ ಸಂಘಟನೆಗಳ ಸದಸ್ಯರಾಗಿರಬಹುದು.

'ರಾಜ್ಯ ನೆಟ್‌ವರ್ಕ್ ಗ್ರಿಡ್ ಯೋಜನೆ'ಯ ಅಡಿಯಲ್ಲಿ, ಪಟ್ಟಣದ ಕೇಂದ್ರ ಭಾಗಗಳಿಂದ ವಾಹನ ಸಂಚಾರವನ್ನು ಬೇರೆಡೆಗೆ ತಿರುಗಿಸಲು, ಟೈರ್–2 ಮತ್ತು ಟೈರ್–3 ಪಟ್ಟಣಗಳು ??ಹಾಗೂ ತಾಲೂಕು ಕೇಂದ್ರಗಳು ಸೇರಿದಂತೆ 172 ಸ್ಥಳೀಯ ಯೋಜನಾ ಪ್ರದೇಶಗಳ ಸುತ್ತಲೂ ವರ್ತುಲ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು. ಈ ಪ್ರದೇಶದ ಹೊರವಲಯದಲ್ಲಿ 2 ಕಿ.ಮೀ. ವ್ಯಾಪ್ತಿಯ 'ಪ್ರಭಾವ/ಬಫರ್ ಹಸಿರು ವಲಯ'ವನ್ನು (buffer green zone) ಗುರುತಿಸಲಾಗುವುದು ಮತ್ತು ಅಲ್ಲಿ ಅನಧಿಕೃತ ನಿರ್ಮಾಣಗಳನ್ನು ನಿರ್ಬಂಧಿಸಲಾಗುವುದು.

ಐದು ವರ್ಷಗಳಲ್ಲಿ 20,000 ಕೋಟಿ ರೂ.ಗಳ ಖಾಸಗಿ ಹೂಡಿಕೆ ಮತ್ತು ಗಣನೀಯ ಉದ್ಯೋಗ ಸೃಷ್ಟಿಯನ್ನು ಗುರಿಯಾಗಿರಿಸಿಕೊಂಡಿರುವ 'ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2026–31'ಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದೆ. ಬೆಂಗಳೂರಿನಿಂದಾಚೆಗೆ ಗುರುತಿಸಲಾದ 33 ಪ್ರಮುಖ ತಾಲೂಕುಗಳಿಗೆ ಕೈಗಾರಿಕೆಗಳು ವಿಸ್ತರಣೆಯಾಗುವುದನ್ನು ಉತ್ತೇಜಿಸಲು ಈ ನೀತಿಯು ಉಡುಪು ತಯಾರಿಕೆಗೆ ಪ್ರೋತ್ಸಾಹ ನೀಡಲಾಗುತ್ತದೆ.

ಅರ್ಹ ಘಟಕಗಳು ಶೇ. 5ರಷ್ಟು ಸಾಲ–ಸಂಪರ್ಕಿತ ಬಂಡವಾಳ ಸಹಾಯಧನ ಮತ್ತು ಪ್ರತಿ ಯೂನಿಟ್‌ಗೆ 2 ರೂ.ಗಳ ವಿದ್ಯುತ್ ದರ ಸಹಾಯಧನವನ್ನು ಪಡೆಯಲಿವೆ. ಸರ್ಕಾರವು ಸುಮಾರು 4,000–5,000 ಕೋಟಿ ರೂ. ಗಳ ಬಂಡವಾಳ ಬೆಂಬಲವನ್ನು ಒದಗಿಸುವ ನಿರೀಕ್ಷೆಯಿದೆ.

# ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸುವಂತಾಗಬೇಕು

ಶಿರಾ:ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸುವಂತಾಗಬೇಕು ಸಾಮಾಜಿಕ ಚಿಂತನೆಯ ಬಗ್ಗೆ ಅರಿವು ಹೆಚ್ಚಾಗಬೇಕು ಧಾರ್ಮಿಕ ಮನೋಗುಣ ಅರಿತು ಪ್ರತಿಯೊಬ್ಬರ ಶ್ರೇಯೋಭಿಲಾಷಿಗಾಗಿ ಕೆಲಸ ಮಾಡುವ ಮನಸ್ಥಿತಿ ಹೊಂದಬೇಕು ತುಮಕೂರಿನ ರಾಮಕೃಷ್ಣ ಆಶ್ರಮದ ವೀರೇಶಾನಂದ ಸ್ವಾಮೀಜಿಗಳು ನುಡಿದರು. ಅವರು ಶಿರಾ ತಾಲೂಕು ಬುಕ್ಕಾಪಟ್ಟಣ ಗ್ರಾಮದ ಶ್ರೀ ಉದ್ಭವ ನಾಟ್ಯ ಗಣಪತಿ ದೇವಸ್ಥಾನದ ಗೋಪುರ ಉದ್ಘಾಟನೆ ಕಳಶ ಪ್ರತಿಷ್ಠಾಪನೆ, ಕೇತು ಸ್ತಂಭ ಸ್ಥಾಪನೆ, 21 ವಿವಿಧ ಭಂಗಿಯ ಗಣೇಶನ ಮೂರ್ತಿಗಳ ಪ್ರತಿಷ್ಠಾಪನ ಕಾರ್ಯಕ್ರಮದಲ್ಲಿ ಭಾಗವಹಿಸಿ ಆರ್ಶೀವಚನ ನೀಡಿದರು. ಮಕ್ಕಳು ತಂದೆ ತಾಯಿಯರ ಹೆಸರು ಉಳಿಸುವ ಮಕ್ಕಳಾಗುವ ಮೂಲಕ ನಾಡಿಗೆ ಕೀರ್ತಿರುವಂತಾಗಬೇಕು ಪ್ರತಿಯೊಬ್ಬರಲ್ಲೂ ಸಾಮಾಜಿಕ ಸಾಮರಸ್ಯ ಬೆಳೆಸುವಂಥಾಗಬೇಕು ಧರ್ಮ ಜಾಗರಣೆಯಲ್ಲಿ ಪ್ರತಿಯೊಬ್ಬರ ಪಾತ್ರ ಅಗತ್ಯವಾಗಿದೆ ಹಾಗಾಗಿ ಧಾರ್ಮಿಕ



ಕಾರ್ಯಗಳಲ್ಲಿ ಪ್ರತಿಯೊಬ್ಬರು ಕ್ರಿಯಾಶೀಲರಾಗಬೇಕು ಎಂದು ಆಶೀರ್ವಚಿಸಿದರು.

ಸಿದ್ಧರಬೆಟ್ಟದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ಆರ್ಶೀವಚನ ನೀಡಿ ಶ್ರೀರಾಮ ತಂದೆಯ ಮಾತಿಗೆ ತಪ್ಪದ ಮಗನಾದರೆ ಗಣೇಶ ತಾಯಿಯ ಆದೇಶ ಪಾಲನೆಗಾಗಿ ತನ್ನ ತಂದೆ ಶಿವನನ್ನೇ ಎದುರಿಸಿ ಲೋಕಕ್ಕೆ ಮೊದಲ ಪೂಜಿತನಾಗಿ ನೆಲೆಸಿದವನು ಶ್ರೀ ಗಣೇಶ ಹಾಗಾಗಿ ಶ್ರೀರಾಮ ಹಾಗೂ ಗಣೇಶ ಇಬ್ಬರೂ ಸಹ ನಮಗೆ ತಾಯಿ ತಂದೆಯರ ವಾಕ್ಯ ಪರಿಪಾಲನೆಯ ಮಹತ್ವ ತಿಳಿಸುವ ದೇವರುಗಳಾಗಿದ್ದಾರೆ ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳ ಭರಾಟೆಯಿಂದಾಗಿ ಜನರು ಧಾರ್ಮಿಕ ಕ್ಷೇತ್ರಗಳ ಧಾರ್ಮಿಕ ಕಾರ್ಯಗಳ ಬಗ್ಗೆ ಅಸಡ್ಡೆ ತೋರುತ್ತಿರುವುದು ಬಹಳ ಸೋಚನೀಯ ಸಂಗತಿಯಾಗಿದೆ. ತಮ್ಮ ಮಕ್ಕಳನ್ನು ದೇವಸ್ಥಾನ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ತೊಡಗುವಂತೆ ಮಾಡುವುದರ ಮೂಲಕ ಮುಂದಿನ ಪೀಳಿಗೆಗೆ ಧಾರ್ಮಿಕ ಕಾರ್ಯಗಳ ಬಗ್ಗೆ ಅರಿವು ಮೂಡಿಸುವ ಅಗತ್ಯತೆ ಇದೆ ಎಂದು ತಿಳಿಸಿದರು.

ಎಲೆರಾಂಪುರದ ಹನುಮಂತನಾಥ ಸ್ವಾಮೀಜಿಗಳು ಮಾತನಾಡಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವಲ್ಲಿ ತಾಯಂದಿರ ಪಾತ್ರ ಹಿರಿದಾಗಿದೆ ಪ್ರತಿಯೊಬ್ಬ ಮಗುವು ತನ್ನ ತಾಯಿಯನ್ನು ಮೊದಲ ಗುರುವನಾಗಿ ಸ್ವೀಕರಿಸುತ್ತಾನೆ ಪ್ರತಿಯೊಬ್ಬ ತಾಯಿಯೂ ಸಹ ಅದಕ್ಕಾಗಿ ಹೆಚ್ಚಿನ ಜಾಗೃತ ವಹಿಸಬೇಕು ಎಂದರು.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಸಿ ಬಿ ಸುರೇಶ್ ಬಾಬು ಮಾತನಾಡಿ ಜನರಲ್ಲಿ ಧಾರ್ಮಿಕ ಚಿಂತನೆ ಹೆಚ್ಚಿಸಬೇಕು ಸದ್ಭಾವನೆ ಮೂಡಿಸುವಲ್ಲಿ ದೇವಸ್ಥಾನಗಳು ಅತಿ ಮುಖ್ಯ ಪಾತ್ರ ವಹಿಸುತ್ತವೆ. ಈ ನಿಟ್ಟಿನಲ್ಲಿ ಬುಕ್ಕಾಪಟ್ಟಣದ ಉದ್ಭವ ಗಣಪತಿ ದೇವಸ್ಥಾನ ಸುಂದರವಾದ ಶಿಲ್ಪವನ್ನು ಹೊಂದಿದ್ದು ಇಂದಿನ ಕಾಲದ ಗತವೈಭವವನ್ನು ಸಾರುವಂತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಎಲ್ಲಾ ಪಕ್ಷದ ಮುಖಂಡರು ಶ್ರೀ ಉದ್ಭವ ಗಣಪತಿ ಸೇವಾ ಸಮಿತಿ ಅಧ್ಯಕ್ಷರು ಸದಸ್ಯರು ನಿರ್ದೇಶಕರು ಹಾಗೂ ಎಲ್ಲಾ ದೇವಸ್ಥಾನಗಳ ಸೇವಾ ಸಮಿತಿ ಅಧ್ಯಕ್ಷರುಗಳು ಸದಸ್ಯರುಗಳು ಸಾವಿರಾರು ಜನ ಭಕ್ತಾದಿಗಳು ಅಕ್ಕಪಕ್ಕದ ಗ್ರಾಮಗಳ ಗ್ರಾಮಸ್ಥರು ಭಾಗವಹಿಸಿದ್ದರು.

# ಉಪವಾಸ ಸತ್ಯಾಗ್ರಹ ಅಂತ್ಯ ಮಾಡಿದ ವಸಂತಕುಮಾರ್

ತುರುವೇಕೆರೆ: ತಾಲೂಕಿನಲ್ಲಿ ನಡೆದಿರುವ ಹಲವಾರು ಕಾಮಗಾರಿಗಳಲ್ಲಿನ ಭ್ರಷ್ಟಾಚಾರ, ಪಟ್ಟಣದ ಒಳ ಚರಂಡಿ ವ್ಯವಸ್ಥೆಯ ಅಧ್ವಾನ, ವಾಣಿಜ್ಯ ಸಂಕೀರ್ಣ ಪ್ರಾರಂಭ,ಕೆರೆ ಒತ್ತುವರಿ ಸೇರಿದಂತೆ ವಿವಿಧ ಬೇಡಿಕೆಗಳ ಕುರಿತು ಕಾಂಗ್ರೆಸ್ ಮುಖಂಡ ಬೆಸ್ಕಾಂ ನ ಮಾಜಿ ನಿರ್ದೇಶಕ ಬಿ.ಎಸ್.ವಸಂತಕುಮಾರ್ ಸೋಮವಾರದಿಂದ ಪ್ರಾರಂಭಿಸಿದ್ದ ಉಪ ವಾಸ ಸತ್ಯಾಗ್ರಹ ಮಂಗಳವಾರ ಮಧ್ಯಾಹ್ನ ಅಂತ್ಯಗೊಂಡಿತು.

ತಾಲೂಕಿನಲ್ಲಿ ಕಳೆದ ಮೂರು ವರ್ಷದಿಂದ ಸುಮಾರು ನಾನೂರಕ್ಕೂ ಹೆಚ್ಚು ಕೋಟಿಯ ಕಾಮಗಾರಿ ಮಾಡಲಾಗಿದೆ. ಅದರಲ್ಲಿ ಹಲವಾರು ಕಾಮಗಾರಿಗಳನ್ನು ಮಾಡದೇ ಬಿಲ್ ಗಳನ್ನು ಪಡೆಯಲಾಗಿದೆ.

ಕೆ ಆರ್ ಐ ಡಿ ಎಲ್ ನಲ್ಲಿ ಸುಮಾರು 25 ಕೋಟಿ ಹಣ ಈಗ ಬಂದಿದೆ. ಅದರಲ್ಲಿ ಮಾಡಲಾಗಿರುವ ಕಾಮಗಾರಿ ಕಳಪೆ ಯಿಂದ ಕೂಡಿದೆ. ಜಲ ಜೀವನ್ ನಲ್ಲಿ ಮಾಡಲಾಗಿರುವ



ಕಾಮಗಾರಿಗಳು ಸಂಪೂರ್ಣ ಹಾಳಾಗಿದೆ. ಸಿಮೆಂಟ್ ರಸ್ತೆಗಳನ್ನು ಕಿತ್ತು ಜನರು ಓಡಾಡದ ರೀತಿ ಮಾಡಲಾಗಿದೆ. ಒಳ ಚರಂಡಿ ನಿರ್ಮಾಣಕ್ಕೆ ಸುಮಾರು 17 ಕೋಟಿ ವ್ಯಯಿಸಲಾಗಿದೆ. ಇದುವರೆಗೂ ಸಂಪೂರ್ಣಗೊಂಡಿಲ್ಲ. ಪಟ್ಟಣದಲ್ಲಿರುವ ವಾಣಿಜ್ಯ ಸಂಕೀರ್ಣ ಉದ್ಘಾಟನೆಗೊಂಡು ಮೂರು ವರ್ಷಗಳೇ ಕಳೆದಿದೆ. ಆದರೂ ಸಹ ಸಾರ್ವಜನಿಕರಿಗೆ ನೀಡಿಲ್ಲ. ಪ್ರತಿ ತಿಂಗಳು 7 ಲಕ್ಷ ರೂ ಪಟ್ಟಣ ಪಂಚಾಯಿತಿಗೆ ನಷ್ಟವಾಗುತ್ತಿದೆ. ಪಟ್ಟಣದ ಗ್ರಾಮದ ದೇವತೆ ಉಡುಸಲಮ್ಮ ದೇವಾಲಯದ ಹಿಂಭಾಗದಲ್ಲಿ ಕೆರೆ ಒತ್ತುವರಿ ಮಾಡಿ ಸಿಮೆಂಟ್ ಹಾಕಲಾಗಿದೆ. ಇದಕ್ಕೆ ಕಾರಣಯಾರು?. ಅವರ ವಿರುದ್ಧ ಏಕೆ ಕ್ರಮ ಕೈಗೊಂಡಿಲ್ಲ ಎಂದು ಬಿ.ಎಸ್.ವಸಂತ ಕುಮಾರ್ ಪ್ರಶ್ನಿಸಿದ್ದಾರೆ ಇಷ್ಟೆಲ್ಲಾ ಅಧ್ವಾನಗಳನ್ನು ಶಾಸಕರು ಕಂಡೂ ಕಾಣದಂತಿರುವ ಉದ್ದೇಶವಾದರೂ ಏನು. ಈ ಕುರಿತು ಶಾಸಕರೇ ಖುದ್ದು ವಾಸ್ತವವನ್ನು ಬಹಿರಂಗಪಡಿಸಬೇಕು. ತಾವು ಪ್ರಾಮಾಣಿಕರಾಗಿದ್ದರೆ ಕೂಡಲೇ ಸೂಕ್ತ ತನಿಖೆಗೆ ಆಗ್ರಹಿಸಬೇಕೆಂದು ಅವರು ಒತ್ತಾಯಿಸಿದರು.

ತಹಸೀಲ್ದಾರ್ ಎನ್. ಎ.ಕುಂಇ ಅಹಮದ್ ರಿಗೆ ಮನವಿ ಸಲ್ಲಿಸಿದ ಬಿ.ಎಸ್.ವಸಂತ ಕುಮಾರ್ ನೇತೃತ್ವದ ಕಾಂಗ್ರೆಸ್ ಮುಖಂಡರು ಈ ಕುರಿತು 20 ದಿನಗಳ ಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು. ತಪ್ಪಿ ದಲ್ಲಿ ತುರುವೇಕೆರೆ ಬಂದ್ ಗೆ ಕರೆ ಕೊಡ ಲಾಗುವುದು ಎಂದು ಎಚ್ಚರಿಸಿದರು.

ಪಟ್ಟಣ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀನಾಥ್ ಬಾಬು ರವರು ವಾಣಿ ಜ್ಯ ಸಂಕೀರ್ಣದ ಮುಂದೆ ಬೀದಿಬದಿ ವ್ಯಾಪಾರಿಗಳಿದ್ದು ಅವರು ನ್ಯಾಯಾಲಯದ ಮೊರೆ ಹೋಗಿದ್ದಾರೆ.

ಈ ವೇಳೆ ಗೋಣಿ ಲಕ್ಷ್ಮೀಕಾಂತ್, ಪ್ರಸನ್ನ ಕುಮಾರ್, ಮಾಜಿ ಸದಸ್ಯ ಎನ್ . ಆರ್. ಜಯರಾಮ್, ಯಜಮಾನ್ ಮಹೇಶ್, ನಂಜುಂಡಪ್ಪ, ಟಿ.ಎನ್.ಶಿವರಾಜು,ನೆಮ್ಮದಿ ಗ್ರಾಮ ಮೂರ್ತಿ, ಮಲ್ಲೂರು ತಿಮ್ಮೇಶ್, ಲಕ್ಷ್ಮೀದೇವಮ್ಮ, ಜವರಪ್ಪ, ಸುನಿಲ್, ನಾಗಲಾಪುರ ಜಗದೀಶ್, ನಿವೃತ್ತ ಉಪನ್ಯಾಸಕ ನಂಜುಂಡಪ್ಪ, ಪಿ.ಕಲ್ಲಳ್ಳಿ ಬಸವರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಪ್ರೊ.ಅಶ್ವಿನಿ ಬಿ. ಕುಲಸಚಿವರಾಗಿ ನೇಮಕ



ತುಮಕೂರು: ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರಾಗಿ ನೇಮಕಗೊಂಡಿರುವ ತುಮಕೂರು ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾದ ಪ್ರೊ. ಅಶ್ವಿನಿ ಬಿ. ಅವರನ್ನು ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ ಸನ್ಮಾನಿಸಲಾಯಿತು.

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾದ ಪ್ರೊ. ಸುನಿತಾ ವಿ. ಗಾಣಿಗೇರ ಅವರು ಪ್ರೊ. ಅಶ್ವಿನಿ ಬಿ. ಅವರನ್ನು ಸನ್ಮಾನಿಸಿ, ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿ ವರಾಗಿ ನೇಮಕಗೊಂಡಿರುವುದು ತುಮಕೂರು ವಿಶ್ವವಿದ್ಯಾ ನಿಲಯದ ಸಮಾಜಶಾಸ್ತ್ರ ವಿಭಾಗಕ್ಕೆ ಹೆಮ್ಮೆಯ ಸಂಗತಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಸ್ನಾತಕ ಸಮಾಜಶಾಸ್ತ್ರ ವಿಭಾಗದ ಉಪನ್ಯಾಸಕರಾದ ಡಾ. ಮಾದಪ್ಪ ಡಿ., ಡಾ. ವೀರೇಶ್ ಎಂ., ಡಾ. ಮಂಜುನಾಥ ಎನ್.ಪಿ. ಹಾಗೂ ಸ್ನಾತಕೋತ್ತರ ಸಮಾಜ ಶಾಸ್ತ್ರ ವಿಭಾಗ ದ ಉಪನ್ಯಾಸಕರಾದ ಡಾ. ನಂಜಾಮರಿ ಉಪಸ್ಥಿತರಿದ್ದು, ಪ್ರೊ. ಅಶ್ವಿನಿ ಬಿ. ಅವರಿಗೆ ಅಭಿನಂದನೆ ಸಲ್ಲಿಸಿದರು..

# ಮಣ್ಣಿನ ಕಾಯಕವೇ ಬದುಕಿಗೆ ಆಸರೆ



ಹುಳಿಯಾರು: ಗೌರಿ–ಗಣೇಶ ಹಬ್ಬ ಬಂತೆಂದರೆ ಗಣೇಶನ ಮೂರ್ತಿಗೆ ಬೇಡಿಕೆಗೆ ಕೊನೆಯಿರುವುದಿಲ್ಲ. ಹಿಂದೆಲ್ಲಾ ಊರಿಗೊಂದೇ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುತ್ತಿತ್ತು. ಆದರೆ ಇಂದಿನ ದಿನಗಳಲ್ಲಿ ಗಲ್ಲಿಗಲ್ಲಿಯಲ್ಲೂ ಗಣೇಶ ರಾರಾಜಿಸುತ್ತಿದ್ದು, ಮನೆಗಳಲ್ಲೂ ಗಣೇಶನನ್ನು ಕೂರಿಸುವವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ. ಈ ಮಾರುಕಟ್ಟೆಯನ್ನು ನಂಬಿ ಅನೇಕರು ಬದುಕು ಕಟ್ಟಿಕೊಂಡಿದ್ದಾರೆ. ಆದರೂ ಸ್ಥಳೀಯವಾಗಿ ಮೂರ್ತಿ ಮಾಡುವವರ ಸಂಖ್ಯೆ ಕ್ಷೀಣಿಸಿ, ಹೊರ ಜಿಲ್ಲೆಗಳಿಂದ ಮೂರ್ತಿಗಳನ್ನು ತಂದು ಮಾರಾಟ ಮಾಡುವವರೇ ಹೆಚ್ಚಾಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಹುಳಿಯಾರಿನ ಪ್ರಕಾಶ್ ಅವರು ಪರಿಸರ ಸ್ನೇಹಿ ಗಣಪನನ್ನು ತಮ್ಮ ಕೈಯಲ್ಲೇ ತಯಾರಿಸಿ ಮಾರಾಟ ಮಾಡುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಹುಳಿಯಾರು–ತಿಪಟೂರು ರಸ್ತೆಯ ಪಕ್ಕದಲ್ಲಿಯೇ ಶೆಡ್ ನಿರ್ಮಿಸಿ ಪ್ರತಿವರ್ಷ ನೂರಾರು ಗೌರಿ–ಗಣೇಶ ಮೂರ್ತಿಗಳನ್ನು ತಯಾರಿಸಿ ಅವರು ಗಮನ ಸೆಳೆಯುತ್ತಿದ್ದಾರೆ. ಬೆಂಗಳೂರು, ಹಿರಿಯೂರು, ಶ್ರೀರಾಂಪುರ ಸೇರಿದಂತೆ ವಿವಿಧ ಊರುಗಳಿಗೂ ಇಲ್ಲಿಂದ ನೂರಾರು ಮೂರ್ತಿಗಳು ಸಾಗಣೆಯಾಗುತ್ತವೆ. ತಂದೆಯ ಕಾಲದಿಂದಲೂ ಬಂದಿರುವ ಈ ಮೂರ್ತಿ ತಯಾರಿಕಾ ಕಾಯಕವನ್ನೇ ಅವರು ತಮ್ಮ ಜೀವನದ ಆಧಾರವಾಗಿಸಿಕೊಂಡಿದ್ದಾರೆ.

ಬಸವಜಯಂತಿಯಿಂದಲೇ ಕುಟುಂಬದವರೆಲ್ಲರೂ ಸೇರಿ ಮೂರ್ತಿ ತಯಾರಿಕಾ ಕಾರ್ಯಕ್ಕೆ ಚಾಲನೆ ನೀಡುತ್ತಾರೆ. ಇಟ್ಟಿಗೆ ಕಾರ್ಖಾನೆಗಳು ಖಾಲಿ ಮಾಡಿರುವ ಸ್ಥಳದಿಂದ ಮೂವತ್ತರಿಂದ ನಲವತ್ತು ಕಿ.ಮೀ ದೂರದಿಂದ ಜೇಡಿಮಣ್ಣನ್ನು ತಂದು, ಅದನ್ನು ಹದಗೊಳಿಸಿ ವೈವಿಧ್ಯಮಯ ಮಾದರಿಯ ಆಕರ್ಷಕ ಮೂರ್ತಿಗಳನ್ನು ರೂಪಿಸುತ್ತಾರೆ. ಯಾವುದೇ ರಾಸಾಯನಿಕ ಬಣ್ಣಗಳನ್ನು ಬಳಸದೆ, ಕೇವಲ ವಾಟರ್ ಪೇಂಟ್ ಬಳಸಿ ಪರಿಸರಕ್ಕೆ ಪೂರಕವಾದ ಮೂರ್ತಿಗಳನ್ನು ಸಿದ್ಧಪಡಿಸುವುದು ಇವರ ವಿಶೇಷತೆ. ಈ ಕಾರಣಕ್ಕಾಗಿಯೇ ಸುತ್ತಮುತ್ತಲಿನ ಹಳ್ಳಿಗಳ ಜನರು ಮೊದಲೇ ಆರ್ಡರ್ ನೀಡಿ ವಿಶೇಷ ಮೂರ್ತಿಗಳನ್ನು ಮಾಡಿಸಿಕೊಂಡು ಹೋಗುತ್ತಾರೆ.

ಮಣ್ಣಿನ ಗಣಪತಿ ತಯಾರಕರಿಗೆ 'ಪ್ಲಾಸ್ಟರ್ ಆಫ್ ಪ್ಯಾರಿಸ್' (ಪಿಒಪಿ) ಮೂರ್ತಿಗಳು ಆರ್ಥಿಕ ಹೊಡೆತ ನೀಡಿರುವುದು ಸುಳ್ಳಲ್ಲ. ಆದರೂ ಪಿಒಪಿಯ ಮೋಹ ಹೋಗದೆ, ಅದನ್ನು ಮೀರಿಸುವ ಸಾಂಪ್ರದಾಯಿಕ ಶೈಲಿಯ ನೈಸರ್ಗಿಕ ಹಾಗೂ ಆಕರ್ಷಕ ಗಣಪನನ್ನು ತಯಾರಿಸಿ ಪ್ರಕಾಶ್ ಕಣ್ಣನ ಸೆಳೆಯುತ್ತಿದ್ದಾರೆ. ತಮ್ಮ ಬಳಿ ಮೂರ್ತಿ ಖರೀದಿಸಲು ಬರುವ ಗ್ರಾಹಕರಿಗೆ ಪಿಒಪಿ ಮೂರ್ತಿಗಳ ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಿ, ಮಣ್ಣಿನ ಮೂರ್ತಿಯನ್ನೇ ಆಯ್ಕೆ ಮಾಡಿಕೊಳ್ಳುವಂತೆ ಪ್ರೇರೇಪಿಸುವ ಮೂಲಕ ಪರಿಸರ ಸಂರಕ್ಷಣೆಗೆ ತಮ್ಮದೇ ಆದ ಸಾರ್ಥಕ ಕೊಡುಗೆ ನೀಡುತ್ತಿದ್ದಾರೆ.

ಪ್ರತಿವರ್ಷದಂತೆ ಈ ಬಾರಿಯೂ ಹೆಚ್ಚಿನ ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನು ತಯಾರಿಸಿದ್ದು ಕೊನೆ ಹಂತ ಅಂದರೆ ಫೈನಿಂಟ್ ವರ್ಕ್‌ನಲ್ಲಿ ಪ್ರಕಾಶ್ ಮತ್ತು ಆತನ ಕುಟುಂಬ ತಲ್ಲೀನರಾಗಿದ್ದಾರೆ. ಪ್ರಕಾಶ್ ಅವರು ತಮ್ಮ ಶೆಡ್ ಬಳಿ ವ್ಯಾಪಾರ ನಡೆಸಿದರೆ, ಹುಳಿಯಾರು ಪಟ್ಟಣದಲ್ಲಿ ಅವರ ಕುಟುಂಬದವರು ಮಾರಾಟದಲ್ಲಿ ತೊಡಗಿಸಿಕೊಳ್ಳುತ್ತಾರೆ. ಹಿಂದಿನ ವರ್ಷ ಪಿಒಪಿ ಮೂರ್ತಿಗಳ ಹಾವಳಿಯಿಂದ ಲಕ್ಷಾಂತರ ರೂ. ಮೌಲ್ಯದ ಮಣ್ಣಿನ ಗಣಪಗಳು ಉಳಿದು ನಷ್ಟ ಉಂಟಾಗಿತ್ತು. ಈ ವರ್ಷ ಮಣ್ಣಿನ ಮೂರ್ತಿಗಳಿಗೆ ಉತ್ತಮ ಬೇಡಿಕೆ ಹಾಗೂ ಲಾಭ ದೊರೆತು, ಅವರ ಈ ಕರಕುಶಲ ಕೌಶಲ್ಯ ಮತ್ತಷ್ಟು ಯಶಸ್ವಿಯಾಗಿ ಮುಂದುವರಿಯಲಿ ಎಂದು ಹಾರೈಸೋಣ. ಪ್ರಕಾಶ್ ಅವರ ಸಂಪರ್ಕ ಸಂಖ್ಯೆ: 7259158999.

# ಸಹಕಾರ ಸಂಘಗಳು ರೈತರ ಸ್ವಾವಲಂಬಿ ಜೀವನಕ್ಕೆ ಸಹಕಾರಿ

ಕೊರಟಗೆರೆ: ಸಹಕಾರ ಸಂಘಗಳು ರೈತರ ಮತ್ತು ಶೇರುದಾರರ ಸ್ವಾವಲಂಬಿ ಜೀವನಕ್ಕೆ ಸಹಕಾರಿಯಾಗುತ್ತಿದ್ದು ಉತ್ತಮ ವಹಿವಾಟನ್ನು ನಡೆಸುತ್ತಿವೆ ಎಂದು ಟಿಎಪಿಸಿಎಂಎಸ್ ಅಧ್ಯಕ್ಷ ಗುಂಡಿನಪಾಳ್ಯ ಈಶ್ವರಯ್ಯ ತಿಳಿಸಿದರು.



ಅವರು ಕೊರಟಗೆರೆ ಪಟ್ಟಣದಲ್ಲಿ ಟಿಎಪಿ ಸಿಎಂಎಸ್ ಸಹಕಾರ ಸಂಘದಿಂದ ಸಂಘದ ಕಛೇರಿಯಲ್ಲಿ ಆವರಣದಲ್ಲಿ ನಡೆದ 2025–26 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ನಮ್ಮ ಸಹಕಾರ ಸಂಘವು ಹಲವು ವರ್ಷಗಳಿಂದ ರೈತರಿಗೆ ಶೇರುದಾರರಿಗೆ ಸಹಕಾರಿ ಯಾಗುತ್ತಾ ಬರುತ್ತಿದೆ, ಸಂಘದಲ್ಲಿ ರೈತರಿಗೆ ರಸಗೊಬ್ಬರ ಮಾರಾಟ, ಕೃಷಿಗೆ ಸಾಲ, ವಾಹನ ಸಾಲ ಸೇರಿದಂತೆ ಹಲವು ವಹಿವಾಟುಗಳನ್ನು ನಡೆಸುತ್ತಿದ್ದು ಈ ಸಾಲಿನಲ್ಲಿ 13990 ಲಕ್ಷಗಳ ನಿವ್ವಳ ಲಾಭಗಳಿಸಿದೆ, ಸಹಕಾರಿ ಸಂಘಗಳು ಬಲಿಷ್ಠವಾಗಬೇಕಾದರೆ ತಾವುಗಳು ತೆಗೆದುಕೊಂಡ ಸಾಲವನ್ನು ನಿಗದಿತ ಸಮಯಕ್ಕೆ ಮರುಪಾವತಿ ಮಾಡಬೇಕು ಆ ಹಣವು ಮತ್ತೊಬ್ಬರಿಗೆ ಅನುಕೂಲವಾಗಲಿದೆ ಎಂದರು.

ಸಹಕಾರಿ ಅಭಿವೃದ್ಧಿ ಅಧಿಕಾರಿ ಪಿ.ವೆಂಕಟೇಶ್ ಮಾತನಾಡಿ ಶೇರುದಾರರಿಂದ ಆಯ್ಕೆ ಯಾದ ಪ್ರತಿನಿಧಿಗಳು ಸಹಕಾರಿ ಸಂಘದ ಬೈಲಾದ ನಿಯಮದ ಪ್ರಕಾರವೇ ಆಡಳಿತ ನಡೆಸಬೇಕು, ಶೇರುದಾರಿಗೆ ಕನಿಷ್ಟ ಸೇವೆ ಯನ್ನು ನೀಡಬೇಕು, ವ್ಯವಹಾರಗಳಲ್ಲಿ ನಿಯಮವನ್ನು ಪಾಲಿಸಬೇಕು, ಸಾಲ ಪಡೆಯುವ ಹಿಂದಿರುಗಿಸುವ ವಹಿವಾಟು ಉತ್ತಮವಾದರೆ ಆ ಸಹಕಾರಿ ಸಂಘಗಳು ಬ್ಯಾಂಕ್‌ಗಳಿಗಿಂತಲೂ ಉತ್ತಮ ಸೇವೆ ನೀಡುತ್ತವೆ ಎಂದರು.

ಸಭೆಯಲ್ಲಿ 2025–2026 ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ 85% ಹೆಚ್ಚು ಅಂಕಗಳನ್ನು ಪಡೆದ ಶೇರುದಾರರ ಮಕ್ಕಳಿಗೆ ಪ್ರಶಸ್ತಿ ಪತ್ರ, ಪಾರಿತೋಷಕ, ನಗದನ್ನು ನೀಡಿ ಗೌರವಿಸಲಾಯಿತು.

ಸಭೆಯಲ್ಲಿ ಉಪಾಧ್ಯಕ್ಷೆ ಭಾಗ್ಯಮಹೇಶ್, ನಿರ್ದೇಶಕರುಗಳಾದ ವಿನಯ್‌ಕುಮಾರ್, ರಾಜಶೇಖರಯ್ಯ, ಜಿ.ಕೆ.ಕುಮಾರ್, ಸಿದ್ದ ಲಿಂಗಪ್ಪ, ಜಯರಾಮು, ಶಶಿಕಲಾಶ್ರೀಧರ್, ಕೆ.ವಿ.ಮಂಜುನಾಥ್, ಕೆ.ವಿ.ಪುರುಷೋತ್ತಮ್, ಹನುಮಂತರಾಯ, ಕೆ.ರಾಘವೇಂದ್ರ, ಎಸ್.ಹನುಮಾನ್, ತ್ರಿಯಂಭಕರಾಧ್ಯ, ಕಾರ್ಯದರ್ಶಿ ಕೃಷ್ಣಮೂರ್ತಿ, ಸಿಬ್ಬಂದಿಗಳಾದ ಗುರುಪ್ರಸಾದ್, ನಾಗರಾಜು, ಚೇತನ್ ಸೇರಿದಂತೆ ನೂರಾರು ಶೇರುದಾರರು ಹಾಜರಿದ್ದರು.

# ನೋಟಿಸ್ ಅವಧಿಯನ್ನು ಕನಿಷ್ಠ ಮೂರು ತಿಂಗಳಿಗೆ ವಿಸ್ತರಿಸಲು ಮನವಿ

ತುಮಕೂರು: ಕರ್ನಾಟಕದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಖಿಖಿಖಿ) ಪ್ರಕ್ರಿಯೆಯಲ್ಲಿ ನೋಟಿಸ್ ಪಡೆದಿರುವ ವೃದ್ಧರು, ವಿಶೇಷಚೇತನರು, ಗಂಭೀರ ಅನಾರೋಗ್ಯದಿಂದ ಬಳಲುತ್ತಿರುವವರು ಹಾಗೂ ವಿದೇಶಗಳಲ್ಲಿ ವಾಸಿಸುತ್ತಿರುವ ಅನಿವಾಸಿ ಭಾರತೀಯ (ಓಖಿಖಿ) ಮತದಾರರಿಗೆ ನೇರ ಹಾಜರಾತಿಯಿಂದ ವಿನಾಯಿತಿ ನೀಡಿ, ಅವರ ಕುಟುಂಬದ ಸದಸ್ಯರು ಅಥವಾ ಅಧಿಕೃತ ಪ್ರತಿನಿಧಿಗಳ ಮೂಲಕ ದಾಖಲೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಬೇಕು ಎಂದು ಅಸೋಸಿಯೇಷನ್ ಫಾರ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ (ಂಕಅಖ) ಆಗ್ರಹಿಸಿದೆ.



ಎಸ್‌ಐಆರ್ ಪ್ರಕ್ರಿಯೆಯ ಎರಡನೇ ಹಂತದಲ್ಲಿ ತಾರ್ಕಿಕ ವ್ಯತ್ಯಾಸ, ಹೆಸರು, ವಯಸ್ಸು, ಲಿಂಗ ಅಥವಾ 2002ರ ಮತದಾರರ ಪಟ್ಟಿಯ ಮಾಹಿತಿಯೊಂದಿಗೆ ಹೊಂದಾಣಿಕೆಯಾಗದ ಕಾರಣಕ್ಕಾಗಿ 43,81,143 ಮತದಾ ರರಿಗೆ ನೋಟಿಸ್ ನೀಡಲಾಗುತ್ತಿದೆ. ನೋಟಿಸ್ ಪಡೆದವರು ಅಗತ್ಯ ದಾಖಲೆಗಳೊಂದಿಗೆ ಇಖಔ/ ಂಇಖಔ ಮುಂದೆ ವಿಚಾರಣೆಗೆ ಹಾಜರಾಗಬೇಕಾಗಿದೆ. ನೋಟಿಸ್ ವಿಚಾರಣೆಗೆ ಅಕ್ಟೋಬರ್ 12 ಕೊನೆಯ ದಿನವಾಗಿರುವ ಹಿನ್ನೆಲೆಯಲ್ಲಿ, ಅಲ್ಪಾವಧಿಯಲ್ಲಿ ದಾಖಲೆಗಳನ್ನು ಸಂಗ್ರಹಿಸಿ ನೇರವಾಗಿ ಹಾಜರಾಗಬೇಕಾದ ಪರಿಸ್ಥಿತಿ ಅನೇಕ ಮತದಾರರಿಗೆ ತೀವ್ರ ತೊಂದರೆ ಉಂಟುಮಾಡುತ್ತಿದೆ ಎಂದು APCR ತಿಳಿಸಿದೆ.

ಮತದಾರರ ಪಟ್ಟಿಯ ಪರಿಷ್ಕರಣೆ ಅಗತ್ಯವಾದ ಪ್ರಕ್ರಿಯೆಯಾಗಿದ್ದರೂ, ಅದರ ಹೆಸರಿನಲ್ಲಿ ಯಾವುದೇ ಅರ್ಹ ನಾಗರಿಕರು ಮತದಾನದ ಹಕ್ಕಿನಿಂದ ವಂಚಿತರಾಗಬಾರದು. ವಿಶೇಷವಾಗಿ ವಯೋಸಹಜ ಕಾಯಿಲೆಗಳಿಂದ ಬಳಲುತ್ತಿರುವ ಹಿರಿಯ ನಾಗರಿಕರು, ವಿಶೇಷಚೇತನರು, ಹಾಸಿಗೆ ಹಿಡಿದಿರುವ ರೋಗಿಗಳು ಹಾಗೂ ಚಲನವಲನಕ್ಕೆ ಅಸಮರ್ಥರಾಗಿರುವವರಿಗೆ ಕಚೇರಿಗೆ ನೇರವಾಗಿ ತೆರಳಿ ಹಾಜರಾಗುವಂತೆ ಒತ್ತಾಯಿಸುವುದು ಅನಗತ್ಯ ಕಷ್ಟಕ್ಕೆ ಕಾರಣವಾಗುತ್ತದೆ. ಇಂತಹ ಮತದಾರರಿಗೆ ಅವರ ಕುಟುಂಬದ ಸದಸ್ಯರು ಅಥವಾ ಅಧಿಕೃತ ಪ್ರತಿನಿಧಿಗಳ ಮೂಲಕ ದಾಖಲೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಬೇಕು ಎಂದು ಸಂಘಟನೆಯ ತಾಜುದ್ದೀನ್ ಷರೀಫ್ ಹಾಗೂ ಕಾರ್ಯದರ್ಶಿ ಅಫ್ಜಲ್ ಖಾನ್ ಒತ್ತಾಯಿಸಿದ್ದಾರೆ.

ಅದೇ ರೀತಿ, ಉದ್ಯೋಗ, ಶಿಕ್ಷಣ ಸೇರಿದಂತೆ ವಿವಿಧ ಕಾರಣಗಳಿಂದ ವಿದೇಶಗಳಲ್ಲಿ ವಾಸಿಸುತ್ತಿರುವ ಅನಿವಾಸಿ ಭಾರತೀಯ (NRI) ಮತದಾರರು ಎಸ್‌ಐಆರ್ ನೋಟಿಸ್‌ಗೆ ಉತ್ತರಿಸಲು ಕರ್ನಾಟಕಕ್ಕೆ ನೇರವಾಗಿ ಬರುವುದು ಪ್ರಾಯೋಗಿಕವಾಗಿ ಕಷ್ಟಕರ ಮತ್ತು ದುಬಾರಿಯಾಗಿದೆ. ಆದ್ದರಿಂದ ಅರ್ಹ ಓಖಿಖಿ ಮತದಾರರಿಗೆ ಆನ್‌ಲೈನ್ ಮೂಲಕ ಅಥವಾ ಅವರ ಕುಟುಂಬದ ಸದಸ್ಯರು/ ಅಧಿಕೃತ ಪ್ರತಿನಿಧಿಗಳ ಮೂಲಕ ದಾಖಲೆಗಳನ್ನು ಸಲ್ಲಿಸುವ ಅವಕಾಶ ಕಲ್ಪಿಸಬೇಕು ಎಂದು APCR ಆಗ್ರಹಿಸಿದೆ.

ತೆಲಂಗಾಣದಲ್ಲಿ ಇದೇ ರೀತಿಯ ಸಮಸ್ಯೆ ಎದುರಿಸುತ್ತಿರುವ ವೃದ್ಧರು, ವಿಶೇಷಚೇತನರು, ರೋಗಿಗಳು ಹಾಗೂ ವಿದೇಶ ದಲ್ಲಿರುವ ಮತದಾರರಿಗೆ ನೇರ ಹಾಜರಾತಿಯಿಂದ ವಿನಾಯಿತಿ ನೀಡುವ ಕುರಿತು ಚುನಾವಣಾ ಅಧಿಕಾರಿಗಳು ಕೈಗೊಂಡಿರುವ ಮತದಾರ ಸ್ನೇಹಿ ಕ್ರಮವನ್ನು ಕರ್ನಾಟ ಕದಲ್ಲಿಯೂ ಜಾರಿಗೆ ತರಬೇಕು. ನಾಗರಿಕರ ವಯಸ್ಸು, ದೈಹಿಕ ಸಾಮರ್ಥ್ಯ ಮತ್ತು ವಾಸಸ್ಥಳದ ಪರಿಸ್ಥಿತಿಯನ್ನು ಪರಿಗಣಿಸಿ ಪರ್ಯಾಯ ವಿಧಾನಗಳ ಮೂಲಕ ಎಸ್‌ಐಆರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅವಕಾಶ ನೀಡಬೇಕು ಎಂದು ಸಂಘಟನೆಯು ತಹಶಿಲ್ದಾರಾದ ರಾಜೇಶ್ವರಿ ಅವರ ಮೂಲಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಎರಡು–ಮೂರು ದಿನಗಳ ಮುಂಚಿತವಾಗಿ ನೋಟಿಸ್ ನೀಡುತ್ತಿರುವುದು ಸಮಸ್ಯೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ನೋಟಿಸ್ ವಿಚಾರಣೆಗೆ ಕೇವಲ ಎರಡು ಅಥವಾ ಮೂರು ದಿನಗಳ ಮುಂಚಿತವಾಗಿ ನೋಟಿಸ್ ನೀಡಲಾಗುತ್ತಿದೆ. ಇದರಿಂದ ಅಲೆಮಾರಿ ಸಮುದಾಯಗಳು, ವಲಸೆ ಕಾರ್ಮಿಕರು ಹಾಗೂ ದೂರದ ಪ್ರದೇಶಗಳಲ್ಲಿ ಉದ್ಯೋಗದಲ್ಲಿರುವವರು ನಿಗದಿತ ಅವಧಿಯಲ್ಲಿ ಅಗತ್ಯ ದಾಖಲೆಗಳೊಂದಿಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ.

ಯಾವುದೇ ಅರ್ಹ ನಾಗರಿಕರು ವಯಸ್ಸು, ಅಂಗವೈಕಲ್ಯ, ಅನಾರೋಗ್ಯ, ವಲಸೆ ಅಥವಾ ವಿದೇಶದಲ್ಲಿರುವ ಕಾರಣದಿಂದ ತಮ್ಮ ಮತದಾನದ ಹಕ್ಕನ್ನು ಕಳೆದುಕೊಳ್ಳದಂತೆ ಚುನಾವಣಾ ಆಯೋಗ ತುರ್ತು ಕ್ರಮ ಕೈಗೊಳ್ಳಬೇಕು. ತೆಲಂಗಾಣದ ಮಾದರಿಯಲ್ಲಿ ಕರ್ನಾಟಕದಲ್ಲಿಯೂ ಮತದಾರ ಸ್ನೇಹಿ ವ್ಯವಸ್ಥೆ ಜಾರಿಗೊಳಿಸಬೇಕು ಎಂದು APCR ಆಗ್ರಹಿಸಿದೆ.

# ಭಾರ ಹೊರುವ ತಾಲೀಮಿನಲ್ಲಿ ಸೈ ಎನಿಸಿಕೊಂಡ ಧನಂಜಯ



ಮೈಸೂರು: ಚಿನ್ನದ ಅಂಬಾರಿ ಹೊರಲು ಗಜಪಡೆ ಆಯ್ಕೆ ಹಿನ್ನೆಲೆಯಲ್ಲಿ ಧನಂಜಯ ಆನೆಗೆ 600 ಕೆ.ಜಿ ತೂಕದ ಭಾರ ಹೊರಿಸುವ ತಾಲೀಮು ನಡೆಸಲಾಯಿತು. ಒಂದೂವರೆ ಗಂಟೆ ಸಮಯದಲ್ಲಿ ಅರಮನೆಯಿಂದ ಬನ್ನಿಮಂಟಪದವರೆಗೆ ಭಾರ ಹೊತ್ತು ಧನಂಜಯ ಆನೆ ಸಾಗುವ ಮೂಲಕ ಚಿನ್ನದ ಅಂಬಾರಿ ಹೊರಲು ಸೈ ಎನಿಸಿಕೊಂಡಿದ್ದಾನೆ.

ಈ ಬಾರಿ ಜಂಬೂ ಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿಯನ್ನು ಹೊರುವ ಆನೆ ಯಾವುದು ಎಂಬ ಪರೀಕ್ಷೆಗಳು ನಡೆಯುತ್ತಿವೆ. ಬುಧವಾರ ಸಂಜೆ ಅರಮನೆಯಿಂದ ಬನ್ನಿಮಂಟಪದವರೆಗೆ ಸುಮಾರು 600 ಕೆ.ಜಿ ತೂಕದ ಮರಳಿನ ಮೂಟೆ, ಗೋಣಿ ಚೀಲದ ಭಾರವನ್ನು ಹೊತ್ತ ಧನಂಜಯ ಯಶಸ್ವಿಯಾಗಿ ಸುಮಾರು ಒಂದು ಗಂಟೆ 30 ನಿಮಿಷದಲ್ಲಿ ರಾಜ ಗಾಂಭೀರ್ಯದಿಂದ ಅಕ್ಕಪಕ್ಕ ಕುಮ್ಕಿ ಆನೆಗಳಾಗಿ ಕಾವೇರಿ ಮತ್ತು ಲಕ್ಷ್ಮಿ ಜೊತೆ ಹೆಜ್ಜೆ ಹಾಕಿತು. ಬನ್ನಿಮಂಟಪ ತಲುಪಿದ ಧನಂಜಯ ಈ ಬಾರಿ ಚಿನ್ನದ ಅಂಬಾರಿ ಹೊರಲು ನಾನೂ ಸಹ ಸಿದ್ಧ ಎಂದು ಭರವಸೆ ಮೂಡಿಸಿದ್ದಾನೆ.

ಧನಂಜಯ ಆನೆ ಜೊತೆ ಕಾವೇರಿ, ಲಕ್ಷ್ಮಿ, ಕುಮ್ಕಿ ಆನೆಗಳಾಗಿ ಮಹೇಂದ್ರ, ಪ್ರಶಾಂತ, ಗೋಪಿ, ಏಕಲವ್ಯ ಹಾಗೂ ಶ್ರೀರಾಮ ಆನೆಗಳು ಹೆಜ್ಜೆ ಹಾಕಿದವು. ಬನ್ನಿಮಂಟಪದಲ್ಲಿ ಕೆಲಕಾಲ ವಿಶ್ರಾಂತಿ ಪಡೆದ ಗಜಪಡೆ ರಾತ್ರಿ ಅರಮನೆಗೆ ಹಿಂತಿರುಗಿದವು. ಈಗಾಗಲೇ ಕಳೆದ ಭಾನುವಾರ ಸುಮಾರು 600 ಕೆ.ಜಿ. ತೂಕದ ಮರಳು ಮೂಟೆ ಭಾರ ತಾಲೀಮಿನಲ್ಲಿ ಮಹೇಂದ್ರ ಭಾಗವಹಿಸಿ ಎರಡು ಗಂಟೆಗಳ ಅವಧಿಯಲ್ಲಿ ಅರಮನೆಯಿಂದ ಬನ್ನಿಮಂಟಪ ತಲುಪಿತ್ತು.

ಮುಂದೆ ಪ್ರಶಾಂತ ಹಾಗೂ ಏಕಲವ್ಯ ಆನೆಗಳಿಗೆ ಮರಳು ಮೂಟೆ ತಾಲೀಮನ್ನು ನಡೆಸಲಾಗುತ್ತದೆ. ಬಳಿಕ 2ನೇ ತಂಡದಲ್ಲಿ ಆಗಮಿಸುವ ಸುಗ್ರೀವ ಆನೆಗೂ ಭಾರ ಹೊರುವ ತಾಲೀಮನ್ನು ನಡೆಸುವ ಚಿಂತನೆ ಇದೆ. ಈ ತಾಲೀಮಿನ ನಂತರ ಮರದ ಅಂಬಾರಿ ತಾಲೀಮನ್ನು ಆನೆಗಳಿಗೆ ನಡೆಸಲಾಗುವುದು ಎಂದು ಡಿಸಿಎಫ್ ಪ್ರಭುಗೌಡ ಮಾಹಿತಿ ನೀಡಿದರು.

ಅಂಬಾರಿ ಹೊರಲು ಆಯ್ಕೆ ಪಟ್ಟಿಯಲ್ಲಿರುವ ಆನೆಗಳಿಗೆ ನಿತ್ಯ ಎಣ್ಣೆ ಸ್ನಾನ, ವಿಶೇಷ ಆಹಾರ: ಅಂಬಾರಿ ಹೊರುತ್ತಿದ್ದ ಆನೆ ಅಭಿಮನ್ಯು ನಿವೃತ್ತಿಯಾದ ಹಿನ್ನೆಲೆಯಲ್ಲಿ, ನಾಡಹಬ್ಬ ದಸರಾದ ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಹೊರುವ ಆನೆಯ ಆಯ್ಕೆ ಪ್ರಕ್ರಿಯೆ ಆರಂಭವಾಗಿದೆ. ಜಂಬೂ ಸವಾರಿಯಲ್ಲಿ ಚಿನ್ನದ ಅಂಬಾರಿ ಹೊರುವ ಕ್ಯಾಪ್ಟನ್ ಆಯ್ಕೆಗೆ ಮೂರು ಆನೆಗಳಿಗೆ ವಿಶೇಷ ಸೌಲಭ್ಯಗಳನ್ನು, ಹಾಗೂ ಆಹಾರ ಗಳನ್ನು ನೀಡಲಾಗುತ್ತಿದ್ದು, ಅವುಗಳ ಆರೈಕೆ ಸೇರಿದಂತೆ ತಾಲೀಮುಗಳ ಮೇಲೆ ಹೆಚ್ಚಿನ ನಿಗಾ ವಹಿಸಲಾಗಿದೆ. ಅರಣ್ಯ ಇಲಾಖೆ ಈಗಾಗಲೇ ಮೂರು ಆನೆಗಳನ್ನು ಅಂತಿಮಗೊಳಿಸಿದೆ.

# ಕೇಂದ್ರದಿಂದ 2,186 ಕೋಟಿ ಬಾಕಿ: ಸುಪ್ರೀಂಕೋರ್ಟ್ ಮೊರೆ ಹೋಗಲು ತೀರ್ಮಾನ



ಬೆಂಗಳೂರು: 15ನೇ ಹಣಕಾಸು ಆಯೋಗದ ಶಿಫಾರಸಿನಂತೆ ಗ್ರಾಮ ಪಂಚಾಯತ್‌ಗಳಿಗೆ ಬರಬೇಕಾದ 2,186.20 ಕೋಟಿ ರೂ. ಅನುದಾನ ತಡೆಹಿಡಿದಿರುವ ಕೇಂದ್ರ ಸರ್ಕಾರದ ವಿರುದ್ಧ ಸುಪ್ರೀಂಕೋರ್ಟ್ ಮೊರೆ ಹೋಗಲು ತೀರ್ಮಾನಿಸಲಾಗಿದೆ.

ಇಂದು ತಮ್ಮ ಕಚೇರಿಯಲ್ಲಿ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಮತ್ತು ಅಧಿಕಾರಿಗಳೊಂದಿಗೆ ಈ ಸಂಬಂಧ ಸಭೆ ನಡೆಸಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ 2025–26ನೇ ಸಾಲಿನಲ್ಲಿ ರಾಜ್ಯದ ಗ್ರಾಮ ಪಂಚಾಯತ್‌ಗಳಿಗೆ ಹಂಚಿಕೆ ಮಾಡಿದ್ದ 2,186.20 ಕೋಟಿ ರೂ. ಬಿಡುಗಡೆ ಮಾಡಲು ನಿರಾಕರಿಸಿರುವ ಕೇಂದ್ರ ಸರ್ಕಾರದ ನಡೆಗೆ ಬೇಸರ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಈ ಬಾರಿ ಮಳೆಯ ಕೊರತೆಯಿಂದ ಬರ ಪರಿಸ್ಥಿತಿ ತಲೆದೋರಿದ್ದು, 710 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. 149 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ. 561 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆಯಲಾಗಿದೆ. ಬಿತ್ತನೆ ಮಾಡಿದ ಬೀಜ ಮೊಳಕೆ ಒಡೆಯದೆ, ರೈತರು ಕಂಗಾಲಾಗಿರುವ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಈ ರೀತಿ ನ್ಯಾಯಯುತ ಹಂಚಿಕೆಯನ್ನೇ ಬಿಡುಗಡೆ ಮಾಡದಿರುವುದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವ ಕಾನೂನು ಅಂಶಗಳ ಬಗ್ಗೆ ಚರ್ಚಿಸಿದರು.

ಗ್ರಾಮ ಪಂಚಾಯತ್ ಚುನಾವಣೆಗೆ ಸಿದ್ಧತೆ: ರಾಜ್ಯ ಸರ್ಕಾರ ಅವಧಿ ಮುಗಿದ ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ನಡೆಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ಎಸ್‌ಐಆರ್ ಕಾರ್ಯಕ್ಕೆ ಸರ್ಕಾರಿ ಸಿಬ್ಬಂದಿ ನಿಯೋಜನೆ ಆಗಿದ್ದ ಹಿನ್ನೆಲೆಯಲ್ಲಿ ವಿಳಂಬವಾಗಿದೆ. ಗ್ರಾಪಂ ಚುನಾವಣೆಗೆ ಸರ್ಕಾರ ಸಂಪೂರ್ಣ ಸಜ್ಜಾಗಿದ್ದು, ಶೀಘ್ರವೇ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ, ಅಡ್ವೊಕೇಟ್ ಜನರಲ್ ಹಾಗೂ ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿ ಡಿ. ರಂದೀಪ್ ಅವರೊಂದಿಗೆ ಚುನಾವಣೆ ನಡೆಸುವ ಕುರಿತ ಕಾನೂನು ಅಂಶಗಳ ಬಗ್ಗೆ ಸಚಿವ ಈಶ್ವರ ಬಿ. ಖಂಡ್ರೆ ಮಾಹಿತಿ ಪಡೆದರು.

# 101 ತಾಲೂಕುಗಳಲ್ಲಿ 18 ಸಾವಿರ ಕೋಟಿ ನಷ್ಟ



ಬೆಂಗಳೂರು: ರಾಜ್ಯದಲ್ಲಿ ಸದ್ಯ 101 ತಾಲೂಕುಗಳನ್ನ ಬರವೆಂದು ಘೋಷಿಸಲಾಗಿದ್ದು, ಅಂದಾಜು 18 ಸಾವಿರ ಕೋಟಿ ನಷ್ಟವಾಗಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್.ಡಿ.ಆರ್.ಎಫ್) ಮಾನದಂಡದಂತೆ ಅಂದಾಜಿಸಿ ಪರಿಹಾರ ನೀಡುವಂತೆ ಕೋರಿ ಇನ್ನೆರಡು ದಿನಗಳಲ್ಲಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಉಪಮುಖ್ಯಮಂತ್ರಿ ಜಿ.ಪರಮೇಶ್ವರ್ ತಿಳಿಸಿದ್ದಾರೆ.

ವಿಧಾನಸೌಧದಲ್ಲಿಂದು ಮಾತನಾಡಿದ ಅವರು, 101 ತಾಲೂಕುಗಳನ್ನ ಬರಪೀಡಿತ ಎಂದು ಘೋಷಿಸಲಾಗಿದೆ. ಎರಡನೇ ಹಂತದಲ್ಲಿ ಉಳಿದ ತಾಲೂಕುಗಳಲ್ಲಿ ಪರಿಶೀಲನೆ ನಡೆಯುತ್ತಿದೆ. 25 ತಾಲೂಕುಗಳು ಬರ ಪೀಡಿತ ಪ್ರದೇಶಗಳೆಂದು ಘೋಷಣೆಗೆ ಅರ್ಹತೆ ಪಡೆದಿದ್ದು, ಶೀಘ್ರದಲ್ಲೇ ಘೋಷಿಸಲಾಗುವುದು. ಸದ್ಯ ಬರದಿಂದ 18 ಸಾವಿರ ಕೋಟಿ ನಷ್ಟವಾಗಿದೆ. ಇಷ್ಟು ಮೊತ್ತದ ಪರಿಹಾರವನ್ನ ಕೇಂದ್ರ ನೀಡುವುದಿಲ್ಲ. ಹೀಗಾಗಿ ಎನ್‌ಡಿಆರ್‌ಎಫ್ ಮಾನದಂಡ ಅಂದಾಜಿಸಿ ಪರಿಹಾರ ಕೋರಿ ಇನ್ನೆರಡು ದಿನಗಳಲ್ಲಿ ಕೇಂದ್ರ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು.

ಕಳೆದ ವರ್ಷ 39 ಸಾವಿರ ಕೋಟಿ ನಷ್ಟವಾಗಿತ್ತು. 18 ಸಾವಿರ ಕೋಟಿ ಪರಿಹಾರ ನೀಡುವಂತೆ ಕೇಂದ್ರಕ್ಕೆ ಮನವಿ ಮಾಡಲಾಗಿತ್ತು. ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಸೇರಿದಂತೆ ಇನ್ನಿತರ ಸಚಿವರು ದೆಹಲಿಗೆ ತೆರಳಿ ಪ್ರತಿಭಟನೆ ನಡೆಸಿದ್ದರೂ ಕೇಂದ್ರ ಸರ್ಕಾರ ಸ್ಪಂದಿಸಲಿರಲಿಲ್ಲ. ಪರಿಹಾರ ಕೋರಿ ಸುಪ್ರೀಂಕೋರ್ಟ್?ಗೆ ಹೋಗಿದ್ದೆವು. ವಿಚಾರಣೆ ನಡೆಸಿದ ನ್ಯಾಯಾಲಯದ ಆದೇಶ ಮೇರೆಗೆ 3,500 ಕೋಟಿ ರಾಜ್ಯಕ್ಕೆ ನೀಡಿತ್ತು. ಈ ಬಾರಿ ಅಂತಹ ಘಟನೆ ಮರುಕಳಿಸುವುದಿಲ್ಲ ಎಂಬ ವಿಶ್ವಾಸವಿದೆ. ರಾಜ್ಯದ ಬೇಡಿಕೆಗೆ ಕೇಂದ್ರ ಸರ್ಕಾರ ಸ್ಪಂದಿಸುವ ಆಶಾಭಾವನೆಯಿದೆ. ಬರಪರಿಶೀಲನಾ ಕಾರ್ಯ ಮುಗಿದ ಬಳಿಕ ಅಂತಿಮ ಪ್ರಸ್ತಾವನೆಯನ್ನ ನೀಡಲು ಸರ್ವ ಪಕ್ಷ ನಿಯೋಗದೊಂದಿಗೆ ಕರೆದೊಯ್ದು ಪರಿಹಾರ ನೀಡುವಂತೆ ಮನವಿ ಮಾಡಲಾಗುವುದು ಎಂದರು.

ಬರಪೀಡಿತ ಪ್ರದೇಶಗಳ ಘೋಷಣೆ ಪ್ರಕ್ರಿಯೆ ವಿಳಂಬವಾಗಿಲ್ಲ. ಮುಂಗಾರು ಹಾಗೂ ಹಿಂಗಾರು ಕಡಿಮೆ ಆಗುವವರೆಗೂ ಪರಿಶೀಲನೆ ಮುಂದುವರಿಯುತ್ತದೆ. ಕಳೆದ ಬಾರಿ ಸುಮಾರು 200ಕ್ಕೂ ಅಧಿಕ ತಾಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಲಾಗಿತ್ತು. ಈ ಬಾರಿಯೂ 200ಕ್ಕೂ ಹೆಚ್ಚು ತಾಲೂಕುಗಳು ಬರಪೀಡಿತ ಪ್ರದೇಶಗಳೆಂದು ಘೋಷಿಸಲ್ಪಡುವ ಪರಿಸ್ಥಿತಿ ಇದೆ. ಕರಾವಳಿ ಪ್ರದೇಶವನ್ನು ಹೊರತುಪಡಿಸಿ ಉಳಿದೆಲ್ಲೆಡೆ ಬರ ಪರಿಸ್ಥಿತಿ ಇದೆ ಎಂದರು.

ಮಳೆಗಾಲ ಮುಗಿಯುವವರೆಗೆ ಗ್ರೌಂಡ್ ಟ್ರೂಥಿಂಗ್ ನಡೆಯತ್ತದೆ. ಕರಾವಳಿ ಬಿಟ್ಟರೆ ಬೇರೆ ಎಲ್ಲಿಯೂ ಮಳೆಯಾಗಿಲ್ಲ. ಈ ಹಿಂದೆ 223 ತಾಲೂಕು ಬರಘೋಷಣೆ ಆಗಿತ್ತು. ಈ ಬಾರಿ ಅದಕ್ಕೂ ಹೆಚ್ಚು ತಾಲೂಕು ಬರಪೀಡಿತ ಆಗಬಹುದು. ಯಾವುದನ್ನೂ ಮ್ಯಾನ್ಯುಯಲ್ ಆಗಿ ಮಾಡಿಲ್ಲ. ಕೇಂದ್ರದ ಕೃಪಿಡಿಯಂತೆ ಮಾಡಿದ್ದೇವೆ. ಶಾಸಕರ್ಯಾರೂ ಆತಂಕಪಡುವುದು ಬೇಡ ಎಂದರು.

ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸುವಾಗ ಬಹುತೇಕ ತಾಲೂಕು ಬರಲಿವೆ. ಒಂದೆರಡು ದಿನದಲ್ಲಿ ಕೇಂದ್ರಕ್ಕೆ ಮೊದಲ ಪ್ರಸ್ತಾವನೆ ಕೊಡುತ್ತೇವೆ. 101 ತಾಲೂಕಿನ ನಷ್ಟದ ಬಗ್ಗೆ ಅಂದಾಜಿಸುತ್ತೇವೆ. ಸದ್ಯಕ್ಕೆ 18 ಸಾವಿರ ಕೋಟಿ ರೂ. ನಷ್ಟ ಆಗಿರುವ ಅಂದಾಜಿದೆ. ಎನ್‌ಡಿಆರ್‌ಎಫ್ ಮಾನದಂಡದಂತೆ ಅಂದಾಜು ಮಾಡಿ ಪರಿಹಾರ ಕೇಳುತ್ತೇವೆ. ಸದ್ಯ 49 ಲಕ್ಷ ರೈತರು ಬೆಳೆ ವಿಮೆಗೆ ನೋಂದಣಿ ಮಾಡಿಕೊಂಡಿದ್ದಾರೆ ಎಂದರು.

# ಸಾಲ ಸೌಲಭ್ಯಕ್ಕೆ ಅರ್ಜಿ

ತುಮಕೂರು: ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಡಿ ಸಾಲ ಸೌಲಭ್ಯ ನೀಡಲು ಉಪ್ಪಾರ ಜನಾಂಗದವರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಸ್ವಯಂ ಉದ್ಯೋಗ ನೇರ ಸಾಲ, ಅರಿವು–ಶೈಕ್ಷಣಿಕ ಸಾಲ(ನೂತನ–ನವೀಕರಣ), ವಿದೇಶಿ ವ್ಯಾಸಂಗ ಸಾಲ ಯೋಜನೆ(ನೂತನ–ನವೀಕರಣ), ಸ್ವಾವಲಂಬಿ ಸಾರಥಿ, ಭಗೀರಥ ಗಂಗಾಕಲ್ಯಾಣ ಯೋಜನೆಗಳಡಿ ಸಾಲ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. 2024–25 ಮತ್ತು 2025–26ನೇ ಸಾಲುಗಳಲ್ಲಿ ಅರ್ಜಿ ಸಲ್ಲಿಸಿರುವ ಅರ್ಜಿದಾರರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

# ಕೆಲಸ ಶೂನ್ಯ, ಪ್ರಚಾರ ಭರಪೂರ, ಯಾವ ಪುರುಷಾರ್ಥಕ್ಕೆ ಈ ಸಂಭ್ರಮ



ಬೆಂಗಳೂರು: ಇದು ಶತದಿನೋತ್ಸವವಲ್ಲ, ಸಾಧನೆಯ ಶೂನ್ಯತೆಯನ್ನು ದೀಪಾಲಂಕಾರದ ಹಿಂದೆ ಮುಚ್ಚುವ ವ್ಯರ್ಥ ಪ್ರದರ್ಶನ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಅವರು ರಾಜ್ಯ ಸರ್ಕಾರದ ನೂರು ದಿನಗಳ ಕಾರ್ಯಕ್ರಮದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಈ ಸಂಬಂಧ ಎಕ್ಸ್ ಪೋಸ್ಟ್ ಮಾಡಿರುವ ಅವರು, ಸಾಧನೆಯ ಖಾತೆ ಖಾಲಿ. ಸಂಭ್ರಮದ ಖರ್ಚು ಭಾರಿ. ಯಾವ ಸಾಧನೆಗೆ ಈ ಸಂಭ್ರಮ. ಯಾವ ಸಾಧನೆಗೆ ಈ ಸಡ ಗರ ನಾಚಿಕೆಯಾಗಬೇಕು, ಸಿಎಂ ಡಿ.ಕೆ.ಶಿವಕುಮಾರ್ ಅವರೇ. ಆದರೆ ನಿಮ್ಮ ಭಂಡತನವನ್ನು ಮಾತ್ರ ಮೆಚ್ಚಲೇಬೇಕು. 100 ದಿನಗಳ ಆಡಳಿತಕ್ಕೆ ಬ್ಯಾಂಕ್ವೆಟ್ ಹಾಲ್, ಭರ್ಜರಿ ವೇದಿಕೆ, ವಿದ್ಯುತ್ ದೀಪಾಲಂಕಾರ, ಕೋಟ್ಯಂತರ ರೂಪಾಯಿಗಳ ಪ್ರಚಾರ. ಇಷ್ಟೆಲ್ಲಾ ಸಂಭ್ರಮ ಸಡಗರ ಯಾವ ಪುರುಷಾರ್ಥಕ್ಕೆ? ಯಾವ ಸಾಧನೆಗೆ ಎಂದು ಟೀಕಾಪ್ರಹಾರ ನಡೆಸಿದ್ದಾರೆ.

ಜನರಿಗೆ ತೋರಿಸಲು ಒಂದೇ ಒಂದು ದೊಡ್ಡ ಸಾಧನೆಯೂ ಇಲ್ಲದಿದ್ದಾಗ, ವೈಫಲ್ಯಗಳನ್ನೇ ಸಾಧನೆಗಳೆಂದು ಬಿಂಬಿಸಲು ಈ ಸಂಭ್ರಮವೇ? ರಾಜ್ಯದ ವಾಸ್ತವ ಚಿತ್ರಣ, ಪ್ರತಿಯೊಂದು ವರ್ಗಕ್ಕೂ ದ್ರೋಹ. ಮಹಿಳೆಯರು ಗೃಹಲಕ್ಷ್ಮಿಯ ಹಣಕ್ಕಾಗಿ ತಿಂಗಳುಗಟ್ಟಲೆ ಕಾಯುವ, ಕಚೇರಿ ಬ್ಯಾಂಕ್‌ಗಳ ಬಾಗಿಲು ತಟ್ಟುವ ಪರಿಸ್ಥಿತಿ. ಯುವಜನತೆ ಉದ್ಯೋಗ ಸಿಗಬೇಕಾದರೆ ಅರ್ಹತೆಗಿಂತ ಲಂಚವೇ ಮುಖ್ಯ ಎನ್ನುವಂತಹ ಲಜ್ಜೆಗೇಡಿತನದ ಆಡಳಿತ. ವಿದ್ಯಾರ್ಥಿಗಳಿಗೆ ಸಮಯಕ್ಕೆ ಸಿಗದ ಪಠ್ಯಪುಸ್ತಕಗಳು; ತಲೆಯ ಮೇಲೆ ಸೋರುವ, ಕುಸಿಯುತ್ತಿರುವ ಶಾಲಾ ಕೊಠಡಿಗಳು; ಒಂದೇ ದಿನಕ್ಕೆ ಹರಿದುಹೋಗುವ ಕಳಪೆ ಶೂಸಾಕ್ಸ್!. ಬೆಳೆನಷ್ಟದಿಂದ ಕಂಗಾಲಾದ ಅನ್ನದಾತನಿಗೆ ಬರ ಪರಿಹಾರವೂ ಇಲ್ಲ, ಸರ್ಕಾರದ ಸ್ಪಂದನೆಯೂ ಇಲ್ಲ. ವೃದ್ಧರು, ವಿಧವೆಯರು, ಅಂಗವಿಕಲರಿಗೆ ಆಸರೆಯಾಗಿದ್ದ ಪಿಂಚಣಿಗೂ ಕತ್ತರಿ. ದಿನಬಳಕೆಯ ವಸ್ತುಗಳ ಬೆಲೆ ಏರಿಕೆ, ತೆರಿಗೆಗಳ ಹೊರೆಯಿಂದ ಶ್ರೀಸಾಮಾನ್ಯನ ಬದುಕೇ ದುಬಾರಿ. ಬೆಂಗಳೂರು ರಸ್ತೆಯಲ್ಲಿ ಗುಂಡಿ, ರಸ್ತೆಯಂಚಿನಲ್ಲಿ ಕಸದ ರಾಶಿ ಹೇಳಿದ್ದು ಬ್ರ್ಯಾಂಡ್ ಬೆಂಗಳೂರು, ಕೊಟ್ಟಿದ್ದು ಬ್ರೋಕನ್ ಬೆಂಗಳೂರು. ಇದೇನಾ 100 ದಿನಗಳ ಸಾಧನೆ ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

ಜನರ ಬದುಕು ಕತ್ತಲಲ್ಲಿ, ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾತ್ರ ದೀಪಾಲಂಕಾರ. ರಾಜ್ಯಕ್ಕೆ ಬೇಕಾಗಿದ್ದು ಅಭಿವೃದ್ಧಿಯ ಬೆಳಕು. ನೀವು ಕೊಟ್ಟಿದ್ದು ವೇದಿಕೆಯ ಥಳಕು. ಯುವಕರಿಗೆ ಬೇಕಾಗಿದ್ದು ಉದ್ಯೋಗ. ನೀವು ಕೊಟ್ಟಿದ್ದು ಜಾಹೀರಾತು. ರೈತರಿಗೆ ಬೇಕಾಗಿದ್ದು ಪರಿಹಾರ. ನೀವು ಕೊಟ್ಟಿದ್ದು ಸಮಾವೇಶ. ಮಹಿಳೆಯರಿಗೆ ಬೇಕಾಗಿದ್ದು ಸಮಯಕ್ಕೆ ಹಣ. ನೀವು ಕೊಟ್ಟಿದ್ದು ಫೋಟೋಶೂಟ್. ವಾಸ್ತವದ ಕತ್ತಲೆಯನ್ನು ಮರೆಮಾಚಲು ವೇದಿಕೆಗೆ, ಕಟ್ಟಡಕ್ಕೆ ವಿದ್ಯುತ್ ದೀಪಾಲಂಕಾರ. ಸಾಧನೆಯ ಶೂನ್ಯತೆಯನ್ನು ಮುಚ್ಚಿಹಾಕಲು ಪ್ರಚಾರದ ಆರ್ಭಟ ಎಂದು ಕುಟುಕಿದ್ದಾರೆ.

ಸಾಧನೆ ತೋರಿಸಲು ಆಗಲಿಲ್ಲ, ಸಿಂಗಾರ ತೋರಿಸುತ್ತಿದ್ದೀರಾ. ಅಭಿವೃದ್ಧಿ ತೋರಿಸಲು ಆಗಲಿಲ್ಲ, ದೀಪಾಲಂಕಾರ ತೋರಿಸುತ್ತಿದ್ದೀರಾ. ಆಡಳಿತ ತೋರಿಸಲು ಆಗಲಿಲ್ಲ, ಆಡಂಬರ ತೋರಿಸುತ್ತಿದ್ದೀರಾ. ಕೆಲಸ ಶೂನ್ಯ, ಪ್ರಚಾರ ಭರಪೂರ. ಸಾಧನೆ ಶೂನ್ಯ, ಸಡಗರ ಭರ್ಜರಿ. ಜನರ ಸಂಕಷ್ಟ ಅಪಾರ. ಸರ್ಕಾರದ ಸಂಭ್ರಮ ಅದ್ದೂರಿ. ರಾಜ್ಯ ಬೆಳಗಲಿಲ್ಲ. ನಿಮ್ಮ ವೇದಿಕೆ ಬೆಳಗಿತು. ಜನರ ಬದುಕು ಬದಲಾಗಲಿಲ್ಲ. ನಿಮ್ಮ ಪ್ರಚಾರ ಮಾತ್ರ ಕಂಗೊಳಿಸಿತು. ಇದು ಶತದಿನೋತ್ಸವವಲ್ಲ, ಸಾಧನೆಯ ಶೂನ್ಯತೆಯನ್ನು ದೀಪಾಲಂಕಾರದ ಹಿಂದೆ ಮುಚ್ಚುವ ವ್ಯರ್ಥ ಪ್ರದರ್ಶನ. ಯಾವ ಸಾಧನೆಗೆ ಈ ಸಂಭ್ರಮ? ಯಾವ ಸಾಧನೆಗೆ ಈ ಸಡಗರ ನಾಚಿಕೆಯಾಗಬೇಕು ಕಾಂಗ್ರೆಸ್ ಸರ್ಕಾರಕ್ಕೆ ಎಂದು ಆರ್?.ಅಶೋಕ್? ಟೀಕಿಸಿದ್ದಾರೆ.

# ಪಡಿತರ ಇ–ಕೆವೈಸಿಗೆ ಸರ್ವರ್ ಕಾಟ: ನ್ಯಾಯಬೆಲೆ ಅಂಗಡಿಗಳ ಮುಂದೆ ಪಡಿತರರ ಪರದಾಟ




ಹಾವೇರಿ: ಜಿಲ್ಲೆಯ ನ್ಯಾಯಬೆಲೆ ಅಂಗಡಿಗಳ ಮುಂದೆ ಇದೀಗ ಪಡಿತರರ ಉದ್ದನೆಯ ಸಾಲು ಕಾಣಿಸಲಾರಂಭಿಸಿದೆ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಆದೇಶದಂತೆ ಕೆವೈಸಿ ಮಾಡಿಸಲು ಮನೆಯಲ್ಲಿನ ಹಿರಿಯರು ಮಕ್ಕಳನ್ನು ಕರೆದುಕೊಂಡು ರೇಷನ್ ಅಂಗಡಿಗೆ ಬಂದರೆ ರೇಷನ್ ಅಂಗಡಿಯಲ್ಲಿ ದಿನಗಟ್ಟಲೇ ಕುಳಿತುಕೊಳ್ಳುವ ಅನಿವಾರ್ಯತೆ ಎದುರಾಗಿದೆ.

ಇಲಾಖೆ ಆದೇಶದನ್ವಯ ಪಡಿತರ ಕಾರ್ಡ್?ನಲ್ಲಿರುವ ಎಲ್ಲ ಸದಸ್ಯರು ತಾವು ಪಡಿತರ ಪಡೆಯುವ ಅಂಗಡಿಗೆ ಬಂದು ಇ–ಕೆವೈಸಿ ಮಾಡಿಸಬೇಕು. ತಮ್ಮ ರೇಷನ್ ಕಾರ್ಡ್‌ಗೆ ಆಧಾರ ಕಾರ್ಡ್ ಲಿಂಕ್ ಮಾಡಿಸಬೇಕು. ಜೊತೆಗೆ ಬಯೋಮೆಟ್ರಿಕ್ ಮಾಡಿಸಬೇಕು. ಪಡಿತರ ಇ–ಕೆವೈಸಿ ತೆಗೆದುಕೊಳ್ಳುವ ಸರ್ವರ್ ಸಮಸ್ಯೆಯಾಗಿದೆ. ಸರ್ವರ್ ನಿಧಾನಗತಿಯಲ್ಲಿ ಕೆಲಸ ಮಾಡುತ್ತಿದ್ದು, ರೇಷನ್ ಅಂಗಡಿ ಮಾಲೀಕರು ದಿನಕ್ಕೆ ಬೆರಳೆಣಿಕೆಯಷ್ಟು ಜನರ ಇ–ಕೆವೈಸಿ ಮಾಡಿಸಲು ಮಾತ್ರ ಸಾಕಾಗುತ್ತಿದೆ. ಇದರಿಂದ ಕೆಲಸ ಬಿಟ್ಟು ಇ–ಕೆವೈಸಿಗೆ ದಿನನಿತ್ಯ ಸರತಿಯಲ್ಲಿ ನಿಲ್ಲುವುದೇ ಕೆಲಸವಾಗಿದೆ ಎಂದು ಪಡಿತರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತಂತೆ ಮಾತನಾಡಿದ ಪಡಿತರ ಫಲಾನುಭವಿ ಉಮಾ ಪಾಟೀಲ್, ಕಳೆದ ಎರಡು ದಿನಗಳಿಂದ ಪಡಿತರ ಅಂಗಡಿಗೆ ಬರುತ್ತಿದ್ದೇವೆ. ಸರ್ವರ್ ಬಹಳ ಸ್ಲೋ ಇದೆ ಎನ್ನುತ್ತಿದ್ದಾರೆ. ನಸುಕಿನ ಮೂರು ಗಂಟೆಯಿಂದಲೇ ಸರತಿಯಲ್ಲಿ ನಿಂತಿದ್ದೇವೆ. ನಮ್ಮಂತಹ ವಯೋವೃದ್ಧರಿಗೆ ಬಹಳ ತ್ರಾಸ ಆಗುತ್ತದೆ. ಏನು ಮಾಡಬೇಕು ಅಂತ ಗೊತ್ತಾಗುತ್ತಿಲ್ಲ. ಇಲ್ಲಿ ಕೆವೈಸಿ ಮಾಡಿಸಲು ಬಂದಿದ್ದೇವೆ. ಅಲ್ಲಿ ಆಧಾರ್ ಕಾರ್ಡ್ ಮಾಡಿಸಿಕೊಂಡು ಬಂದಿದ್ದೇವೆ. ಇಲ್ಲಿ ಬಯೋಮೆಟ್ರಿಕ್ ಮಾಡಿಸಲು ಬಂದಿದ್ದೇವೆ. ಮುಂಜಾನೆ 8 ಗಂಟೆಗೆ ನ್ಯಾಯಬೆಲೆ ಅಂಗಡಿಯವರು ಬಂದಿದ್ದಾರೆ. ಇಲ್ಲಿಯವರೆಗೆ ಕೇವಲ ಐದು ಜನರದು ಬಯೋಮೆಟ್ರಿಕ್ ಆಗಿದೆ. ಇಲ್ಲಿಗೆ ಬರಲು ಎರಡು ದಿನ ಆಗಿದ್ದು, ಸರ್ವರ್ ಇಲ್ಲ. ರೇಷನ್ ಅಂಗಡಿ ಮಾಲೀಕರಾದರೂ ಏನು ಮಾಡಬೇಕು ಎಂದು ತಿಳಿಸಿದರು.

ಈ ಕುರಿತಂತೆ ಮಾತನಾಡಿದ ಬಸವರಾಜ್, ಮುಂಜಾನೆ ಆರು ಗಂಟೆಗೇ ಕೆವೈಸಿ ಮಾಡಿಸಲು ಬಂದಿದ್ದೇವೆ. ಇಲ್ಲಿಯವರೆಗೆ ಸರತಿ ಹಚ್ಚಿದವರಲ್ಲಿ ಎರಡ್ಮೂರು ಜನರ ಕೆವೈಸಿ ಮಾತ್ರ ಆಗಿದೆ. ಕೆವೈಸಿ ಮಾಡಿಸಲು ಕೊನೆ ದಿನಾಂಕ ಹೇಳಿಲ್ಲ. ಮತ್ತು ರೇಷನ್ ಕೊಡಲು ಆರಂಭಿಸಿದರೆ ಕೆವೈಸಿ ಮಾಡಿಸುವುದು ಬಂದ್ ಮಾಡುತ್ತೇವೆ ಎಂದು ರೇಷನ್ ಅಂಗಡಿಯವರು ಹೇಳುತ್ತಿದ್ದಾರೆ. ಸರ್ಕಾರದವರು ಮತ್ತೆ ಯಾವಾಗ ಹೇಳುತ್ತಾರೋ ಆವಾಗ ಆರಂಭಿಸುತ್ತೇವೆ ಎನ್ನುತ್ತಿದ್ದಾರೆ. ಶನಿವಾರ ಬಂದಿದ್ದೆವು ಆಗಲಿಲ್ಲ. ಮತ್ತು ಶಾಲೆ ಹುಡುಗರಿಗೆ ರಜೆ ಹಾಕಿಸಿಕೊಂಡು ಬಂದಿದ್ದೇವೆ ಎಂದು ತಿಳಿಸಿದರು.

ಸೆಪ್ಟಂಬರ್ 30 ಕೊನೆಯ ದಿನಾಂಕ: ಈ ರೀತಿ ಪಡಿತರ ಇ–ಕೆವೈಸಿ ಮಾಡಿಸಲು ಸೆಪ್ಟಂಬರ್ 30 ಕೊನೆಯ ದಿನವಾಗಿದೆ. ಅಷ್ಟರಲ್ಲಿ ಪಡಿತರ ಅಂಗಡಿಯವರು ರೇಷನ್ ಸಹ ವಿತರಿಸಬೇಕು. ರೇಷನ್ ಬಂದರೆ ವಿತರಣೆ ಮಾಡುವಾಗ ಕೆವೈಸಿ ಮಾಡುವುದಿಲ್ಲ ಎಂದು ರೇಷನ್ ಅಂಗಡಿ ಮಾಲೀಕರು ಹೇಳುತ್ತಿದ್ದಾರೆ. ಇನ್ನೂ ಕೆಲವರು ಕೆವೈಸಿ ಮಾಡಿಸದಿದ್ದರೆ ನಿಮಗೆ ಬರುವ ಪಡಿತರ ಮುಂದಿನ ತಿಂಗಳಿಂದ ಸಿಗಲ್ಲ ಎಂದು ವದಂತಿ ಹಬ್ಬಿಸಿದ್ದಾರೆ. ಇದರಿಂದ ಆತಂಕಗೊಂಡ ಪಡಿತರರು ರೇಷನ್ ಅಂಗಡಿ ಮುಂದೆ ನಿಂತು ಕೆವೈಸಿ ಮಾಡಲು ದಾವಿಸುತ್ತಿದ್ದಾರೆ.ಕೆವೈಸಿಗೆ ಹೋದರೆ ಸರ್ವರ್ ವೇಗವಾಗಿ ಕಾರ್ಯನಿರ್ವಹಿಸುತ್ತಿಲ್ಲ. ದಿನಕ್ಕೆ ಬೆರಳೆಣಿಕೆಯಷ್ಟು ಪಡಿತರರ ಕೆವೈಸಿ ಮಾಡಿದರೆ ಉಳಿದ ಪಡಿತರರು ಏನು ಮಾಡಬೇಕು ಎಂದು ಪಡಿತರರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಇನ್ನೂ ಕೆಲವರು ರೇಷನ್ ಅಂಗಡಿ ಮುಂದೆ ನಿಂತು ದಿನ ಕಳೆಯುತ್ತಿದ್ದಾರೆ. ಗಂಟೆಗೆ ಒಬ್ಬರ ಕೆವೈಸಿ ಸಹ ಆಗುತ್ತಿಲ್ಲ. ಕೆಲಸ ಬಿಟ್ಟು ಇಲ್ಲಿಗೆ ಬಂದರೆ ಈ ರೀತಿ ವಿಳಂಬವಾಗುತ್ತಿದೆ ಎಂದು ಪಡಿತರರು ದೂರಿದ್ದಾರೆ.

ಹಾವೇರಿ ಆಹಾರ ಇಲಾಖೆ ಉಪನಿರ್ದೇಶಕ ಮಂಜುನಾಥ್ ಮಾತನಾಡಿ, ಈ ಸಮಸ್ಯೆ ರಾಜ್ಯಾದ್ಯಂತ ಇದೆ. ರಾಜ್ಯದೆಲ್ಲೆಡೆ ಕೆವೈಸಿ ಮಾಡುತ್ತಿರುವ ಕಾರಣ ಸರ್ವರ್ ಡೌನ್ ಇದೆ. ಇ–ಕೆವೈಸಿಗೆ ಪ್ರತ್ಯೇಕವಾದ ಅಪ್ಲಿಕೇಶನ್ ಸಿದ್ಧಪಡಿಸಲಾಗುತ್ತಿದೆ. ಹೊಸದಾಗಿ ಅಪ್ಲಿಕೇಶನ್ ಸಿದ್ಧವಾದರೆ ಎರಡ್ಮೂರು ದಿನಗಳಲ್ಲಿ ಹೊಸ ಮಾಡಲ್ ಬರಲಿದೆ. ಹೊಸ ಅಪ್ಲಿಕೇಶನ್ ಸಿದ್ಧವಾಗುತ್ತಿದ್ದು, ಟೆಸ್ಟಿಂಗ್ ನಡೀತಿದೆ ಎಂದು ಹೇಳಿದರು.

ರಾಜ್ಯದೆಲ್ಲೆಡೆ ಇ–ಕೆವೈಸಿ ಮಾಡುತ್ತಿರುವ ಹಿನ್ನೆಲೆ ನಾಲ್ಕೈದು ದಿನಗಳಿಂದ ಸರ್ವರ್? ಸ್ಲೋ ಆಗುತ್ತಿದೆ. ಸರ್ವರ್ ಸ್ಲೋ ಆಗುತ್ತಿರುವ ವಿಷಯ ಇಲಾಖೆಯ ಗಮನದಲ್ಲಿದೆ. ಹಾವೇರಿ ಜಿಲ್ಲೆಯಲ್ಲಿ 8,23,206 ಜನ ಪಡಿತರರಿದ್ದಾರೆ. ಅದರಲ್ಲಿ ಇಲ್ಲಿಯವರೆಗೆ 1.30 ಲಕ್ಷ ಜನರು ಇ–ಕೆವೈಸಿ ಮಾಡಿಸಿಕೊಂಡಿದ್ದಾರೆ. ರೇಷನ್ ಅಂಗಡಿ ಮಾಲೀಕರಿಗೆ ಈ ಕುರಿತಂತೆ ಮಾರ್ಗದರ್ಶನ ನೀಡಿದ್ದೇವೆ. ರೇಷನ್ ಅಂಗಡಿ ಮಾಲೀಕರು ಇ–ಕೆವೈಸಿಗೆ ಬಂದವರಿಗೆ ಟೋಕನ್ ನೀಡುವ ವ್ಯವಸ್ಥೆ ಮಾಡಬೇಕು. ದಿನಗಟ್ಟಲೆ ಪಡಿತರರನ್ನು ಕೂರಿಸಿಕೊಳ್ಳದಂತೆ ಹೇಳಿದ್ದೇವೆ ಎಂದರು.

ಅಲ್ಲದೆ ಮೊಬೈಲ್‌ನಲ್ಲಿ ಸಹ ಕೆವೈಸಿ ಮಾಡುವ ಕುರಿತಂತೆ ಅಪ್ಲಿಕೇಶನ್ ಸಿದ್ಧವಾಗುತ್ತಿದೆ. ಪಡಿತರರು ಮೊಬೈಲ್‌ನಲ್ಲಿಯೇ ಕೆವೈಸಿ ಮಾಡಿಕೊಳ್ಳಬಹುದು. ಸಮಯ ಇದ್ದವರು ರೇಷನ್ ಅಂಗಡಿಗೆ ಹೋಗಿ ಇ–ಕೆವೈಸಿ ಮಾಡಿಸಿಕೊಳ್ಳಬಹುದು. ಇ–ಕೆವೈಸಿ ಮಾಡಿಸದೆ ಇದ್ದರೆ ಮುಂದಿನ ದಿನಗಳಲ್ಲಿ ರೇಷನ್ ನೀಡುವುದಿಲ್ಲ ಅಂತ ನಿಯಮವಿಲ್ಲ. ಆದರೆ ಕೆವೈಸಿ ಮಾಡಿಸದವರು ಪಡಿತರ ಪಡೆಯಲು ಅನರ್ಹರೆಂದೇ ಅರ್ಥ. ಈ ಹಿನ್ನೆಲೆಯಲ್ಲಿ ಅವರಿಗೆ ಮುಂದಿನ ದಿನಗಳಲ್ಲಿ ರೇಷನ್ ಬಂದ್ ಆಗಬಹುದು. ಸರ್ಕಾರ ನೀಡುವ ಮಾರ್ಗದರ್ಶನದಂತೆ ನಾವು ಕ್ರಮ ಕೈಗೊಳ್ಳುತ್ತೇವೆ. ಜಿಲ್ಲೆಯಲ್ಲಿ ಇದುವರೆಗೂ ಪ್ರತಿಶತ 17ರಷ್ಟು ಪಡಿತರರು ಕೆವೈಸಿ ಮಾಡಿಸಿದ್ದಾರೆ ಎಂದು ತಿಳಿಸಿದರು.

# ಮೈಸೂರು ದಸರಾ ದೀಪಾಲಂಕಾರ ವೀಕ್ಷಿಸಲು ಅಂಬಾರಿ ಬಸ್ ಸೇವೆ ಸಜ್ಜು



ಮೈಸೂರು: ವಿಶ್ವಪ್ರಸಿದ್ಧ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ವಿದ್ಯುತ್ ದೀಪಾಲಂಕಾರವನ್ನು ಡಬಲ್ ಡೆಕ್ಕರ್ ಅಂಬಾರಿ ಬಸ್ ಮೂಲಕ ವೀಕ್ಷಿಸುವ ಸುವರ್ಣಾವಕಾಶ ಪ್ರವಾಸಿಗರಿಗೆ ಈ ಬಾರಿಯೂ ದೊರೆಯಲಿದೆ. ಈ ಹಿನ್ನಲೆಯಲ್ಲಿ ಕೆಎಸ್‌ಟಿಡಿಸಿ ಈ ಬಾರಿಯ ದಸರಾ ಉತ್ಸವದಲ್ಲಿ ಒಟ್ಟು 6 ಡಬಲ್ ಡೆಕ್ಕರ್ ಅಂಬಾರಿ ಬಸ್‌ಗಳನ್ನು ನಿಯೋಜಿಸುತ್ತಿದ್ದು, ದೀಪಾಲಂಕಾರ ಚಾಲನೆಗೊಂಡ ದಿನದಿಂದ 21 ದಿನಗಳ ಕಾಲ ಈ ಸೇವೆ ಲಭ್ಯವಿರಲಿದೆ. ಪ್ರತಿಯೊಂದು ಬಸ್‌ನಲ್ಲಿ 47 ಆಸನಗಳಿದ್ದು, ಸಂಜೆಯಿಂದ ರಾತ್ರಿಯವರೆಗೆ 3 ಟ್ರಿಪ್‌ಗಳನ್ನು ನಡೆಸಲು ಚಿಂತನೆ ನಡೆಸುತ್ತಿದೆ. ಹಾಗಾದ್ರೆ ಅಂಬಾರಿ ಬಸ್ ಸೇವೆಯ ಟೈಮಿಂಗ್ಸ್ ಹಾಗೂ ಟಿಕೆಟ್ ದರ ಎಷ್ಟಿರಬಹುದು ಎಂಬುದರ ಮಾಹಿತಿ ಇಲ್ಲಿದೆ..

ಮೈಸೂರು ದಸರೆಯ ದೀಪಾಲಂಕರ ಕಣ್ತುಂಬಿಕೊಳ್ಳಲು ಅಂಬಾರಿ ಬಸ್ ಸೇವೆ ಸಜ್ಜು ದಸರಾ ದೀಪಾಲಂಕಾರ ಸವಿಯಲು ನಿತ್ಯ ಸಂಜೆ 6.30, 8 ಹಾಗೂ 9.30ಕ್ಕೆ 3 ಟ್ರಿಪ್‌ಗಳನ್ನು ನಡೆಸುವ ಚಿಂತನೆ, ಟಿಕೆಟ್ ದರ ಎಷ್ಟಿರಬಹುದು 6 ಅಂಬಾರಿ ಡಬಲ್ ಡೆಕ್ಕರ್ ಬಸ್‌ಗಳ ಮೂಲಕ ಪ್ರವಾಸಿಗರು ಹಾಗೂ ಪ್ರಯಾಣಿಕರಿಗೆ ಮೈಸೂರಿನ ರಾಜಬೀದಿಗಳಲ್ಲಿ ಯಾತ್ರೆ ಮೈಸೂರು: ದಸರಾ ದೀಪಾಲಂಕಾರದ ಅಚ್ಚಳಿಯದ ನೆನಪುಗಳನ್ನು ನೀಡುವ ' ಅಂಬಾರಿ ಬಸ್ 'ನಲ್ಲಿ ಸುತ್ತಾಡುವ ಅವಕಾಶ ಈ ಬಾರಿಯೂ ಪ್ರವಾಸಿಗರಿಗೆ ಒದಗಿ ಬರಲಿದೆ.

ನಾನಾ ವರ್ಣಗಳಲ್ಲಿ ನಗರವನ್ನು ವಿಶಿಷ್ಟ ಅಲಂಕಾರದೊಂದಿಗೆ ಬೆಳಗುವ ದಸರಾ ದೀಪಾಲಂಕಾರವನ್ನು ನೋಡುವುದು, ಅದರಲ್ಲಿಯೂ ಡಬಲ್ ಡೆಕ್ಕರ್ ಬಸ್‌ನ ಚಾವಣಿಯಲ್ಲಿ ಕುಳಿತುಕೊಂಡು ಅರಮನೆ ಹಾಗೂ ರಾಜಬೀದಿಗಳ ಅಂದವನ್ನು ಕಣ್ತುಂಬಿಕೊಳ್ಳುವುದೇ ಒಂದು ಅವರ್ಣನೀಯ ಅನುಭವ. ಹೀಗೆ ದಸರಾ ಬೆಳಕಿನಲ್ಲಿ ಮೈಸೂರಿನ ಸೌಂದರ್ಯವನ್ನು ಸವಿಯಲು ಪ್ರವಾಸಿಗರು ಕಾತರರಾಗಿರುವ ನಡುವೆಯೇ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ) ತೆರೆದ ಚಾವಣಿಯ ಡಬಲ್ ಡೆಕ್ಕರ್ ಅಂಬಾರಿ ಬಸ್‌ಗಳನ್ನು ಸೇವೆಗೆ ಸಜ್ಜುಗೊಳಿಸುತ್ತಿದೆ. ಈ ಕುರಿತು ಮಾಹಿತಿ ನೀಡಿ ''ಕಳೆದ ದಸರಾ ವೇಳೆ 12 ಸಾವಿರಕ್ಕೂ ಅಧಿಕ ಪ್ರವಾಸಿಗರನ್ನು ಸೆಳೆದಿದ್ದ ಈ ವಿಶಿಷ್ಟ ನಗರ ಸವಾರಿ, ಈ ಬಾರಿಯೂ ಪ್ರವಾಸಿಗರ ಪ್ರಮುಖ ಆಕರ್ಷಣೆಯಾಗುವ ನಿರೀಕ್ಷೆ ಮೂಡಿಸಿದೆ. ದಸರಾ ವಿದ್ಯುತ್ ದೀಪಾಲಂಕಾರ ಹಾಗೂ ನಾನಾ ವಿನ್ಯಾಸಗಳ ಅಲಂಕಾರಕ್ಕೆ ವಿದ್ಯುತ್ ಸರಬರಾಜು ನಿಗಮ ಚಾಲನೆ ನೀಡಿದ ಬಳಿಕ 21 ದಿನಗಳ ಕಾಲ ಅಂಬಾರಿ ಬಸ್‌ಗಳ ಓಡಿಸಲು ಕೆಎಸ್‌ಟಿಡಿಸಿ ಯೋಜಿಸಿದೆ. ಒಟ್ಟು 6 ಬಸ್‌ಗಳನ್ನು ಮೈಸೂರಿನಲ್ಲಿ ಸೇವೆಗೆ ನಿಯೋಜಿಸಲು ಸಿದ್ಧತೆ ನಡೆಸಲಾಗಿದೆ'' ಎಂದು ಕೆಎಸ್‌ಟಿಡಿಸಿ ಮೈಸೂರು ವ್ಯವಸ್ಥಾಪಕ ಕೆ.ಆರ್. ಮಧುರಾಜ್ ತಿಳಿಸಿದ್ದಾರೆ.

ರಾತ್ರಿ ನಗರ ಪ್ರದಕ್ಷಿಣೆ ಒಂದು ಬಸ್‌ನಲ್ಲಿ 47 ಮಂದಿ ಕುಳಿತು ಪ್ರಯಾಣಿಸಬಹುದಾಗಿದೆ. ನಿತ್ಯ ಸಂಜೆ 6.30, 8 ಹಾಗೂ 9.30ಕ್ಕೆ 3 ಟ್ರಿಪ್‌ಗಳನ್ನು ನಡೆಸುವ ಉದ್ದೇಶವಿದೆ. ಕೆಳಗಿನ ಡೆಕ್‌ಗೆ 250 ರೂ. ಹಾಗೂ ಮೇಲಿನ ಡೆಕ್‌ಗೆ 500 ರೂ. ಟಿಕೆಟ್ ದರ ನಿಗದಿಪಡಿಸುವ ಸಾಧ್ಯತೆಯಿದೆ. ವಾರಾಂತ್ಯದಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗುವ ಹಿನ್ನೆಲೆಯಲ್ಲಿ ಮೂರು ಟ್ರಿಪ್ ನಡೆಸುವುದು ಕಷ್ಟವಾಗುವುದರಿಂದ ಎರಡು ಟ್ರಿಪ್‌ಗಳಿಗೆ ಮಾತ್ರ ಸೀಮಿತಗೊಳಿಸಲು ಉದ್ದೇಶಿಸಲಾಗಿದೆ.

6 ಬಸ್‌ಗಳ ಸೇವೆ: ಕೆಎಸ್‌ಟಿಡಿಸಿ ಬಳಿ ಒಟ್ಟು ಆರು ಅಂಬಾರಿ ಬಸ್‌ಗಳಿದ್ದು, ಸದ್ಯ ಒಂದು ಬಸ್ ಮೈಸೂರಿನಲ್ಲಿ ಹಾಗೂ ಬೆಂಗಳೂರಿನಲ್ಲಿ ಐದು ಬಸ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಮೈಸೂರಿನ ಬಸ್ ಅನ್ನು ಸರ್ವಿಸ್‌ಗಾಗಿ ತಯಾರಕರ ಬಳಿಗೆ ಕಳುಹಿಸಲಾಗಿದೆ. ದಸರಾ ವೇಳೆಗೆ ಆರು ಬಸ್‌ಗಳನ್ನೂ ಮೈಸೂರಿಗೆ ತರಲು ನಿಗಮ ಸಿದ್ಧತೆ ನಡೆಸಿದೆ.

# ರಥ ನಿರ್ಮಾಣಕ್ಕೆ ಗ್ರೀನ್ ಸಿಗ್ನಲ್!





ಶ್ರೀರಂಗಪಟ್ಟಣ: ಶಕ್ತಿಪೀಠಗಳಲ್ಲಿ ಒಂದಾದ 'ದ್ವೀಪಪಟ್ಟಣ' ಶ್ರೀರಂಗಪಟ್ಟಣದ ಗಂಜಾಂ ಶ್ರೀ ನಿಮಿಷಾಂಬ ದೇಗುಲಕ್ಕೆ ಇದೇ ಪ್ರಥಮ ಬಾರಿಗೆ ರಥವೊಂದು ಸಿದ್ದಗೊಳ್ಳುತ್ತಿದೆ. ಚಂದ್ರಶಾಲೆ ನಿರ್ಮಾಣದೊಂದಿಗೆ 1.55 ಕೋಟಿ ರೂ. ವೆಚ್ಚದಲ್ಲಿ ನೂತನ ರಥ ನಿರ್ಮಾಣಕ್ಕೂ ರಾಜ್ಯ ಸರ್ಕಾರ ಮಂಜೂರಾತಿ ನೀಡಿದೆ.

ಶ್ರೀ ನಿಮಿಷಾಂಬ ದೇಗುಲ ದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಲೇ ಇವೆ. ಈಗಾಗಲೇ ದೇಗುಲಕ್ಕೆ ಹೊಂದಿಕೊಂಡಂತಿರುವ ಕಾವೇರಿ ನದಿ ದಡದಲ್ಲಿ ಸುಂದರ ಸೋಪಾನಕಟ್ಟೆಯೂ ನಿರ್ಮಾಣವಾಗಿದೆ. ಯಾತ್ರಿ ನಿವಾಸ ಮತ್ತು ಅನ್ನದಾಸೋಹ ಭವನವೂ ತಲೆ ಎತ್ತಿದ್ದು, ನಿತ್ಯ ಮಧ್ಯಾಹ್ನ ವೇಳೆ ಸಾವಿರಾರು ಭಕ್ತರಿಗೆ ಅನ್ನದಾಸೋಹ ಮಾಡಲಾಗುತ್ತದೆ. ಕೆಲವು ದಿನಗಳ ಹಿಂದೆಯಷ್ಟೇ ದೇಗುಲದ ಪಾವಿತ್ರ್ಯತೆಯನ್ನು ಇನ್ನಷ್ಟು ಹೆಚ್ಚಿಸುವ ದೃಷ್ಟಿಯಿಂದ ದೇವಾಲಯದ ಸುತ್ತಲು 50 ಕೋಟಿ ರೂ. ವೆಚ್ಚದಲ್ಲಿ ವಿಜಯನಗರ ಶೈಲಿಯಲ್ಲಿ ಚಂದಶಾಲೆ(ಪೌಳಿ) ನಿರ್ಮಾಣಕ್ಕೂ ಸರ್ಕಾರ ಗ್ರೀನ್ ಸಿಗ್ನಲ್ ನೀಡಿತ್ತು. ಇದೀಗ ಬರೋಬ್ಬರಿ 1.55 ಕೋಟಿ ರೂ. ವೆಚ್ಚದಲ್ಲಿ ನೂತನ ರಥ ನಿರ್ಮಾಣಕ್ಕೂ ಸಮ್ಮತಿ ಸೂಚಿಸಿದೆ.

**ದೇವಿಯ ರಥೋತ್ಸವಕ್ಕೆ ಅನುಕೂಲ** ನೀಲನಕ್ಷೆಯನ್ನು ಸಿದ್ಧಪಡಿಸಲಾಗಿದ್ದು, ರಥ ನಿರ್ಮಾಣದ ಅಂದಾಜು ವೆಚ್ಚ ಪಟ್ಟಿ ತಯಾರಿಸುವಂತೆ ಲೋಕೋಪಯೋಗಿ ಇಲಾಖೆಗೆ ಪ್ರಸ್ತಾವನೆ ಕಳುಹಿಸಲಾಗಿದೆ. ಅದಕ್ಕೆ ಒಪ್ಪಿಗೆ ಪಡೆದು ದೇವಾಲಯದ ನಿಧಿಯ ಜತೆಗೆ ಭಕ್ತರಿಂದಲೂ ದೇಣಿಗೆ ಸಂಗ್ರಹಿಸಿ ರಥ ನಿರ್ಮಿಸಲು ದೇಗುಲದ ವ್ಯವಸ್ಥಾಪನಾ ಮಂಡಳಿ ನಿರ್ಧರಿಸಿದೆ. ರಥ ನಿರ್ಮಾಣದೊಂದಿಗೆ ದೇಗುಲದ ಆಕರ್ಷಣೆ ಇನ್ನಷ್ಟು ಹೆಚ್ಚಾಗಲಿದೆ.

**ನಾಲ್ಕು ಅಂತಸ್ತು, 32 ಅಡಿ ಎತ್ತರ:** 32 ಅಡಿ ಎತ್ತರದ ರಥವು 9 ಬಗೆಯ ಮರಗಳಿಂದ ನಿರ್ಮಾಣಗೊಳ್ಳಲಿದೆ. ಹೊನ್ನೆ, ಮತ್ತಿ, ದೇವದಾರು, ಶ್ರೀಗಂಧ, ಶಿವಾನಿ, ಜಾಲಿ, ಚಂಪ ಹಾಗೂ ನಂಜಲು ಜಾತಿಯ ಮರಗಳನ್ನು ರಥಕ್ಕೆ ಬಳಸಿ ಸುಂದರ ಹಾಗೂ ಜನಾಕರ್ಷಕವಾದ ರಥವನ್ನು ನಿರ್ಮಾಣ ಮಾಡಿಸಲು ತೀರ್ಮಾನಿಸಲಾಗಿದೆ. ನೆಲ ಮಟ್ಟದಿಂದ ದೇವಿಯ ಉತ್ಸವ ಮೂರ್ತಿಯನ್ನು ಕೂರಿಸುವ ಪೀಠದವರೆಗೆ 9 ಅಡಿ, ಪೀಠದಿಂದ ಮೇಲ್ಭಾಗಕ್ಕೆ 9 ಅಡಿ, ಗೋಪುರ 9 ಅಡಿ, ಗೋಪುರ ಮೇಲ್ಭಾಗದ ಕಳಸ 3.5 ಅಡಿ ಸೇರಿ ಒಟ್ಟು 32 ಅಡಿಯ ಎತ್ತರದ ರಥ ನಿರ್ಮಾಣವಾಗಲಿದೆ. ಶ್ರೀಗಂಧದ ಮರವನ್ನು ಶಾಸ್ತ್ರೋಕ್ತವಾಗಿ ಹಾಗೂ ತೇಗದ ಮರವನ್ನು ಅಲಂಕಾರಕ್ಕೆ ಬಳಸಲು ನಿರ್ಧರಿಸಲಾಗಿದೆ. ಜಾಲಿ ಮರದಿಂದ ರಥ ಚಕ್ರಗಳನ್ನು ಹಾಗೂ ನಂಜಲು, ಚಿಂಪ, ಮತ್ತಿ, ಶಿವಾನಿ ಬಾಕಿ ಉಳಿದ ಮರಗಳನ್ನು ರಥದ ಸುಂದರ ರಚನೆಗಾಗಿ ಬಳಕೆ ಮಾಡಲಾಗುತ್ತದೆ. ದೃಷ್ಟಿಗೊಂಬೆಯೂ ಇರುವಂತೆ ತಯಾರಿಸಿರುವ ರಥದ ನೀಲನಕ್ಷೆಯು ಭಕ್ತರನ್ನು ಸೆಳೆಯುತ್ತಿದೆ.

ಪಲ್ಲಕ್ಕಿಯಿಂದ ಬೃಹತ್ ರಥದವರೆಗೆ:ಈವರೆಗೆ ದೇವಿಯ ವರ್ಧಂತಿ ಮಹೋತ್ಸವ(ವಾರ್ಷಿಕ ಬ್ರಹೋತ್ಸವ)ದ ದಿನ ದೇವಾಲಯ ರಥ ಬೀದಿಯಲ್ಲಿ ಪಲ್ಲಕ್ಕಿಯಲ್ಲಿ ದೇವಿಯ ವಿಗ್ರಹವನ್ನು ಕೂರಿಸಿ ಮೆರವಣಿಗೆ ನಡೆಸಲಾಗುತ್ತಿತ್ತು. ಇದೀಗ ಹೊಸ ರಥ ನಿರ್ಮಾಣದ ಬಳಿಕ ದೇವಿಯ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿ ರಥೋತ್ಸವ ನಡೆಸಲಾಗುತ್ತದೆ. ನುರಿತ ರಥ ನಿರ್ಮಾಣ ಶಿಲ್ಪಿಯಿಂದ ಕತ್ತನೆ ಮಾಡಿಸಲು ದೇವಾಲಯ ವ್ಯವಸ್ಥಾಪನಾ ಸಮಿತಿ ಮುಂದಾಗಿದೆ.

"ಮುಂದಿನ ದಿನಗಳಲ್ಲಿ ನಂಜನಗೂಡು ಮಾದರಿಯಲ್ಲಿ ಶ್ರೀ ನಿಮಿಷಾಂಬ ದೇವಿಯ ರಥೋತ್ಸವವು ದೇಗುಲದ ರಥಬೀದಿಯಲ್ಲಿ ನಡೆಯಲಿದೆ. ದೇವರು ಒಳಭಾಗದಿಂದ ಹೊರಗಡೆ ಬಂದು ಪ್ರಕೃತಿಯನ್ನು ನೋಡಬೇಕು. ದೇವರ ದೃಷ್ಟಿ ಜನರಿಗೆ ಬೀಳಬೇಕು. ಜನರ ದೃಷ್ಟಿಯೂ ದೇವರ ಮೇಲೆ ಬೀಳಬೇಕೆಂಬ ಉದ್ದೇಶದಿಂದ ರಥೋತ್ಸವ ನೆರವೇರಿಸಲಾಗುತ್ತಿದೆ. ರಥೋತ್ಸವ ಆರಂಭವಾದರೆ ದೇವಾಲಯದಲ್ಲಿ ಉಯ್ಯಾಲೋತ್ಸವ, ತೆಪ್ಪೋತ್ಸವ, ಶಯನೋತ್ಸವ, ಪ್ರಾಕಾರೋತ್ಸವವೂ ಆರಂಭವಾಗಲಿದೆ."

# ನಕಲಿ ನೋಟು ತಯಾರಿಕಾ ಜಾಲ ಭೇದಿಸಿದ ಪೊಲೀಸರು



ರಾಮನಗರ: ನಗರದ ಜಿಗೇನಹಳ್ಳಿಯ ಹೊಸ ಬಡಾವಣೆಯಲ್ಲಿರುವ ನಿರ್ಮಾಣ ಹಂತದ ಮನೆಯಲ್ಲಿ ಸದ್ದಿಲ್ಲದೇ ಕಾರ್ಯಪ್ರವೃತ್ತವಾಗಿದ್ದ ನಕಲಿ ನೋಟು ತಯಾರಿಕಾ ಜಾಲವನ್ನು ಭೇದಿಸುವಲ್ಲಿ ಐಜೂರು ಠಾಣೆ ಪೊಲೀಸರು ಯಶಸ್ವಿಯಾಗಿದ್ದು, ಈ ಸಂಬಂಧ 7 ಮಂದಿಯನ್ನು ಬಂಧಿಸಿದ್ದಾರೆ.

ಈ ಜಾಲದಲ್ಲಿ ಹೊರ ರಾಜ್ಯದವರ ಜತೆಗೆ ಸ್ಥಳೀಯರೂ ಭಾಗಿಯಾಗಿದ್ದು, ಸ್ಥಳದಲ್ಲಿ ಪೊಲೀಸರು ಶೋಧಕಾರ್ಯ ಮುಂದುವರಿಸಿದ್ದಾರೆ. ಮನೆ ಮಾಲೀಕ ಸಂತೋಷ್, ಸಂಪತ್, ಗೋವಿಂದ ರಾಜ್, ರೇಣುಕರಾಜ್, ರಾಜೇಶ್, ಶಿವರಾಜ್ ಹಾಗೂ ಸತೀಶ್ ಬಂಧಿತರು. ಆರೋಪಿಗಳಿಂದ ನಕಲಿ ನೋಟು ತಯಾರಿಕೆಗೆ ಬಳಸುತ್ತಿದ್ದ ವಿಶೇಷ ಪೇಪರ್ ಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಸಂಪತ್ ಜಾಲದ ಸೂತ್ರದಾರ ಸಂಪತ್ ಎಂಬಾತ ಈ ಜಾಲದ ಸೂತ್ರದಾರನಾಗಿದ್ದು, ಕಮಿಷನ್ ಆಸೆಗಾಗಿ ಸಂತೋಷ್ ತನ್ನ ಮನೆಯನ್ನು ಈ ದಂಧೆಗೆ ನೀಡಿದ್ದ ಎನ್ನಲಾಗಿದೆ. ಮನೆಯಲ್ಲಿ ನಕಲಿ ನೋಟು ತಯಾರಿಕೆಯ ಚಟುವಟಿಕೆ ನಡೆಯುತ್ತಿರುವ ಬಗ್ಗೆ ಖಚಿತ ಮಾಹಿತಿ ಪಡೆದ ಐಜೂರು ಠಾಣೆ ಪೊಲೀಸರು ಸೋಮವಾರ ಸಂಜೆ ದಾಳಿ ನಡೆಸಿದ್ದು, ಆರೋಪಿಗಳು ಮಾಲು ಸಮೇತ ಸಿಕ್ಕಿಬಿದ್ದಿದ್ದಾರೆ.

**ಎಸ್‌ಪಿ ಭೇಟಿ, ಪರಿಶೀಲನೆ:**

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂಪತ್ ಎಂಬುವವನು ಈ ನಕಲಿ ನೋಟು ತಯಾರಿಕಾ ಜಾಲದ ಸೂತ್ರದಾರ ಎನ್ನುವುದು ತಿಳಿದುಬಂದಿದೆ. ಮನೆಯ ಮಾಲೀಕ ಸಂತೋಷ್ ಪಾತ್ರದ ಬಗ್ಗೆಯೂ ತನಿಖೆ ನಡೆಸಲಾಗಿದ್ದು, ಕಮಿಷನ್ ಆಸೆಗಾಗಿ ಆತ ಮನೆ ನೀಡಿದ್ದಾನೆ. ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದಾಗ ಆರೋಪಿಗಳು ಮಾಲು ಸಮೇತ ಸಿಕ್ಕಿಬಿದ್ದಿದ್ದಾರೆ ಎಂದು ತಿಳಿಸಿದರು.

**ಹೇಗೆ ನಡೆಯುತ್ತಿತ್ತು ನಕಲಿ ನೋಟುಗಳ ತಯಾರಿಕೆ:** ಬಿಳಿ ಪೇಪರ್ ಬಂಡಲ್‌ಗೆ ಕೆಮಿಕಲ್ ಲೇಪಿಸಿ, ಅದನ್ನು ನೋಟಿನ ಅಳತೆಗೆ ಕತ್ತರಿಸಿ ನಕಲಿ ನೋಟುಗಳನ್ನು ಸಿದ್ಧಪಡಿಸಲಾಗುತ್ತಿತ್ತು. ಒಟ್ಟು 5 ಲಕ್ಷ ರೂಪಾಯಿ ಮೌಲ್ಯದ ನಕಲಿ ನೋಟು ತಯಾರಿಕೆಗೆ ಅಗತ್ಯವಿರುವ ಪೇಪರ್‌ಗಳನ್ನು ಇಲ್ಲಿ ಸಿದ್ಧಪಡಿಸಲಾಗುತ್ತಿತ್ತು ಎಂದು ಎಸ್‌ಪಿ ಮಾಹಿತಿ ನೀಡಿದರು. ಇಲ್ಲಿ ತಯಾರಾಗುತ್ತಿದ್ದ ಪೇಪರ್‌ಗಳನ್ನು ಬೇರೆಡೆಗೆ ರವಾನಿಸಿ, ಅಲ್ಲಿ ಪೂರ್ಣ ಪ್ರಮಾಣದ ನಕಲಿ ನೋಟುಗಳನ್ನು ತಯಾರಿಸಲಾಗುತ್ತಿತ್ತು. ಈ ಜಾಲದ ಹಿಂದೆ ಮತ್ತಷ್ಟು ಮಂದಿ ಭಾಗಿಯಾಗಿರುವ ಸಾಧ್ಯತೆ ಇದ್ದು, ಪ್ರಕರಣದ ಕುರಿತು ತನಿಖೆ ಮುಂದುವರಿದಿದೆ ಎಂದು ಮಾಹಿತಿ ನೀಡಿದ್ದಾರೆ.

# ಮಳೆ ಕೊರತೆಯಿಂದ ನೆಲಕಚ್ಚಿದ ಬೆಳೆ, ಭದ್ರಾ ನೀರಿಗಾಗಿ ಕಾದು ಕುಳಿತ ರೈತರು





ದಾವಣಗೆರೆ: ನಮ್ಮ ಸುತ್ತಮುತ್ತಲಿನ ತಾಲೂಕು ಸೇರಿದಂತೆ ಜಿಲ್ಲೆಯಲ್ಲಿ ಬರ ತಾಂಡವಾಡುತ್ತಿದೆ. ಹಲವು ರೈತರು ಭತ್ತ, ಮೆಕ್ಕೆಜೋಳ, ರಾಗಿ, ಕಬ್ಬು ಬೆಳೆದಿದ್ದಾರೆ. ಆದರೆ, ನೀರಿಲ್ಲದೇ ಒಣಗುತ್ತಿವೆ. ಸರ್ಕಾರ ಕಾಲುವೆ ಮೂಲಕ ನೀರು ಕೊಡುವ ವ್ಯವಸ್ಥೆ ಮಾಡಬೇಕು. ನಾನು 10 ಎಕರೆ ಕಬ್ಬು ಹಾಕಿರುವೆ, 15 ಎಕರೆ ನಾಟಿ ಮಾಡಿರುವೆ, 3 ಎಕರೆ ಮೆಕ್ಕೆಜೋಳ, 3 ಎಕರೆ ಅಡಿಕೆ ಮಾಡಿರುವೆ. ಸದ್ಯಕ್ಕೆ ಬೋರ್?ವೆಲ್? ನೀರು ಬಳಸುತ್ತಿದ್ದೇವೆ. ಆದರೆ, ಭದ್ರಾ ಅಚ್ಚುಕಟ್ಟು ನೀರು ಹರಿಯದಿದ್ದರೆ ಅಂತರ್ಜಲ ಮಟ್ಟ ಪಾತಾಳ ಸೇರಲಿದೆ. ರಾಜ್ಯದಲ್ಲಿ ಮುಂಗಾರು ಕೈಕೊಟ್ಟಿದ್ದು, ರೈತರಿಗೆ ಬರದ ಬಿಸಿ ತಟ್ಟಿದೆ. ರಾಜ್ಯ ಸರ್ಕಾರ 89 ತೀವ್ರ ಬರ ಹಾಗೂ ಉಳಿದ 12 ತಾಲೂಕುಗಳನ್ನು ಸಾಧಾರಣ ಬರ ಎಂದು ವಿಂಗಡಿಸಿ ಒಟ್ಟು 101 ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿದೆ.

ಜಿಲ್ಲೆಯಲ್ಲಿ ಶೇ.30ರಷ್ಟು ಮಳೆ ಕೊರತೆಯಾಗಿದ್ದು, ಭೀಕರ ಬರಗಾಲ ಎದುರಿಸುವಂತಾಗಿದೆ. ಹಲವೆಡೆ ಅಂತರ್ಜಲ ಮಟ್ಟ ಕುಸಿತ ಹಾಗೂ ನೀರಿನ ಸಮಸ್ಯೆ ಎದುರಿಸಲಾಗುತ್ತಿದೆ. ರೈತರಿಗೆ ಬೆಳೆವಿಮೆ ಗಡುವು ವಿಸ್ತರಿಸಲಾಗಿದ್ದು, ಪರಿಹಾರಕ್ಕಾಗಿ ಶೀಘ್ರವೇ ಕೇಂದ್ರಕ್ಕೆ ಮನವಿ ಸಲ್ಲಿಸಲು ಸರ್ಕಾರ ತೆರೆಮರೆಯಲ್ಲಿ ಸಿದ್ಧತೆ ನಡೆಸಿದೆ. ಚನ್ನಗಿರಿ, ಹೊನ್ನಾಳಿ, ನ್ಯಾಮತಿ, ದಾವಣಗೆರೆ (ಮಧ್ಯಮ ಬರ) ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿದ್ದಾರೆ. ಇಲ್ಲಿ ಬಿತ್ತನೆ ಮಾಡಿದ್ದ ಬೆಳೆ ಭಾಗಶಃ ನೆಲಕಚ್ಚಿವೆ. ಹಲವು ರೈತರು ಮೆಕ್ಕೆಜೋಳ ಬದಲಾಗಿ ರಾಗಿ ಬೆಳೆದಿದ್ದಾರೆ. ಕೆಲವರು ಭತ್ತ ಬೆಳೆಯಲು ಭದ್ರೆಯ ನೀರಿಗಾಗಿ ಕಾದು ಕುಳಿತಿದ್ದಾರೆ. ಸದ್ಯ ಅಡಿಕೆಗೆ ನೀರಿನ ಅವಶ್ಯಕತೆ ಇದೆ. ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಕೊರತೆಯಾಗಿದೆ. ನಾಲ್ಕು ಬರಪೀಡಿತ ತಾಲೂಕುಗಳಲ್ಲಿರುವ ಕೆರೆಗಳಲ್ಲಿ ನೀರಿಲ್ಲ. ಎಲ್ಲವೂ ಭಣಗುಡುತ್ತಿವೆ. ಬೋರ್?ವೆಲ್?ಗಳಲ್ಲಿ ಅಂತರ್ಜಲ ಮಟ್ಟ ಪಾತಾಳ ಸೇರುತ್ತಿದೆ ಎಂದು ರೈತರು ತಮ್ಮ ಅಳಲು ತೋಡಿಕೊಳ್ಳುತ್ತಿದ್ದಾರೆ.

**ನಾಲ್ಕು ತಾಲೂಕುಗಳಲ್ಲಿ ಬರದ ಪರಿಸ್ಥಿತಿ:** ದಾವಣಗೆರೆ, ಚನ್ನಗಿರಿ, ನ್ಯಾಮತಿ, ಹೊನ್ನಾಳಿ ಭಾಗದ ಬಹುತೇಕ ಕೆರೆಗಳಿಗೆ ನೀರು ಬಾರದಿರುವುದು ಬರಕ್ಕೆ ಮತ್ತೊಂದು ಪ್ರಮುಖ ಕಾರಣವಾಗಿದೆ. ಶೇ.75ರಷ್ಟು ಮಳೆಯ ಕೊರತೆಯಾಗಿದೆ. ಭತ್ತ, ಅಡಿಕೆ, ಮೆಕ್ಕೆಜೋಳ ಜಿಲ್ಲೆಯ ಪ್ರಮುಖ ಬೆಳೆಗಳಾಗಿವೆ. ಭದ್ರಾ ಜಲಾಶಯದಲ್ಲಿ 178 ಅಡಿ ನೀರಿದ್ದರು ಕೂಡ ಕಾಲುವೆಗಳಿಗೆ ನೀರು ಹರಿಸಿಲ್ಲ. ಹಾಗಾಗಿ ಭತ್ತ ನಾಟಿ ಮಾಡಲಾಗುತ್ತಿಲ್ಲ. ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ನಾಟಿ ಆಗಬೇಕಿದೆ. ಕೇವಲ 20 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ನಾಟಿ ಆಗಿದೆ. ಮೆಕ್ಕೆಜೋಳ ಜಿಲ್ಲೆಯ ಪ್ರಮುಖ ಬೆಳೆ. ಇದಕ್ಕೆ ಸಮೃದ್ಧವಾಗಿ ಯೂರಿಯಾ ಹಾಗೂ ನೀರು ಬೇಕು. ಮಳೆ ಕೊರತೆಯಿಂದ ಹಾಕಿದ ಬೆಳೆ ಮೊಣಕೈ ಎತ್ತರಕ್ಕೂ ಬೆಳೆದಿಲ್ಲ. ಕೆಲವೆಡೆ ತೆನೆ ಬಿಟ್ಟಿದ್ದರೂ ಕೊಳೆತು ಹೋಗಿವೆ. ಕೆಲವೆಡೆ ಬೆಳೆಗೆ ಲದ್ದಿ ಹುಳು ಕಾಟ ಶುರುವಾಗಿದೆ. ಕಬ್ಬು ನಾಟಿ ಮಾಡಿದ್ದು, ಮೊಳಕೆ ಒಡೆದಿಲ್ಲ. ಈಗಾಗಲೇ ಬೆಳೆದ ಕಬ್ಬು ಫಸಲಿಗೂ ಬಂದಿಲ್ಲ. ತೋಟಗಾರಿಕೆ ಬೆಳೆಗಳು ಕೂಡ ನೆಲಕಚ್ಚಿವೆ. ತೆಂಗಿನ ಮರಗಳು ಒಣಗಿವೆ. ಅಡಿಕೆ ಮರಗಳು ನೀರಿಲ್ಲದೆ ಸೊರಗಿವೆ. ಈರುಳ್ಳಿ ಗಡ್ಡೆಯನ್ನೇ ಕಟ್ಟಿಲ್ಲ. ಬೆಳ್ಳುಳ್ಳಿಯ ಫಸಲು ಕೈಕೊಟ್ಟಿದೆ ಎಂದು ರೈತರು ತಾವು ಬೆಳೆದ ಬೆಳೆಗಳ ಪರಿಸ್ಥಿತಿ ಬಗ್ಗೆ ವಿವರಿಸಿದರು.

**ಮೇವಿಲ್ಲ, ಕುಡಿಯಲು ನೀರೂ ಇಲ್ಲ:** ಕಾಲುವೆ ಮೂಲಕ ನೀರು ಸಿಗದ ಹಿನ್ನೆಲೆ ಈ ಬಾರಿ ಭತ್ತ ನಾಟಿ ಮಾಡಲು ಮುಂದಾಗುತ್ತಿಲ್ಲ. ಹಾಗಾಗಿ ಜಾನುವಾರುಗಳಿಗೆ ಮೇವಿನ ಕೊರತೆ ಎದುರಾಗಬಹುದು. ಭತ್ತ ಬೆಳೆದಿದ್ದರೆ ಜಾನುವಾರುಗಳಿಗೆ ಹುಲ್ಲು ದೊರೆಯುತ್ತಿತ್ತು. ಆದರೆ, ಈ ಬಾರಿ ಮೇವಿಗಾಗಿ ಜಾನುವಾರುಗಳು ಜಮೀನುಗಳಲ್ಲಿ ಅಲೆಯುವ ಪರಿಸ್ಥಿತಿ ಉಂಟಾಗಬಹುದು. ಕೃಷಿ ಇಲಾಖೆ ರೈತರಿಗೆ ಮೆಕ್ಕೆಜೋಳ ಬದಲಿಗೆ 35 ಸಾವಿರ ಹೆಕ್ಟೇರ್?ನಲ್ಲಿ ರಾಗಿ ಬೆಳೆಯುವಂತೆ ಸಲಹೆ ನೀಡಿತ್ತು. ರಾಗಿ ಬೆಳೆದರೆ ದರ ಚೆನ್ನಾಗಿ ಸಿಗಲಿದೆ. ಜಾನುವಾರುಗಳಿಗೂ ಸುಲಭವಾಗಿ ಮೇವು ಸಿಗಲಿದೆ ಎಂದು ಸಲಹೆ ನೀಡಿತ್ತು. ಈ ಕಷ್ಟದ ನಡುವೆಯೂ ಜಾನುವಾರುಗಳನ್ನು ರೈತರು ಗೋಶಾಲೆಗೆ ಕಳುಹಿಸದೆ ತಾವೇ ಪೋಷಣೆ ಮಾಡುತ್ತಿದ್ದಾರೆ. ಹೊನ್ನಾಳಿ-ನ್ಯಾಮತಿ ಬಹುತೇಕ ಕೆರೆಗಳಿಗೆ ಅಲ್ಪಸ್ವಲ್ಪ ನೀರು ಬಂದಿದ್ದು, ಬಿಟ್ಟರೆ ಉಳಿದು ಕೆರೆಗಳಿಗೆ ನೀರು ಬಂದಿಲ್ಲ. ಸಾಸ್ವೆಹಳ್ಳಿ ಹಾಗೂ ಉಬ್ರಾಣಿ ಏತನೀರಾವರಿ ಯೋಜನೆಯಿಂದ ಚನ್ನಗಿರಿಯ ಬೆರಳಣಿಕಯಷ್ಟು ಕೆರೆಗಳಿಗೆ ನೀರು ಬಂದಿದೆ. ದಾವಣಗೆರೆ ತಾಲೂಕಿನ 22 ಕೆರೆ ತುಂಬಿಸುವ ಯೋಜನೆಯಿಂದ ಕೆರೆಗಳು ನೀರು ಕಂಡಿಲ್ಲ. ಹಾಗಾಗಿ ಕೆರೆಗಳು ಒಣಗುತ್ತಿವೆ. ಚನ್ನಗಿರಿ ತಾಲೂಕಿನ ಎಲೊದಹಳ್ಳಿ, ದಾಗಿನಕಟ್ಟೆ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಎದುರಾಗಿದೆ. ನೀರಿಗಾಗಿ ಪರದಾಡುವ ಪರಿಸ್ಥಿತಿ ಇದೆ ಎಂದು ಗ್ರಾಮಸ್ಥರು ಅಳಲು ತೋಡಿಕೊಂಡಿದ್ದಾರೆ.

**ನಮ್ಮ ಭಾಗದ ಕೆರೆಗಳು ನೀರಿಲ್ಲದೆ ಭಣಗುಡುತ್ತಿವೆ:** ರೈತ ಬಸವರಾಜ್ ಕೂಲಂಬಿ ಮಾತನಾಡಿ, "ನಾವು ಹೊನ್ನಾಳಿ-ನ್ಯಾಮತಿಯ ಕುಂದೂರು, ಕೂಲಂಬಿ ಭಾಗದ ರೈತರು. ನಾವು ಕಾಲುವೆ ನೀರಿನ ಆಶ್ರಯದಲ್ಲಿ ಬೆಳೆ ಬೆಳೆಯುತ್ತೇವೆ. ಮಳೆ ಇಲ್ಲದೆ, ಕಾಲುವೆಯಲ್ಲಿ ನೀರಿಲ್ಲದ ಕಾರಣ ಈ ಭಾಗದ ರೈತರು ಕಂಗಾಲಾಗಿದ್ದಾರೆ. ಹೇಳಿಕೊಳ್ಳುವಂತಹ ಬೆಳೆಗಳು ಕೈ ಸೇರಿಲ್ಲ. ನೀರಿಲ್ಲದ ಕಾರಣ ಗದ್ದೆಯಲ್ಲಿ ಭತ್ತದ ನಾಟಿ ಮಾಡಿಲ್ಲ. ತಿಮ್ಲಾಪುರ, ತರಗನಹಳ್ಳಿ ಸೇರಿದಂತೆ ಹೊನ್ನಾಳಿ ಭಾಗ ಡ್ರೈಲ್ಯಾಡ್ ಆಗಿದ್ದರಿಂದ ಮಳೆ ಇಲ್ಲದ ಕಾರಣ ಬಿತ್ತನೆ ಆಗಿಲ್ಲ. ಮಾಸಡಿ, ಕತ್ತಿಗೆ, ಚೀಲೂರು, ಕೂಲಂಬಿ, ಗೋವಿನಕೋವಿ, ಹಿರೇಗೋಣಿಗೆರೆ, ಕೋಣನತಲೆಯ ಕೆರೆಗಳಲ್ಲಿ ನೀರಿಲ್ಲ. ಜಾನುವಾರುಗಳಿಗೆ ನೀರು ಮತ್ತು ಮೇವು ಇಲ್ಲದೆ ಸೊರಗಿ ಹೋಗಿವೆ. ನೀರು ಇಲ್ಲದ್ದರಿಂದ ನಾವು ಕೂಡ ಭತ್ತದ ನಾಟಿ ಮಾಡಿಲ್ಲ" ಎಂದು ಬೇಸರ ಹೊರಹಾಕಿದರು.

**ಮಳೆ ಇಲ್ಲ, ಬೆಳೆ ಇಲ್ಲ, ಜಾನುವಾರುಗಳಿಗೆ ಮೇವಿಲ್ಲ:** ತುಂಬಿಗೆರೆ ಗ್ರಾಮದ ರೈತ ದಿನೇಶ್ ದೊಡ್ಡಗೌಡ್ರು ಮಾತನಾಡಿ, "ಈ ವರ್ಷ ದಾವಣಗೆರೆ ತಾಲೂಕಿನಲ್ಲಿ ಕಡಿಮೆ ಮಳೆ ಬಿದ್ದಿದೆ. ಪರಿಣಾಮ ಬಿತ್ತನೆ ಕುಂಠಿತವಾಗಿದೆ. ಬಿತ್ತಿದ ಬೆಳೆ ಒಣಗುತ್ತಿವೆ. ಕೆರೆ ಕಟ್ಟೆಗಳಲ್ಲಿ ನೀರಿಲ್ಲದ ಕಾರಣ ದನಕರುಗಳಿಗೆ ಸೇವಿಸಲು ಮೇವಿಲ್ಲ. ಕುಡಿಯಲು ನೀರಿಲ್ಲದಂತಾಗಿದೆ. ತಕ್ಷಣ ಸರ್ಕಾರ ಮಧ್ಯಪ್ರವೇಶ ಮಾಡಿ ರೈತರನ್ನು ಹಾಗೂ ಅವರ ಜಾನುವಾರುಗಳನ್ನು ಉಳಿಸುವ ಕೆಲಸ ಮಾಡಬೇಕು" ಎಂದು ಒತ್ತಾಯಿಸಿದರು.

## ಮೆಕ್ಕೆಜೋಳಕ್ಕೆ ಲದ್ದಿ ಹುಳು ಕಾಟ

"ಮಳೆ ಕೊರತೆ ಕಾರಣ ಲದ್ದಿ ಹುಳು ಕಾಟ ಹೆಚ್ಚಾಗಿದೆ. ರೈತರಿಗೆ ಔಷಧಿ ಶಿಫಾರಸು ಮಾಡಿ ಅದನ್ನು ಹತೋಟಿಗೆ ತಂದಿದ್ದೇವೆ. ಸರಿಸುಮಾರು 4 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಈ ಲದ್ದಿ ಹುಳು ಕಾಟ ಎದುರಾಗಿತ್ತು. ಡ್ಯಾಂನಿಂದ ನೀರು ಹರಿಸಿಲ್ಲ. ನಾಲ್ಕು ತಾಲೂಕುಗಳು ಡ್ಯಾಂ ಮೇಲೆ ಅವಲಂಬಿತ ಆಗಿವೆ. ಶೇಂಗಾ, ರಾಗಿ, ತೊಗರಿ, ಅವರೆ, ಹತ್ತಿ ಮುಂಗಾರು ಬೆಳೆಗಳು ಆಗಿದ್ದರಿಂದ ಏನು ಸಮಸ್ಯೆ ಇಲ್ಲ. ಫಸಲು ಕೈ ಸೇರಲಿದೆ. ಭತ್ತ, ಮೆಕ್ಕೆಜೋಳ ಹೆಚ್ಚು ಬೆಳೆಯುತ್ತಿದ್ದರು. ಈ ಬಾರಿ ಅದು ಗಣನೀಯವಾಗಿ ಕಡಿಮೆ ಆಗಿದೆ. ಕೆಲ ಕೆರೆಗಳು ತುಂಬಿವೆ, ಹೀಗಾಗಿ ಕೆಲ ಬೆಳೆಗಳಿಗೆ ಉಪಯೋಗವಾಗುತ್ತಿದೆ. ಮುಂಗಾರು ಮುಗಿಯುತ್ತ ಬಂದಿದೆ. ಇದೀಗ ಹಿಂಗಾರು ಆರಂಭ ಆಗಲಿದೆ. ಅದ್ದರಿಂದ ರೈತರು ಕುಸುಬೆ, ಕಡಲೆ, ಜೋಳ, ಸೂರ್ಯಕಾಂತಿ ಸಹ ಬೆಳೆಯಬಹುದು" ಎಂದು ಜೆಡಿ ಅವರು ರೈತರಿಗೆ ಮಾಹಿತಿ ನೀಡಿದರು.

## ಜಿಲ್ಲೆಯನ್ನು ಬರ ಎಂದು ಘೋಷಿಸಿ

"ಮೆಕ್ಕೆಜೋಳ, ಭತ್ತಕ್ಕೆ ಭದ್ರಾ ನೀರಿಲ್ಲ. ಬೆಳೆಗಳನ್ನು ಉಳಿಸಿಕೊಳ್ಳಲು ಕಾಲುವೆಗಳಿಗೆ ನೀರು ಹರಿಸಬೇಕು. ಸದ್ಯ ಬೆಳೆಗೆ ಬೋರ್???ವೆಲ್ ಮೂಲಕ ನೀರು ಕೊಡುತ್ತಿದ್ದೇವೆ. ಕೊಳವೆಬಾವಿ ಕೈಕೊಟ್ರೆ ನಮ್ಮ ಕಷ್ಟ ಹೇಳತೀರದು. ಇಡೀ ಜಿಲ್ಲೆಯನ್ನು ಬರ ಪೀಡಿತ ಜಿಲ್ಲೆ ಅಂತ ಘೋಷಣೆ ಮಾಡಬೇಕು. ಭದ್ರಾ ಅಚ್ಚುಕಟ್ಟು ಪ್ರದೇಶಕ್ಕೆ ಭದ್ರಾ ನೀರು ಹರಿಸಿದ್ದರೆ ನಮಗೆ ಈ ಪರಿಸ್ಥಿತಿ ಬರುತ್ತಿರಲಿಲ್ಲ" ಎಂದು ಆತಂಕ ವ್ಯಕ್ತಪಡಿಸಿದರು.

# ಹಳೇತಿಮ್ಮನಹಳ್ಳಿಯಲ್ಲಿ ಭಕ್ತರ ಒಗ್ಗಟ್ಟಿನ ಫಲವಾಗಿ ಜೀರ್ಣೋದ್ಧಾರ





ಮಧುಗಿರಿ :ದೇವಾಲಯಗಳು ಕೇವಲ ಪೂಜಾ ಸ್ಥಳಗಳಲ್ಲ, ಮನುಷ್ಯನಲ್ಲಿ ಭಕ್ತಿ, ಶ್ರದ್ಧೆ, ದಯೆ, ಪ್ರೀತಿ ಹಾಗೂ ಹಿರಿಯರನ್ನು ಗೌರವಿಸುವಂತಹ ದೈವೀ ಗುಣಗಳನ್ನು ಬೆಳೆಸುವ ಆಧ್ಯಾತ್ಮಿಕ ಕೇಂದ್ರಗಳಾಗಿವೆ. ಹಳೇತಿಮ್ಮನಹಳ್ಳಿ ಗ್ರಾಮಸ್ಥರು ಹಾಗೂ ಭಕ್ತರು ಒಗ್ಗಟ್ಟಿನಿಂದ ಕೈಗೊಂಡಿರುವ ಶ್ರೀ ಬಸವೇಶ್ವರ ದೇವಾಲಯದ ಜೀರ್ಣೋದ್ಧಾರ ಕಾರ್ಯವು ಶ್ಲಾಘನೀಯವಾಗಿದ್ದು, ಶಿಲಾ ಮಂಟಪ ಸೇರಿದಂತೆ ಕಲ್ಲಿನಿಂದ ನಿರ್ಮಿಸಿರುವ ದೇವಾಲಯವು ಹಲವು ತಲೆಮಾರುಗಳವರೆಗೆ ಉಳಿಯುವಂತಹ ಶಾಶ್ವತ ನಿರ್ಮಾಣವಾಗಿದೆ ಎಂದು ಸಿದ್ದರಬೆಟ್ಟದ ಬಾಳೆಹೊನ್ನೂರು ಮಠದ ಪೀಠಾಧ್ಯಕ್ಷರಾದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಪುರವರ ಹೋಬಳಿಯ ಹಳೇತಿಮ್ಮನಹಳ್ಳಿ ಗ್ರಾಮದಲ್ಲಿ ಶ್ರೀ ಬಸವೇಶ್ವರ ಜೀರ್ಣೋದ್ಧಾರ ಹಾಗೂ ಮಹಾಗಣಪತಿ, ಸುಬ್ರಹ್ಮಣ್ಯ, ಪಾರ್ವತಿ-ಪರಮೇಶ್ವರ, ಆದಿತ್ಯಾದಿ ನವಗ್ರಹ, ಧ್ವಜಸ್ತಂಭ, ಶಿಖರ, ಕಳಸ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶಿಲಾ ಮಂಟಪ, ಕಲ್ಲಿನ ಬಾಗಿಲುಗಳು, ಗೋಪುರ, ಧ್ವಜಸ್ತಂಭ, ಕಳಸ, ನವಗ್ರಹ ಪ್ರತಿಷ್ಠಾಪನೆ ಹಾಗೂ ಗರ್ಭಗುಡಿಯ ಸುತ್ತಲಿನ ಆವರಣ ಸೇರಿದಂತೆ ದೇವಾಲಯಕ್ಕೆ ಅಗತ್ಯವಿರುವ ಎಲ್ಲ ಕಾಮಗಾರಿಗಳನ್ನು ಪರಿಪೂರ್ಣವಾಗಿ ಕೈಗೊಳ್ಳಲಾಗಿದೆ. ಇಂತಹ ದೇವಾಲಯದ ಜೀರ್ಣೋದ್ಧಾರದಲ್ಲಿ ಭಾಗವಹಿಸಿರುವುದು ಭಕ್ತರ ಜೀವನದ ಪುಣ್ಯದ ಕಾರ್ಯವಾಗಿದ್ದು, ಮುಂದಿನ ಐದಾರು ತಲೆಮಾರುಗಳಿಗೂ ಈ ದೇವಾಲಯ ಭಕ್ತಿ ಹಾಗೂ ಸಂಸ್ಕೃತಿಯ ಕೇಂದ್ರವಾಗಿ ಉಳಿಯಲಿದೆ ಎಂದರು. ದೇವಾಲಯ ನಿರ್ಮಾಣದ ಜೊತೆಗೆ ಮಕ್ಕಳಲ್ಲಿ ಬಾಲ್ಯದಿಂದಲೇ ದೇವರ ಸ್ಮರಣೆ, ದೇವಾಲಯಕ್ಕೆ ತೆರಳಿ ನಮಸ್ಕರಿಸುವುದು, ತಂದೆ-ತಾಯಿಯನ್ನು ಗೌರವಿಸುವುದು ಹಾಗೂ ಉತ್ತಮ ಸಂಸ್ಕಾರಗಳನ್ನು ಬೆಳೆಸುವ ಜವಾಬ್ದಾರಿ ಪೋಷಕರ ಮೇಲಿದೆ. ತಾಯಿಯೇ ಮಗುವಿನ ಮೊದಲ ಗುರು ಹಾಗೂ ಮನೆಯೇ ಮೊದಲ ಪಾಠಶಾಲೆಯಾಗಿರುವುದರಿಂದ, ಮಕ್ಕಳಲ್ಲಿ ದೈವೀ ಗುಣಗಳು ಬೆಳೆಸುವಂತಹ ವಾತಾವರಣವನ್ನು ಮನೆಯಲ್ಲಿ ನಿರ್ಮಿಸಬೇಕು ಎಂದು ಸಲಹೆ ನೀಡಿದರು. ದೇವಾಲಯದ ಜೀರ್ಣೋದ್ಧಾರ ಹಾಗೂ ಧಾರ್ಮಿಕ ಕಾರ್ಯಗಳಿಗೆ ಹಲವು ದಾನಿಗಳು ಶ್ರದ್ಧೆಯಿಂದ ನೆರವು ನೀಡಿದ್ದು, ಅವರ ಸೇವೆ ಶ್ಲಾಘನೀಯವಾಗಿದೆ. ದಾನಿಗಳು, ಗ್ರಾಮಸ್ಥರು ಹಾಗೂ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲ ಭಕ್ತರಿಗೂ ದೇವರು ಆಯುಷ್ಯ, ಆರೋಗ್ಯ ಹಾಗೂ ಸುಖ-ಸಮೃದ್ಧಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸಿದ ಅವರು, ಮುಂದಿನ ಪೀಳಿಗೆಯವರೂ ದೇವಾಲಯದ ಧಾರ್ಮಿಕ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಬೇಕು ಎಂದು ಆಶಿಸಿದರು.

ಎಲೆರಾಂಪುರ ಮಠದ ಪೀಠಾಧ್ಯಕ್ಷರಾದ ಡಾ. ಶ್ರೀ ಹನುಮಂತನಾಥ ಮಹಾಸ್ವಾಮೀಜಿ ಮಾತನಾಡಿ, ಮಕ್ಕಳ ಮನಸ್ಸಿನಲ್ಲಿ ಚಿಕ್ಕ ವಯಸ್ಸಿನಿಂದಲೇ ದ್ವೇಷವನ್ನು ಬಿತ್ತುವ ಬದಲು ಪ್ರೀತಿ, ಸಹೋದರತ್ವ, ಮಾನವೀಯತೆ ಹಾಗೂ ಹಿರಿಯರನ್ನು ಗೌರವಿಸುವ ಸಂಸ್ಕಾರವನ್ನು ಬೆಳೆಸಬೇಕು. ಪೋಷಕರು ನಡೆದುಕೊಳ್ಳುವ ರೀತಿ ಹಾಗೂ ಮನೆಯಲ್ಲಿ ನಡೆಯುವ ವಿಚಾರಗಳು ಮಕ್ಕಳ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರುವುದರಿಂದ, ಮಕ್ಕಳಿಗೆ ಉತ್ತಮ ಆದರ್ಶವಾಗುವಂತೆ ಪೋಷಕರು ನಡೆದುಕೊಳ್ಳಬೇಕು ಎಂದು ಹೇಳಿದರು.

ಇಂದಿನ ದಿನಗಳಲ್ಲಿ ಶಿಕ್ಷಣವೆಂದರೆ ಕೇವಲ ಅಂಕ, ಪದವಿ ಹಾಗೂ ಹಣ ಗಳಿಸುವುದಕ್ಕೆ ಸೀಮಿತವಾಗಬಾರದು. ಮಣ್ಣು, ನೀರು, ಪರಿಸರ, ಬಡವರ ಬದುಕು ಹಾಗೂ ಸಾಮಾಜಿಕ ಜವಾಬ್ದಾರಿಯ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವ ಮೌಲ್ಯಾಧಾರಿತ ಶಿಕ್ಷಣ ಅಗತ್ಯವಾಗಿದೆ. ಮಕ್ಕಳು ವಿದ್ಯಾವಂತರಾಗುವುದರ ಜೊತೆಗೆ ಉತ್ತಮ ಮಾನವರಾಗಿ ಬೆಳೆದು, ತಂದೆ-ತಾಯಿಯನ್ನು ವೃದ್ಧಾಪ್ಯದಲ್ಲಿ ಗೌರವದಿಂದ ನೋಡಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಡಾ. ಬಿ.ಆರ್. ಅಂಬೇಡ್ಕರ್, ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸ, ಶಂಕರಾಚಾರ್ಯ ಹಾಗೂ ಮಹಾತ್ಮ ಗಾಂಧೀಜಿ ಸೇರಿದಂತೆ ಸಮಾಜಕ್ಕಾಗಿ ಬದುಕಿದ ಮಹನೀಯರ ಆದರ್ಶಗಳನ್ನು ಮಕ್ಕಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಮಾಜದ ಒಳಿತಿಗಾಗಿ ಸೇವಾ ಮನೋಭಾವ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ತಿಳಿಸಿದರು.

ಶ್ರೀ ಶ್ರೀ ರಾಮಾನಂದ ಜೀ ಚೈತನ್ಯ ಸ್ವಾಮೀಜಿ ಮಾತನಾಡಿ, ದೇವಾಲಯಗಳು ನಮ್ಮ ಧಾರ್ಮಿಕ ನಂಬಿಕೆ ಹಾಗೂ ಸಂಸ್ಕೃತಿಯ ಪ್ರತೀಕಗಳಾಗಿದ್ದು, ಅವುಗಳ ಜೀರ್ಣೋದ್ಧಾರ ಮತ್ತು ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಭಕ್ತರು ಒಗ್ಗಟ್ಟಿನಿಂದ ಕೈಜೋಡಿಸಿ ದೇವಾಲಯದ ಅಭಿವೃದ್ಧಿಗೆ ಶ್ರಮಿಸುವ ಮೂಲಕ ಮುಂದಿನ ಪೀಳಿಗೆಗೂ ನಮ್ಮ ಧಾರ್ಮಿಕ ಪರಂಪರೆಯನ್ನು ಉಳಿಸಿ ಬೆಳೆಸಬೇಕು ಎಂದು ಹೇಳಿದರು. ದೇವಾಲಯದ ಧಾರ್ಮಿಕ ಚಟುವಟಿಕೆಗಳಲ್ಲಿ ಮಕ್ಕಳು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಪೋಷಕರು ಪ್ರೋತ್ಸಾಹಿಸಬೇಕು. ಭಕ್ತಿ, ಸಂಸ್ಕಾರ, ಮಾನವೀಯತೆ ಹಾಗೂ ಸೇವಾ ಮನೋಭಾವವನ್ನು ಬೆಳೆಸಿಕೊಂಡು ಸಮಾಜದ ಒಳಿತಿಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದರು.

ಮಾಜಿ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಹಾಲಪ್ಪ ಪ್ರತಿಷ್ಠಾನದ ಅಧ್ಯಕ್ಷ ಮುರಳಿಧರ ಹಾಲಪ್ಪ ಮಾತನಾಡಿ ದೇವಸ್ಥಾನದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸು ತ್ತಿರುವುದು ಸಂತಸದ ಸಂಗತಿಯಾದರೂ, ಮಕ್ಕಳು, ಯುವಕರು ಹಾಗೂ ಪುರುಷರೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತಾಗಬೇಕು. ಮುಂದಿನ ಪೀಳಿಗೆಗೆ ನಮ್ಮ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಪರಿಚಯಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಹೇಳಿದರು. ಹಳೇತಿಮ್ಮನಹಳ್ಳಿಯ ಪುರಾತನ ದೇವಾಲಯವು ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ್ದು, ಗ್ರಾಮಸ್ಥರ ಒಗ್ಗಟ್ಟಿನ ಪ್ರಯತ್ನದಿಂದ ಇದೀಗ ಸುಂದರವಾಗಿ ಜೀರ್ಣೋದ್ಧಾರಗೊಂಡಿದೆ. ದೇವಸ್ಥಾನದೊಂದಿಗೆ ಯುವಜನರನ್ನು ಮತ್ತಷ್ಟು ಬೆಸೆಯಲು ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಪದವಿ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡುವ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪ್ರೋತ್ಸಾಹಿಸುವ ಕಾರ್ಯ ಕೈಗೊಳ್ಳಬೇಕು. ಇಂತಹ ವಿದ್ಯಾರ್ಥಿ ಪ್ರೋತ್ಸಾಹ ಕಾರ್ಯಕ್ರಮಗಳಿಗೆ ಮಹಾಲಕ್ಷ್ಮೀ ಪ್ರತಿಷ್ಠಾನದ ವತಿಯಿಂದ, ತಮ್ಮ ತಂದೆ ಡಾ. ಹಾಲಪ್ಪ ಅವರ ಹೆಸರಿನಲ್ಲಿ ಅಗತ್ಯ ಸಹಕಾರ ನೀಡುವುದಾಗಿ ತಿಳಿಸಿದರು. ದೇವಸ್ಥಾನ ಹಾಗೂ ಧಾರ್ಮಿಕ ಕಾರ್ಯಗಳ ಮೂಲಕ ಯುವಜನರಲ್ಲಿ ಉತ್ತಮ ಸಂಸ್ಕಾರ, ಭಕ್ತಿ ಹಾಗೂ ಸಾಮಾಜಿಕ ಜವಾಬ್ದಾರಿ ಬೆಳೆಸಬೇಕು.

ಗ್ರಾಮಸ್ಥರು ಯಾವುದೇ ಸಮಸ್ಯೆಗಳನ್ನು ಹೊಂದಿದ್ದರೂ ಶ್ರೀಮಠದ ಹನುಮಂತನಾಥ ಮಹಾಸ್ವಾಮೀಜಿಯವರ ಮಾರ್ಗದರ್ಶನ ಪಡೆದು ಪರಿಹಾರದತ್ತ ಸಾಗಬಹುದು ಎಂದು ಮುರಳೀಧರ ಹಾಲಪ್ಪ ಹೇಳಿದರು.

ಪುರಾತನ ದೇವಾಲಯವು ಗ್ರಾಮಸ್ಥರ ಭಕ್ತಿ ಹಾಗೂ ಒಗ್ಗಟ್ಟಿನಿಂದ ಜೀರ್ಣೋದ್ಧಾರಗೊಂಡಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಹೊಂದಬೇಕು. ದೇವಸ್ಥಾನದ ಅಭಿವೃದ್ಧಿ ಹಾಗೂ ಧಾರ್ಮಿಕ ಚಟುವಟಿಕೆಗಳಿಗೆ ಗ್ರಾಮಸ್ಥರು ಮತ್ತು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆಯಲ್ಲಿದ ಕೊಂಡವಾಡಿ ಚಂದ್ರಶೇಖರ್, ಹಾಗೂ ಭಕ್ತಾದಿಗಳು ಹಳೇತಿಮ್ಮನಹಳ್ಳಿ ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಮತ್ತಿತರರಿದ್ದರು.

# ಗಣಪತಿ ಪ್ರತಿಷ್ಠಾಪನೆಗೆ ಅನುಮತಿ ಕಡ್ಡಾಯ





ತುಮಕೂರು: ಗಣಪತಿ ಹಬ್ಬವನ್ನು ಹಬ್ಬವಾಗಿ ಆಚರಿಸಲು ಪೊಲೀಸ್ ಇಲಾಖೆಯಿಂದ ಯಾವುದೇ ತೊಂದರೆಯಿಲ್ಲ. ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ನಡೆದುಕೊಂಡರೆ ಕಾನೂನಿನ ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕೆ.ವಿ. ಎಚ್ಚರಿಕೆ ನೀಡಿದ್ದಾರೆ. ನಗರದ ಚಿಲುಮೆ ಸಮುದಾಯಭವನದಲ್ಲಿ ಗೌರಿ ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಕರೆದಿದ್ದ ತುಮಕೂರು ತಾಲೂಕು ಗಣಪತಿ ಪ್ರತಿಷ್ಠಾಪನಾ ಸಮಿತಿಗಳ ಪಧಾಧಿಕಾರಿಗಳ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಡಿಜೆಗೆ,ಮಾಡಿಫೈಡ್ ವೆಹಿಕಲ್‌ಗಳಲ್ಲಿ ಬರುವ ಟ್ಯಾಬ್ಲೋಗಳಿಗೆ ಅವಕಾಶವಿಲ್ಲ.

ಒಂದು ಗಣಪತಿಗೆ ಎರಡು ಸ್ಪೀಕರ್ ಬಳಸಲು ಅವಕಾಶವಿದೆ. ಮನೆಯ ಒಳಗೆ ಪ್ರತಿಷ್ಠಾಪಿಸುವ ಗಣಪತಿಗಳನ್ನ ಹೊರತು ಪಡಿಸಿ,ಬಯಲಿನಲ್ಲಿ ಪೂಜಿಸುವ ಎಲ್ಲಾ ಗಣಪತಿಗಳಿಗೂ ಅನುಮತಿ ಕಡ್ಡಾಯ ಎಂದು ಸ್ಪಷ್ಟಪಡಿಸಿದರು.

ಡಿಜೆ ಬಳಸಲು ಸುಪ್ರಿಂ ಕೋರ್ಟ್ ನಿರ್ಭಂದಿಸಿದೆ.ಸಾರ್ವಜನಿಕ ಸ್ಥಳ, ಸ್ಕೂಲು, ಕಾಲೇಜು, ಆಸ್ಪತ್ರೆಗಳು ಹಾಗೂ ವ್ಯಾಪಾರಿ ಸ್ಥಳಗಳ ಮುಂದೆ ಜನರಿಗೆ ತೊಂದರೆಯಾಗದಂತೆ ಮೆರವಣಿಗೆ ಶಾಂತ ರೀತಿಯಿಂದ ನಡೆಯಬೇಕಿದೆ.ಮುಂಚೆಯೇ ಪೊಲೀಸ್ ಇಲಾಖೆಗೆ ತಿಳಿಸಿದರೆ,ಉತ್ಸವದ ದಿನ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಇಲಾಖೆ ತೆಗೆದುಕೊಂಡು,ಗಣೇಶ ಮೆರವಣಿಗೆ ಸುಗಮವಾಗಿ ಸಾಗಲು ಅನುವು ಮಾಡಿಕೊಡಲಾಗುವುದು.ಹಾಗಾಗಿ ಗಣಪತಿ ವಿಸರ್ಜನೆಯ ದಿನಾಂಕ ಮತ್ತು ರೂಟ್ ಮ್ಯಾಪ್ ಮೊದಲೇ ತಿಳಿಸಿದರೆ, ಸೂಕ್ತ ಬಂದೋಬಸ್ತ್ ನೆರವಾಗಲಿದೆ.ಸಾಮೂಹಿಕ ಗಣಪತಿ ವಿಸರ್ಜನೆಗೆ ಮುಂದಾದರೆ ಅದಕ್ಕೂ ಸಹ ಪೊಲೀಸ್ ಇಲಾಖೆ ಸಹಕರಿಸಲಿದೆ ಎಂದರು.

ಗಣಪತಿ ಪ್ರತಿಷ್ಠಾಪನೆಗೆ ಬೇಕಾದ ಎಲ್ಲಾ ಅನುಮತಿ ಗಳನ್ನು ಸಿಂಗಲ್ ವಿಂಡೋ(ಏಕಗವಾಕ್ಷಿ) ಮೂಲಕ ವಿತರಿಸಲು ಎಲ್ಲಾ ಕ್ರಮ ಕೈಗೊಳ್ಳಲಾ ಗಿದೆ. ಕೆ.ಇ.ಬಿ. ಅನುಮತಿಗೆ ಅವರು ಸ್ಥಳ ಪರಿಶೀಲನೆ ಮಾಡಬೇಕಿರುವುದರಿಂದ ಕೊಂಚ ವಿಳಂಬವಾಗಲಿದ್ದು, ಅವರಿಗೂ ಸಹ ನಿಗಧಿತ ಅವಧಿಯೊಳಗೆ ಅನುಮತಿ ನೀಡುವಂತೆ ಕೋರಲಾಗುವುದು ಎಂದ ಎಸ್.ಪಿ. ಅಶೋಕ್ ಕೆ.ವಿ., ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಬಿ.ಹೆಚ್.ರಸ್ತೆಯ ಎರಡು ಬದಿಯ ಕಟ್ಟಲು ಅವಕಾಶವಿದೆ.

ಇದಕ್ಕೆ ಸ್ಥಳೀಯ ಸಂಸ್ಥೆಯ ಪರವಾನಗಿ ಅಗತ್ಯ.ಆದರೆ ರಸ್ತೆಯ ಮಧ್ಯದಲ್ಲಿ ಕಟ್ಟಲು ಅವಕಾಶವಿಲ್ಲ ಮತ್ತು ಒಂದು ಧರ್ಮ,ಸಮುದಾಯವನ್ನು ಹಿಯಾಳಿಸುವ ನಿಷೇಧಿತ ಪದಗಳನ್ನು ಮುದ್ರಿಸುವಂತಿಲ್ಲ.ಈಗಾಗಲೇ ಮುದ್ರಕರ ಸಭೆಯಲ್ಲಿ ಅವರಿಗೆ ಸೂಚನೆ ನೀಡಲಾಗಿದೆ. ತಾವುಗಳು ಒಂದು ಸಮುದಾಯವನ್ನು ಗುರಿಯಾಗಿಸಿದ ಯಾವುದೇ ಫ್ಲೆಕ್ಸ್, ಬ್ಯಾನರ್ ಬಳಕೆ ಮಾಡುವಂತಿಲ್ಲ ಎಂದರು.

ಗಣಪತಿ ಪ್ರತಿಷ್ಠಾಪನೆ, ಉತ್ಸವ ಮತ್ತು ವಿಜರ್ಸನೆ ಸಂದರ್ಭದಲ್ಲಿ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗೆ ಹೆಚ್ಚಿನ ಗಮನವನ್ನು ಪೊಲೀಸ್ ಇಲಾಖೆ ಹರಿಸಲಿದೆ. ಆಯೋಜಕರು ನಿಗಾವಹಿಸಬೇಕು.ಗಣಪತಿ ಕೂರಿಸುವ ಸ್ಥಳದಲ್ಲಿ ಸಿಸಿಟಿವಿ ಕ್ಯಾಮರ ಕಡ್ಡಾಯ,ಇದರಿಂದ ಮುಂದಾಗಬಹುದಾದ ಅನಾಹುತ ತಪ್ಪಿಸಲು, ಹಾಗೂ ಆಗಿರಬಹುದಾದ ಅನಾಹುತಕ್ಕೆ ಕಾರಣ ಏನು ಎಂದು ತಿಳಿದುಕೊಳ್ಳಲು ಸಹಕಾರಿಯಾಗಲಿದೆ.

ಇದರಿಂದ ಪರಿಸ್ಥಿತಿಯ ಲಾಭ ಪಡೆದು ಸಮಾಜ ವಿದ್ರೋಹಿ ಶಕ್ತಿಗಳು ಲಾಭ ಪಡೆಯುವುದನ್ನು ತಡೆಗಟ್ಟಬಹುದು.ನಗರದಲ್ಲಿ ಸುಮಾರು 500ಕ್ಕೂ ಹೆಚ್ಚು ಕ್ಯಾಮರಗಳ ಮೂಲಕ ಪ್ರತಿಯೊಂದ ಏರಿಯಾದ ಚಲನವಲನಗಳನ್ನು ಪೊಲೀಸ್ ಇಲಾಖೆ ಗಮನಿಸುತ್ತಿದೆ.ಕುಡಿದು ಬಂದ ಗಲಾಟೆ ಮಾಡುವುದು, ಸಾರ್ವಜನಿಕರಿಗೆ ತೊಂದರೆ ನೀಡಿದರೆ ಕಾನೂನಿನ ಕುಣಿಕೆ ಬಿಗಿಯಾಗಲಿದೆ.ಗಣಪತಿ ಹಬ್ಬವನ್ನು ಶಾಂತವಾಗಿ, ಸಂತೋಷದಿಂದ ಎಲ್ಲರೂ ಹಬ್ಬದ ರೀತಿ ಆಚರಿಸಲು ಪೊಲೀಸ್ ಇಲಾಖೆಯ ಸಹಕಾರವಿದೆ ಎಂದು ಎಸ್.ಪಿ ಅಶೋಕ್ ಕೆ.ವಿ ತಿಳಿಸಿದರು.

ಎಎಪಿ ಗೋಪಾಲ್ ಪ್ರಾಸ್ತಾವಿಕವಾಗಿ ಮಾತನಾಡಿ, ಗಣಪತಿ ವಿಸರ್ಜನೆ, ಉತ್ಸವ ಮತ್ತು ವಿಸರ್ಜನೆ ಎಲ್ಲವೂ ಶಾಂತ ರೀತಿಯಲ್ಲಿ ನಡೆಯಬೇಕೆಂಬುದು ಪೊಲೀಸ್ ಇಲಾಖೆಯ ಆಶಯವಾಗಿದೆ.ಕಳೆದ ಮೂರು ವರ್ಷಗಳಿಂದ ಯಾವುದೇ ರೀತಿಯ ಅಹಿತಕರ ಘಟನೆಯಿಲ್ಲದೆ ನಡೆದುಕೊಂಡು ಬರುತ್ತಿದೆ. ಈ ವರ್ಷವೂ ಅದೇ ರೀತಿ ನಡೆಸಲು ಆಯೋಜಕರುಗಳು ಸಹಕರಿಸಬೇಕೆಂಬುದು ನಮ್ಮ ಮನವಿ.ಸೋಷಿಯಲ್ ಮೀಡಿಯಾದಲ್ಲಿ ಬರುವ ಕಂಟೆಂಟ್‌ಗಳನ್ನು ವೈರಲ್ ಮಾಡುವ ಮೊದಲು ಅದರ ಸೂಕ್ಷ್ಮ ಮತೆಯನ್ನು ಅರ್ಥ ಮಾಡಿಕೊಳ್ಳಬೇಕು.ಇಲ್ಲದಿದ್ದಲ್ಲಿ ತಪ್ಪಿಗೆ ಸಿಕ್ಕಿ ಹಾಕಿಕೊಳ್ಳುವ ಅಪಾಯವಿದೆ.ಪೊಲೀಸ್ ಇಲಾಖೆ ದಿನದ 24 ಗಂಟೆಗಳ ಕಾಲವೂ ನಿಮ್ಮೊಂದಿಗೆ ಕೆಲಸ ಮಾಡಲು ಸಿದ್ದವಿದೆ.ಸೂಕ್ಷ್ಮ ಮ ಸ್ಥಳಗಳಲ್ಲಿ ಮೆರವಣಿಗೆ ಸಾಗುವಾಗ ತಾಳ್ಮೆ ಇರಲಿ. ಪ್ರಚೋಧನೆಗೆ ಒಳಗಾಗುವುದು ಬೇಡ ಎಂದರು. ಸಭೆಯಲ್ಲಿ ತುಮಕೂರು ನಗರ ಡಿವೈಎಸ್ಪಿ ಚಂದ್ರಶೇಖರ್, ಗ್ರಾಮಾಂತರ ಡಿವೈಎಸ್ಪಿ ಪುಟ್ಟೇಗೌಡ ಹಾಗೂ ಪೊಲೀಸ್ ಸಿಬ್ಬಂದಿಗಳು,ವಿವಿಧ ಗಣಪತಿ ಪ್ರತಿಷ್ಠಾಪನಾ ಸಮಿತಿಗಳ ಆಯೋಜಕರುಗಳ ಭಾಗವಹಿಸಿದ್ದರು.

# ಆಧಾರ್-ಪಹಣಿ ಜೋಡಣೆ ಕಡ್ಡಾಯ



ಹುಳಿಯಾರು: ತಾಲ್ಲೂಕಿನ ಎಲ್ಲಾ ರೈತರು ತಮ್ಮ ಜಮೀನಿನ ಪಹಣಿಗಳನ್ನು ಎಫ್.ಐ.ಡಿ ಹಾಗೂ ಆಧಾರ್ ಸಂಖ್ಯೆಯೊಂದಿಗೆ ಕಡ್ಡಾಯವಾಗಿ ಜೋಡಣೆ ಮಾಡಿಸಬೇಕು ಎಂದು ಚಿಕ್ಕನಾಯಕನಹಳ್ಳಿ ಸಹಾಯಕ ಕೃಷಿ ನಿರ್ದೇಶಕರಾದ ಎಚ್. ಎಸ್.ಶಿವರಾಜ್ ಕುಮಾರ್ ತಿಳಿಸಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸೌಲಭ್ಯಗಳು ನೇರವಾಗಿ ರೈತರಿಗೆ ತಲುಪಲು ಈ ದಾಖಲಾತಿ ಅನಿವಾರ್ಯವಾಗಿದೆ. ಕೃಷಿ ಇಲಾಖೆಯ ವತಿಯಿಂದ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಇತರೆ ಕೃಷಿ ಪರಿಕರಗಳನ್ನು ಪಡೆಯಲು. ಬರಗಾಲದಂತಹ ತುರ್ತು ಪರಿಸ್ಥಿತಿಗಳಲ್ಲಿ ಸರ್ಕಾರದಿಂದ ಘೋಷಿಸುವ ಬೆಳೆ ಪರಿಹಾರಕ್ಕೆ ಅರ್ಜಿ ಸಲ್ಲಿಸಲು. ಪ್ರಧಾನಮಂತ್ರಿ ಫಾಸಲ್ ಬಿಮಾ ಯೋಜನೆಯಡಿ ಬೆಳೆ ವಿಮೆ ಪಾವತಿಸಲು ಹಾಗೂ ಕ್ಲೈಮ್ ಪಡೆಯಲು. ತೋಟಗಾರಿಕೆ, ಕಂದಾಯ, ಪಶುಸಂಗೋಪನೆ, ರೇಷ್ಮೆ, ಅರಣ್ಯ ಹಾಗೂ ಇತರೇ ಇಲಾಖೆಗಳಿಂದ ಸಿಗುವ ಸಹಾಯಧನ ಮತ್ತು ಸೌಲಭ್ಯಗಳನ್ನು ಪಡೆದುಕೊಳ್ಳಲು ಇದು ಅತ್ಯಗತ್ಯವಾಗಿದೆ. ಈ ಪ್ರಕ್ರಿಯೆಯು ಕಡ್ಡಾಯವಾಗಿದ್ದು, ತಾಲ್ಲೂಕಿನ ಸಮಸ್ತ ರೈತ ಭಾಂದವರು ಯಾವುದೇ ವಿಳಂಬವಿಲ್ಲದೆ ಆಧಾರ್ ಕಾರ್ಡ್ ಪ್ರತಿ, ಜಮೀನಿನ ಪಹಣಿ ಪತ್ರಿ, ಆಧಾರ್‌ಗೆ ಜೋಡಣೆಯಾಗಿರುವ ಸಕ್ರಿಯ ಮೊಬೈಲ್ ಸಂಖ್ಯೆ ಇರುವ ಮೊಬೈಲ್ ಫೋನ್ ನೊಂದಿಗೆ ತಮ್ಮ ಹೋಬಳಿ ವ್ಯಾಪ್ತಿಯ ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸುವಂತೆ ಶಿವರಾಜ್‌ಕುಮಾರ್ ತಿಳಿಸಿದ್ದಾರೆ .

# 24 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಹನಿ ನೀರಾವರಿ ವಿಫಲ




ಬೆಂಗಳೂರು: ಉತ್ತರ ಕರ್ನಾಟಕದ ಜೀವನಾಡಿಯಾದ ಕೃಷ್ಣಾ ಭಾಗ್ಯ ಜಲ ನಿಗಮದ (KBJNL) ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಅವರು ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿ, ಕಳಪೆ ಕಾಮಗಾರಿ ಸಹಿಸುವುದಿಲ್ಲ, ಗುಣಮಟ್ಟದಲ್ಲಿ ರಾಜಿ ಇಲ್ಲ ಎಂದು ಎಚ್ಚರಿಕೆ ನೀಡಿದರು. ಏಃಎಓಐ ವ್ಯಾಪ್ತಿಯ ವಿಜಯಪುರ, ಬಾಗಲಕೋಟೆ, ರಾಯಚೂರು, ಯಾದಗಿರಿ, ಕಲಬುರಗಿ, ಕೊಪ್ಪಳ, ಗದಗ ಸೇರಿದಂತೆ 7 ಜಿಲ್ಲೆ, 5 ವಲಯ, 46 ತಾಲೂಕು, 33 ವಿಧಾನಸಭಾ ಕ್ಷೇತ್ರಗಳ ಬೃಹತ್ ವ್ಯಾಪ್ತಿಯ ಸಮಗ್ರ ಮಾಹಿತಿ, ಸಿಬ್ಬಂದಿ ವಿವರ, ಕೆರೆ ತುಂಬಿಸುವ ಯೋಜನೆಗಳ ಬಗ್ಗೆ ಮಂಗಳವಾರ ನಡೆದ ಸಭೆಯಲ್ಲಿ ಸಚಿವರು ಮಾಹಿತಿ ಪಡೆದರು.

ಗುತ್ತಿಗೆದಾರರ ವಿರುದ್ಧ ಕ್ರಮ: 24 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಒದಗಿಸಲಾದ ಹನಿ ನೀರಾವರಿ ನಿರೀಕ್ಷಿತ ಯಶಸ್ಸು ಕಾಣದಿರುವ ಬಗ್ಗೆ ಸಚಿವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಗುತ್ತಿಗೆ ಪಡೆದವರು ಸರಿಯಾಗಿ ನೀರು ಪೂರೈಸುತ್ತಿಲ್ಲ, 5 ವರ್ಷಗಳ ನಿರ್ವಹಣಾ ನಿಯಮ ಉಲ್ಲಂಘಿಸುತ್ತಿದ್ದಾರೆ ಎಂದು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳೊಂದಿಗೆ ಖುದ್ದು ಸ್ಥಳ ಪರಿಶೀಲನೆ ನಡೆಸುವುದಾಗಿ ತಿಳಿಸಿದರು.

ಕೇವಲ ನ್ಯಾಯಾಲಯದ ನೆಪವೊಡ್ಡಿ ಕಾಮಗಾರಿ ವಿಳಂಬ ಮಾಡುವುದನ್ನು ಸಹಿಸುವುದಿಲ್ಲ. ಪ್ರತಿಯೊಂದು ಸಮಸ್ಯೆಗೂ ತ್ವರಿತ ಪರಿಹಾರ ಒದಗಿಸಲೇಬೇಕು ಎಂದು ಸಚಿವರು ಖಡಕ್ ನಿರ್ದೇಶನ ನೀಡಿದರು.

ಗಏಕ-3 ಗೆ 1.33 ಲಕ್ಷ ಹೆಕ್ಟೇರ್ ಭೂಸ್ವಾಧೀನ: ಕೃಷ್ಣಾ ಮೇಲ್ದಂಡೆ ಯೋಜನೆ (UKP-3) ಗಾಗಿ ಕಾಲುವೆ ಮತ್ತು ಹಳ್ಳಿಗಳು ಸೇರಿ ಒಟ್ಟು 1,33,887 ಹೆಕ್ಟೇರ್ ಭೂಸ್ವಾಧೀನದ ಬೃಹತ್ ಸವಾಲು ಇದ್ದು, ಇದರಿಂದ 100 ಟಿಎಂಸಿ ನೀರು ಶೇಖರಣೆ ಸಾಧ್ಯ. 184 ಗ್ರಾಮಗಳ ಪೈಕಿ 87 ಗ್ರಾಮಗಳಿಗೆ ಶೀಘ್ರ ನೋಟಿಫಿಕೇಷನ್ ಹೊರಡಿಸುವ ಪ್ರಕ್ರಿಯೆಯಲ್ಲಿ ಎದುರಾಗುವ ರಾಜಕೀಯ ಮತ್ತು ಸ್ಥಳೀಯ ಶಾಸಕರ ಒತ್ತಡಗಳಿಗೆ ಮಣಿಯಬೇಡಿ. ಕಾನೂನು ಪ್ರಕಾರವೇ ಭೂಸ್ವಾಧೀನ ನಡೆಯಬೇಕು.

## ಗುತ್ತಿಗೆದಾರರ ವಿರುದ್ಧ ಕ್ರಮಕ್ಕೆ ಸಚಿವ ಚಲುವರಾಯಸ್ವಾಮಿ ಸೂಚನೆ

ಈ ಕುರಿತು ಪ್ರಾದೇಶಿಕ ಆಯುಕ್ತರು ಮತ್ತು ಜನರಲ್ ಮ್ಯಾನೇಜರ್ ಜೊತೆ ವಿಶೇಷ ಸಭೆ ನಡೆಸುವುದಾಗಿ ತಿಳಿಸಿದರು.

UKP 1,2,3 ಹಂತದ ಕೋರ್ಟ್ ಕೇಸ್‌ಗಳನ್ನು ಶೀಘ್ರ ಇತ್ಯರ್ಥಪಡಿಸಲು ಪ್ರತ್ಯೇಕ ಕಡತ ಸಿದ್ಧಪಡಿಸಿ ಆರ್ಥಿಕ ನೆರವು ನೀಡಲಾಗುವುದು. ವಿಜಯಪುರ ಭಾಗದ ತೋಟಗಾರಿಕಾ ರೈತರಿಗೆ ನೀರಿನ ಕೊರತೆಯಾಗದಂತೆ ನೋಡಿಕೊಳ್ಳುವಂತೆ ಸೂಚಿಸಿದರು.

ನಂದವಾಡಗಿ, ಕೆರೂರು, ಬೂದಿಹಾಳ, ಭಗವತಿ, ಪಾಮನಕಲ್ಲೂರು, ಚಡಚಣ ಸೇರಿದಂತೆ ಏತ ನೀರಾವರಿ ಯೋಜನೆಗಳಿಗೆ ವೇಗ ನೀಡಬೇಕು, ಸ್ಥಗಿತಗೊಂಡ ಕಾಮಗಾರಿಗಳಿಗೆ ಮರು ಟೆಂಡರ್ ಕರೆದು ಸಾರ್ವಜನಿಕ ಹಣ ಪೋಲಾಗದಂತೆ ನೋಡಿಕೊಳ್ಳಬೇಕು. ಕೇಂದ್ರದಿಂದ ಬರಬೇಕಾದ ಅನುದಾನ ತರಲು ಶ್ರಮಿಸಬೇಕು. ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ಯಾಂತ್ರೀಕೃತ ಗೇಟ್ ಅಳವಡಿಸಿ ನೀರಿನ ದಕ್ಷತೆ ಹೆಚ್ಚಿಸಿರುವುದು ಹಾಗೂ ರೈತರು ಆ?ಯಪ್ ಮೂಲಕ ನೀರಿನ ಬೇಡಿಕೆ ಸಲ್ಲಿಸುವ ವ್ಯವಸ್ಥೆಯನ್ನು ಶ್ಲಾಘಿಸಿದರು.

ಕಳ್ಳಾಟ ಬಯಲಾದರೆ ಸುಮ್ಮನೆ ಬಿಡಲ್ಲ: "ಯಾವುದೇ ಸೇತುವೆ ಅಥವಾ ಕಾಮಗಾರಿಯ ಗುಣಮಟ್ಟದಲ್ಲಿ ರಾಜಿ ಇಲ್ಲ, ಅಂದಾಜು ಪಟ್ಟಿ ತಯಾರಿಸುವಾಗ ಎಚ್ಚರಿಕೆ ವಹಿಸಿ. ನಾನು ಪರಿಶೀಲನೆ ನಡೆಸಿದಾಗ ಅಧಿಕಾರಿಗಳ ಕಳ್ಳಾಟ ಬಯಲಾದರೆ ಸುಮ್ಮನೆ ಬಿಡುವ ಪ್ರಶ್ನೆಯೇ ಇಲ್ಲ. ಜಿಲ್ಲಾಡಳಿತಕ್ಕೆ ನೀಡಿದ ಸರ್ಕಾರಿ ಹಣದ ನಯಾ ಪೈಸೆಯೂ ದುರ್ಬಳಕೆಯಾಗಬಾರದು ಎಂದು ನೇರ ಎಚ್ಚರಿಕೆ ನೀಡಿದರು.

**ಗುತ್ತಿಗೆದಾರರಿಗೆ ಭರವಸೆ:** ನಂತರ ಗುತ್ತಿಗೆದಾರರೊಂದಿಗೆ ಸಮಾಲೋಚನೆ ನಡೆಸಿದ ಸಚಿವರು, ಅನುದಾನ ಬಿಡುಗಡೆ, ಶೇ.50 ಠೇವಣಿ, ಕಾರ್ಯಾದೇಶ ವಿಳಂಬ ಸಮಸ್ಯೆಗಳನ್ನು ಆಲಿಸಿ, "ನಾನು ಕೂಡ ಈ ಹಿಂದೆ ಗುತ್ತಿಗೆದಾರನಾಗಿದ್ದೆ, ನಿಮ್ಮ ಸಮಸ್ಯೆಗಳ ಅರಿವು ನನಗಿದೆ, ಶೀಘ್ರ ಬಗೆಹರಿಸುತ್ತೇನೆ ಎಂದು ಸಚಿವರು ಭರವಸೆ ನೀಡಿದರು.

Printed By: J AMBRISH, DEVANAHALLI TQ, BANGALORE RURAL DIST. PRINTED AT: KALYANI PRINTERS, GROUND FLOOR, FLAT NO. 12/1, 1ST CROSS ROAD, MYSURE ROAD, OLD TOLLGATE, NEAR BY GOPALAN MALL, BENGALURU, KARNATAKA-560026. Published & owned by RADHIKA A. R., D/O RAMAKRISHNAIAH, BEHAIND AC OFFICE, SWEET WATER BOREWELL ROAD, MADHUGIRI TALUK, TUMAKURU DIST. KARNATAKA PIN-572132, and published at TUMAKURU. BEHAIND AC OFFICE, SWEET WATER BORE WELL ROAD, MADHUGIRI, MADHUGIRI TALUK, TUMAKURU. DIST. KARNATAKA PIN-572132 Editor: RADHIKA A.R. ``KARNATAKA SUCCESS NO 1 '' KANNADA Daily News Paper